ಸಂಪುಟ: 13 Volume | ಸಂಚಿಕೆ: 281 Issue | ಪುಟಗಳು 08 Pages | ಶುಕ್ರವಾರ 26 ಡಿಸೆಂಬರ್ 2025 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**
ತಿರಸ್ಕಾರಕ್ಕೆ ತಿರಸ್ಕಾರವೇ ಮದ್ದಲ್ಲ ಪ್ರೀತಿಯೇ ದಿವ್ಯಾಷಧ.
–ಗೌತಮ ಬುದ್ಧ

ಜ್ಯುವೆಲರ್ಸ್ ಮೇಲೆ ಮತ್ತೆ ಎಸ್‌ಐಟಿ ದಾಳಿ 6 | ಆಧುನಿಕ ಭಾರತದ ಶಿಲ್ಪಿ ವಾಜಪೇಯಿ 7 | ಗಡಿನಾಡು ಕನ್ನಡ ದೀಪ ಲಿಂ. ಡಾ.ಚನ್ನಬಸವ ಪಟ್ಟದ್ದೇವರು 8



ಕನ್ನಡ ಚಿತ್ರರಂಗದಲ್ಲಿ ಅನೇಕ ಸೂಪರ್ ಹಿಟ್ ಚಿತ್ರಗಳನ್ನು ನಿರ್ಮಿಸಿರುವ ಎಂ.ಜಿ.ರಾಮಮೂರ್ತಿ ಅವರು ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕಾಗಿ ಸ್ಪರ್ಧಿಸುತ್ತಿದ್ದಾರೆ. ಇತ್ತೀಚೆಗೆ ಎಂ.ಜಿ.ರಾಮಮೂರ್ತಿ ನಾಮಪತ್ರ ಸಲ್ಲಿಸಿದ್ದರು. ಅವರ ಅನೇಕ ಮಿತ್ರರು ಉಪಸ್ಥಿತರಿದ್ದರು.



ಕೇಂದ್ರ ಸರಕಾರದ ಮಾನ್ಯ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿ ಎಚ್.ಡಿ. ಕುಮಾರಸ್ವಾಮಿ ಅವರು ದಾವಣಗೆರೆ ನಗರಕೆಕ ತೆರಳಿ, ಇತ್ತೀಚೆಗೆ ಅಗಲಿದ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರ ಸಮಾಧಿ ಸ್ಥಳಕ್ಕೆ ತೆರಳಿ ನಮನ ಸಲ್ಲಿಸಲಿದ್ದಾರೆ.

## ಕೋಟಿ ರೂ. ಅಪಘಾತ ವಿಮೆ: ಸಚಿವ

• ಮಲ್ಲಮ್ಮ ನುಡಿ ವಾರ್ತೆ, ಬೆಂಗಳೂರು



ಅರಣ್ಯ ಇಲಾಖೆಯ ಕಾಯಂ ಅಧಿಕಾರಿ, ಸಿಬ್ಬಂದಿಗೆ 1 ಕೋಟಿ ರೂ. ಅಪಘಾತ (ಮರಣ) ವಿಮೆ, ಹೊರಗುತ್ತಿಗೆ ಸಿಬ್ಬಂದಿಗೆ 20 ಲಕ್ಷ ವಿಮಾ ಸೌಲಭ್ಯ ಕಲ್ಪಿಸಲು ಬ್ಯಾಂಕ್ ಆಫ್ ಬರೋಡಾದೊಂದಿಗೆ ತಿಳಿವಳಿಕೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ವನ ಮತ್ತು ವನ್ಯಜೀವಿಗಳ ರಕ್ಷಣೆಗಾಗಿ ಮುಂಚೂಣಿ ಸಿಬ್ಬಂದಿಗಳು/ ಹಸಿರು ಸೈನಿಕರು ಅಪಾಯ ಎದಿಸುತ್ತಾ ಹಗಲಿರುಳು ಶ್ರಮಿಸುತ್ತಿದ್ದು, ಇಲಾಖೆ ಕೆಲವು ಶೌರ್ಯಶಾಲಿ ಹಸಿರು ಯೋಧರನ್ನು ಕಳೆದುಕೊಂಡಿದೆ.

ಇವರೆಲ್ಲರಿಗೂ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸಲು ಈ ತಿಳಿವಳಿಕೆ ಒಬ್ಬಂದ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದ್ದಾರೆ. ಬ್ಯಾಂಕ್ ಆಫ್ ಬರೋಡಾದಲ್ಲಿ ಇಲಾಖೆಯ ನೌಕರರು ಪಿಂಚಣಿ ಖಾತೆಯನ್ನು ಮುಂದುವರಿಸಿದರೆ, ಈ ವೈಯಕ್ತಿಕ ಅಪಘಾತ ವಿಮಾ ರಕ್ಷಣೆಯ ಸೌಲಭ್ಯ 70 ವರ್ಷ ವಯಸ್ಸಿನವರೆಗೆ ಮುಂದುವರಿಯುತ್ತದೆ. ಇದಲ್ಲದೆ, ಖಾಯಂ ಉದ್ಯೋಗಿಗಳಿಗೆ ರೂ.10.00 ಲಕ್ಷಗಳ ಜೀವ ವಿಮಾ ರಕ್ಷಣೆಯನ್ನು ಸಹ ಬ್ಯಾಂಕ್ ಒದಗಿಸುತ್ತದೆ ಎಂದು ತಿಳಿಸಿದ್ದಾರೆ.

## ಕಾಮಗಾರಿ ಸಮಗ್ರ ತನಿಖೆಗೆ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ, ಹುಮನಾಬಾದ್

ತಾಲೂಕು ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿರುವ ಸರ್ಕಾರಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಾರ್ವಜನಿಕರಲ್ಲಿ ತೀವ್ರ ಅನುಮಾನ ವ್ಯಕ್ತವಾಗುತ್ತಿದೆ. ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಕೈಗೊಳ್ಳಲಾಗಿರುವ ರಸ್ತೆ, ಕುಡಿಯುವ ನೀರಿನ ಯೋಜನೆ, ಚರಂಡಿ, ಶಾಲೆ, ಅಂಗನವಾಡಿ ಯೋಜನೆಗಳು ಪೂರ್ಣಗೊಳ್ಳುವ ಮುನ್ನವೇ ಹಾಳಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.

ಕೆಲವೆಡೆ ಕಾಮಗಾರಿಗಳು ಕಾಗದದಲ್ಲಿ ಪೂರ್ಣಗೊಂಡಂತೆ ತೋರಿಸಿ, ಸ್ಥಳದಲ್ಲಿ ಕೆಲಸವೇ ನಡೆದಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ. ಇನ್ನೂ ಕೆಲವು ಕಡೆಗಳಲ್ಲಿ ಕಡಿಮೆ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿ, ಅಕ್ರಮ ಹಾಗೂ ಭ್ರಷ್ಟಾಚಾರದ ವಾಸನೆ ಬರುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಸರ್ಕಾರದ ಅನುದಾನ ಅಭಿವೃದ್ಧಿಗೆ ಬಳಕೆಯಾಗಬೇಕಾದರೆ, ಪ್ರತಿಯೊಂದು ಕಾಮಗಾರಿಯ ಮೇಲೂ ನಿಷ್ಪಕ್ಷಪಾತ ತನಿಖೆ ಅಗತ್ಯವಾಗಿದೆ. ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಹೊಣೆಗಾರ ಜನಪ್ರತಿನಿಧಿಗಳ ಪಾತ್ರದ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂಬುದು ಜನರ ಒತ್ತಾಯವಾಗಿದೆ.

> ನಡೆಯುತ್ತಿರುವ ಮತ್ತು ಪೂರ್ಣಗೊಂಡ ಎಲ್ಲಾ ಕಾಮಗಾರಿಗಳ ಸಾಮಾಜಿಕ ಪರಿಶೀಲನೆ (ಸೋಶಿಯಲ್ ಆಡಿಟ್) ನಡೆಸಬೇಕು. ಜನರ ತೆರಿಗೆ ಹಣವನ್ನು ದುರುಪಯೋಗಪಡಿಸಿಕೊಂಡರೆ ಅದಕ್ಕೆ ಉತ್ತರಿಸಬೇಕು. ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.
> –ಸಾರ್ವಜನಿಕರು, ಸ್ಥಳೀಯ ಗ್ರಾಮಸ್ಥರು

# ಕುರ್ಚಿಗೆ ಕೈ ಹಾಕಿದ್ರೆ ಹೈರಿಸ್ಕ್..?

### ಇಂದು ಸಿಡಬ್ಲ್ಯು ಸಭೆ | ನಾಯಕತ್ವ ಬದಲಾವಣೆ ಹಗ್ಗ ಜಗ್ಗಾಟ | ಸಿಎಂ ಪಟ್ಟ ಮತ್ತೆ ಚರ್ಚೆಗೆ ಗ್ರಾಸ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಮತ್ತೆ ಕುರ್ಚಿ ಹಗ್ಗಜಗ್ಗಾಟ ಶುರುವಾಗಿದೆ. ಜ.6ಕ್ಕೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಆಗಲಿದೆ ಎಂಬ ನಿರೀಕ್ಷೆಯಲ್ಲಿ ಡಿಕೆ ಶಿವಕುಮಾರ್ ಬಣವಿದೆ. ಆದರೆ ಕಾಂಗ್ರೆಸ್ ಹೈಕಮಾಂಡ್ ನಡೆ ಮಾತ್ರ ಚರ್ಚೆಗೆ ಕಾರಣವಾಗಿದೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ವಿಚಾರವಾಗಿ ರಿಸ್ಕ್ ತೆಗೆದುಕೊಳ್ಳಲು ಕಾಂಗ್ರೆಸ್ ಹೈಕಮಾಂಡ್ ಹಿಂದೇಟು ಹಾಕುತ್ತಿರುವುದು ಸ್ಪಷ್ಟವಾಗಿದೆ.

**ಲಾಭಕ್ಕಿಂತ ನಷ್ಟ ಹೆಚ್ಚು:** ನಾಯಕತ್ವ ಬಗ್ಗೆ ಖಚಿತ ತೀರ್ಮಾನ ತೆಗೆದುಕೊಳ್ಳಲು ಹೈಕಮಾಂಡ್ ಹಿಂದು ಮುಂದು ನೋಡುತ್ತಿದೆ. ಬದಲಾವಣೆಗೆ ಕೈ ಹಾಕಿದರೆ ಪಕ್ಷಕ್ಕೆ ಲಾಭಕ್ಕಿಂತಲೂ ನಷ್ಟವೇ ಜಾಸ್ತಿ ಎಂಬ ವರದಿ ಹಿನ್ನೆಲೆಯಲ್ಲಿ ಹೈಕಮಾಂಡ್ ತಟಸ್ಥರಾಗಿದೆ ಎನ್ನುವುದನ್ನು ಕಾಂಗ್ರೆಸ್ ಮೂಲಗಳು ಖಚಿತ ಪಡಿಸಿವೆ.

**ಬದಲಾವಣೆ ಯಾಕಿಲ್ಲ?:** ವರಿಷ್ಠ ರಾಹುಲ್‌ಗಾಂಧಿ ಈ ವಿಚಾರದಲ್ಲಿ ತಟಸ್ಥ ಧೋರಣೆ ತಾಳಿರುವುದು ಬಿಡಿಸಲಾಗದ ಕಗ್ಗಂಟಾಗಿದೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಉಭಯ ನಾಯಕರ ಜೊತೆಗೆ ಮಾತುಕತೆ ನಡೆಸಿದ್ದರು. ರಾಹುಲ್ ಗಾಂಧಿ ಯಾವುದಕ್ಕೂ ಸ್ಪಂದಿಸುತ್ತಿಲ್ಲ. ಡಿಸಿಎಂ ಡಿಕೆಶಿ ಭೇಟಿಗೆ ಅವಕಾಶ ನೀಡದೆಯೂ ರಾಹುಲ್ ಗಾಂಧಿ ತಟಸ್ಥರಾಗಿದ್ದಾರೆ.






### ದಿಲ್ಲಿಗೆ ತೆರಳಿದ ಸಿದ್ದರಾಮಯ್ಯ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗಿಯಾಗಲು ಸಿಎಂ ಸಿದ್ದರಾಮಯ್ಯ ಇಂದು ದೆಹಲಿಗೆ ತೆರಳಲಿದ್ದಾರೆ. ಡಿ.27 ರಂದು ದೆಹಲಿಯ ಇಂದಿರಾ ಭವನದಲ್ಲಿ ಸಿಡಬ್ಲ್ಯೂಸಿ ಸಭೆ ಆಯೋಜನೆಗೊಂಡಿದೆ. ಈ ಸಭೆಯಲ್ಲಿ ಭಾಗಿಯಾಗುವಂತೆ ಕಾಂಗ್ರೆಸ್ ಅಧಿಕಾರದಲ್ಲಿರುವ ಮೂರು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಲಾಗಿದೆ.

### ಅಲ್ಲಿ ಅವರಿಲ್ಲ, ಬೇರೆಯವರಾರು..?

ಸಿಎಂ ಸಿದ್ದರಾಮಯ್ಯ ಜೊತೆ ತೆಲಂಗಾಣದ ರೇವಂತ್ ರೆಡ್ಡಿ, ಹಿಮಾಚಲ ಪ್ರದೇಶದ ಸುಖ್ವಿಂದರ್ ಸಿಂಗ್ ಸುಖು ಭಾಗಿಯಾಗಲಿದ್ದಾರೆ. ಡಿಕೆಶಿ ಹೊರತಾಗಿ ಸಿಡಬ್ಲ್ಯುಸಿ ಸದಸ್ಯ ಬಿ.ಕೆ ಹರಿಪ್ರಸಾದ್, ನಾಸೀರ್ ಹುಸೇನ್ ಹಾಗೂ ವೀರಪ್ಪ ಮೊಯ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಭೆಗೆ ಕರೆದಿಲ್ಲ ಎಂದಿದ್ದರು ಸಿಎಂ. ಅವರಿಗೂ ಬುಲಾವ್ ಬಂದಿದ್ದು ಅಧಿಕೃತವಾಗಿದೆ.

### ಡಿಕೆಶಿ ಹೇಳಿಕೆಯ ಹಿಂದಿನ ಅರ್ಥ..?

ಡಿಸಿಎಂ ಡಿಕೆ ಶಿವಕುಮಾರ್ ನೀಡಿರುವ ಹೇಳಿಕೆ ಮಾರ್ಮಿಕವಾಗಿದೆ. ಅಧಿಕಾರ, ಹುದ್ದೆಗಿಂತ ಪಕ್ಷದ ಕಾರ್ಯಕರ್ತನಾಗಿರಲು ನಾನು ಬಯಸುತ್ತೇನೆ. ನನಗೆ ಅದೇ ಶಾಶ್ವತ. 1980 ರಿಂದ ನಾನು ಪಕ್ಷದ ಕಾರ್ಯಕರ್ತನಾಗಿದ್ದು, 45 ವರ್ಷಗಳಿಂದ ಇಲ್ಲಿಯವರೆಗೂ ಪಕ್ಷಕ್ಕಾಗಿ ದುಡಿಯುತ್ತಿರುವೆ ಎಂದಿದ್ದು, ಇದರ ಗೂಢಾರ್ಥ ಸ್ಪಷ್ಟವಾಗಬೇಕಿದೆ.

### ಜ.25ರಂದು ಅಹಿಂದ ಮುಹೂರ್ತ

ರಾಜ್ಯದಲ್ಲಿ ಸಿಎಂ ಕುರ್ಚಿ ಫೈಟ್ ಮಧ್ಯೆ ಅಹಿಂದ ಸಮಾವೇಶಕ್ಕೆ ಮುಹೂರ್ತ ಫಿಕ್ಸ್ ಆಗಿದ್ದು, ಜ.25 ರಂದು ಮೈಸೂರಿನಲ್ಲಿ ಅಹಿಂದ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಘೋಷಣೆ ಮಾಡಿದೆ. ಸಿಎಂ ಬೆನ್ನಿಗೆ ಅಹಿಂದ ಸಮುದಾಯ ನಿಂತಿದ್ದು, ಸಿಎಂ ಅವರನ್ನು ಬದಲಾಯಿಸದಂತೆ ಒತ್ತಡ ಹೇರುವುದು ಇದರ ಉದ್ದೇಶವಾಗಿದೆ.

## ಕಾಯಂ ರೈಲು ಸೇವೆಗೆ ಕ್ರಮ: ಎಂಬಿಪಿ



**ಬೆಂಗಳೂರು:** ಕ್ರಿಸ್ಮಸ್ ಮತ್ತು ವರ್ಷಾಂತ್ಯದ ರಜೆ ಹಿನ್ನೆಲೆಯಲ್ಲಿ ಪ್ರಯಾಣಿಕರ ದಟ್ಟಣೆ ತಗ್ಗಿಸಲು ನೈರುತ್ಯ ರೈಲ್ವೆಯು ಇದೇ ಮೊದಲ ಬಾರಿಗೆ ಬೆಂಗಳೂರಿನಿಂದ ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮೂಲಕ ವಿಜಯಪುರಕ್ಕೆ ವಿಶೇಷ ರೈಲನ್ನು ಓಡಿಸಿರುವುದು ಸ್ವಾಗತಾರ್ಹವಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಕಾಯಂ ರೈಲು ಸೇವೆಯಾಗಿ ಪರಿವರ್ತಿಸಬೇಕು ಎಂದು ಮೂಲಸೌಕರ್ಯ ಅಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಂ ಬಿ ಪಾಟೀಲ ಆಗ್ರಹಿಸಿದ್ದಾರೆ. ಈ ಬಗ್ಗೆ ಗುರುವಾರ ಮಾತನಾಡಿ, ಈ ನಿಟ್ಟಿನಲ್ಲಿ ನೈರುತ್ಯ ರೈಲ್ವೆ ಅಧಿಕಾರಿಗಳ ಜತೆ ಹಲವು ಸಭೆಗಳನ್ನು ನಡೆಸಲಾಗಿದೆ. ನಮ್ಮ ಪ್ರಯತ್ನಕ್ಕೆ ವಿಶೇಷ ರೈಲಿನ ರೂಪದಲ್ಲಿ ಮೊದಲ ಯಶಸ್ಸು ಸಿಕ್ಕಿರುವುದು ಸಂತಸ ತಂದಿದೆ ಎಂದಿದ್ದಾರೆ.



ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಡಿಸಿಎಂ ಡಿ ಕೆ ಶಿವಕುಮಾರ್ ಅವರು ಬೆಂಗಳೂರಿನ ಸದಾಶಿವನಗರ ನಿವಾಸದಲ್ಲಿ ಗುರುವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

## ಅಟಲ್‌ಜಿ ಬಿಜೆಪಿಗೇ ಸ್ಫೂರ್ತಿ: ಬಿ.ವೈ.ವಿಜಯೇಂದ್ರ



**ಬೆಂಗಳೂರು:** ಅಟಲ್ಜೀ ಹೆಸರಿನ ಉಚ್ಚಾರಣೆಯೇ ನಮಗೆ ರೋಮಾಂಚನವನ್ನುಂಟು ಮಾಡುತ್ತದೆ. ಆ ಹೆಸರು ಪ್ರೇರಣೆ, ಉತ್ಸಾಹ ತುಂಬುತ್ತದೆ. ಅಂಥ ಶ್ರೇಷ್ಠ ವ್ಯಕ್ತಿತ್ವ ಅವರದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ. ಮಾಜಿ ಪ್ರಧಾನಮಂತ್ರಿ, ಭಾರತ ರತ್ನ ದಿ. ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನ ಕಾರ್ಯಕ್ರಮವು ಇಂದು ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿ, ಹಲವಾರು ಬಾರಿ ಅವರು ಕರ್ನಾಟಕದಲ್ಲಿ ಪ್ರವಾಸ ಮಾಡಿದ್ದರು. ರಾಜ್ಯದಲ್ಲಿ ಬಿಜೆಪಿ ಸಂಘಟನೆಗೆ ಯಡಿಯೂರಪ್ಪ, ಶಂಕರಮೂರ್ತಿ, ಪಕ್ಷದ ಹಿರಿಯರಿಗೆ ಪ್ರೇರಣೆ ನೀಡಿದ ಮಹಾನ್ ನಾಯಕರು ಎಂದು ನುಡಿದಿದ್ದಾರೆ.

**ಕಾಂಗ್ರೆಸ್ಸಿನ ಹಣೆಬರಹ:** ಕಾಂಗ್ರೆಸ್ ಪಕ್ಷದ ಅಪಪ್ರಚಾರಗಳ ನಡುವೆಯೂ ಬಿಜೆಪಿ ನೇತೃತ್ವದ ಕೇಂದ್ರದ ಎನ್ಡಿಎ ಸರಕಾರವು ಭ್ರಷ್ಟಾಚಾರರಹಿತ ಆಡಳಿತವನ್ನು ನರೇಂದ್ರ ಮೋದಿಯವರು ನೀಡುತ್ತಿದ್ದಾರೆ.

## ಮದ್ಯದಂಗಡಿ ಹರಾಜುಗೆ ಕಿಡಿ



**ದಾವಣಗೆರೆ:** ಮದ್ಯದಂಗಡಿ ಪರವಾನಗಿಗೆ 1.95 ಕೋಟಿ ರೂ. ನಿಗದಿಪಡಿಸಿರುವ ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಬೃಹತ್ ಉದ್ದಿಮೆ ಮತ್ತು ಉಕ್ಕು ಖಾತೆ ಸಚಿವ ಎಚ್. ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಮದ್ಯದಂಗಡಿ ಹರಾಜು ರಾಜ್ಯ ಸರ್ಕಾರದ ಹೊಸ ವರ್ಷದ ಕೊಡುಗೆ ಎಂದು ಗುರುವಾರ ಕಿಡಿಕಾರಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಪ್ರತಿ ಇಲಾಖೆಯನ್ನೂ ಲೂಟಿ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್ ಸಿಎಸ್ ಪಿ) ಹಾಗೂ ಪರಿಶಿಷ್ಟ ಪಂಗಡ ಉಪ ಯೋಜನೆ (ಟಿಎಸ್ ಪಿ) ಸೇರಿದಂತೆ ಎಲ್ಲವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ರಾಜ್ಯದ ಖಜಾನೆಯನ್ನು ಬರಿದು ಮಾಡಲಾಗುತ್ತಿದೆ ಎಂದು ಟೀಕಿಸಿದ್ದಾರೆ. ಹಲವು ಬಾರಿ ಬಜೆಟ್ ಮಂಡಿಸಿದ್ದಾಗಿ ಹೇಳಿಕೊಳ್ಳುವ ಇಂತಹ ಆರ್ಥಿಕ ತಜ್ಞರನ್ನು ಪ್ರಪಂಚದಲ್ಲಿಯೇ ಕಾಣಲು ಸಾಧ್ಯವಿಲ್ಲ ಎಂದು ಲೇವಡಿ ಮಾಡಿದ್ದಾರೆ.

## ಒಂಬತ್ತು ಜನ ಸಜೀವ ದಹನ

• ಮಲ್ಲಮ್ಮ ನುಡಿ ವಾರ್ತೆ, ಚಿತ್ರದುರ್ಗ

ಖಾಸಗಿ ಟ್ರಾವೆಲ್ ಬಸ್‌ಗೆ ಕಂಟೇನರ್ ಲಾರಿ ಡಿಕ್ಕಿ ಹೊಡೆದ ಪರಿಣಾಮ ಬೆಂಕಿ ಹೊತ್ತಿಕೊಂಡು, 9 ಮಂದಿ ಸಜೀವ ದಹನವಾಗಿದ್ದಾರೆ, ಈ ಘಟನೆ ಜಿಲ್ಲೆಯ ಹಿರಿಯೂರಿನ ಜವನಗೊಂಡನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಒಂದು ಕಡೆಯಿಂದ ಬರುತ್ತಿದ್ದ ಲಾರಿಯೊಂದು ಡಿವೈಡರ್ ಹಾರಿ ಮತ್ತೊಂದು ಕಡೆಯಿಂದ ಬರುತ್ತಿದ್ದ ಬಸ್ಸಿಗೆ ಡಿಕ್ಕಿ ಹೊಡೆದಿದ್ದೇ ದುರಂತಕ್ಕೆ ಕಾರಣ. ಖಾಸಗಿ ಸ್ಲೀಪರ್ ಕೋಚ್ ಬಸ್ ಬೆಂಗಳೂರಿನಿಂದ ಶಿವಮೊಗ್ಗದ ಮೂಲಕ ಗೋಕರ್ಣಕ್ಕೆ ಹೊರಟಿತ್ತು. ಈ ನಡುವೆ ಚಿತ್ರದುರ್ಗದ ಹಿರಿಯೂರಿನ ಜವನಗೊಂಡನಹಳ್ಳಿ ಎಂಬಲ್ಲಿ ದುರ್ಘಟನೆ ಸಂಭವಿಸಿದೆ. ಡಿಕ್ಕಿ ಬಳಿಕ ಕಂಟೇನರ್ ಲಾರಿ ಹಾಗೂ ಬಸ್ ಎರಡೂ ಬೆಂಕಿ ಹೊತ್ತಿಕೊಂಡಿದ್ದು, ಬಸ್ ಸಂಪೂರ್ಣವಾಗಿ ಸುಟ್ಟುಕರಕಲಾಗಿದೆ. ದುರಂತದಲ್ಲಿ 9 ಮಂದಿ ಪ್ರಯಾಣಿಕರು ಮೃತಪಟ್ಟಿದ್ದಾರೆ. ಲಾರಿ ಚಾಲಕ ಕೂಡ ಸಜೀವ ದಹನವಾಗಿದ್ದಾನೆ. ಬಸ್ನಲ್ಲಿ 32 ಮಂದಿ ಪ್ರಯಾಣಿಕರು ಇದ್ದರು ಎಂದು ತಿಳಿದುಬಂದಿದೆ. ಉಳಿದ ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

### ತಲಾ ಐದು ಲಕ್ಷ ರೂ. ಪರಿಹಾರ

ಏತನ್ಮಧ್ಯೆ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ರೂ.5 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ರೂ.50,000 ಪರಿಹಾರ ನೀಡುವುದಾಗಿ ರಾಜ್ಯ ಸರ್ಕಾರ ಘೋಷಣೆ ಮಾಡಿದೆ. ಅಪಘಾತಕ್ಕೆ ಕಾರಣ ಪತ್ತೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

## ದಲಿತರ ಒಳಿತಿಗೆ ಹೆಚ್ಚಿನ ಒತ್ತು




• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಟಲ್ ಜೀ ಅವರ ಕುರಿತಾದ ಸಾಹಿತ್ಯ ಕಿರು ಹೊತ್ತಗೆಯನ್ನು ಇದೇ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಮತ್ತು ಸಂಸದ ಜಗದೀಶ್ ಶೆಟ್ಟರ್ ಅವರು ಬಿಡುಗಡೆ ಮಾಡಿದರು. ಅಟಲ್ ಜೀ ಅವರ ಜೊತೆಗಿನ ಒಡನಾಟವನ್ನು ನೆನಪಿಸಿದ್ದಾರೆ.

ಮಾಜಿ ಪ್ರಧಾನಮಂತ್ರಿ, ಭಾರತ ರತ್ನ ದಿ. ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನ ಕಾರ್ಯಕ್ರಮದಲ್ಲಿ ಮಾತನಾಡಿ, ಪೋಖ್ರಾನ್ ಅಣು ಪರೀಕ್ಷೆ ದೇಶಕ್ಕೆ ಹೆಮ್ಮೆ. ಇದಕ್ಕೆ ಅಟಲ್ ಬಿಹಾರಿ ವಾಜಪೇಯಿ ಅವರು ಕಾರಣ ಎಂದು ನುಡಿದರು. ವಾಜಪೇಯಿ ಅವರು ಇವತ್ತಿಗೂ ನಮ್ಮ ಮನಸ್ಸಿನಲ್ಲಿ ಇದ್ದಾರೆ ಎಂದು ತಿಳಿಸಿದರು. ಹಿಂದುಳಿದ ವರ್ಗ, ದಲಿತರ ಒಳಿತಿಗೆ ಹೆಚ್ಚಿನ ಒತ್ತು ಕೊಡುವಂಥ ಕೆಲಸ ಮಾಡಿದ್ದಾರೆ ಎಂದಿದ್ದಾರೆ.

ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿದ್ದಾರೆ.

## ಜನರ ನರಕಯಾತನೆಗೆ ಕೊನೆ..?

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

**ಜನ ಪ್ರತಿನಿಧಿಗಳ ದಿವ್ಯ ನಿರ್ಲಕ್ಷ್ಯ**

ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಜನರ ಬದುಕು ದಿನದಿಂದ ದಿನಕ್ಕೆ ನರಕವಾಗುತ್ತಿದೆ. ಮೂಲಭೂತ ಸಮಸ್ಯೆಗಳು ಜನರನ್ನು ಸಂಕಷ್ಟಕ್ಕೆ ತಂದಿವೆ. ಕುಡಿಯುವ ನೀರಿನ ಕೊರತೆ, ರಸ್ತೆ ದುರಸ್ತಿ ಅಭಾವ, ವಿದ್ಯುತ್ ವ್ಯತ್ಯಯ, ಉದ್ಯೋಗದ ಅಭಾವ, ಕೃಷಿ ಸಮಸ್ಯೆಗಳು ಜನರನ್ನು ನರಕಯಾತನೆಗೆ ತಳ್ಳಿವೆ. ಗ್ರಾಮೀಣ ಜನರು ವರ್ಷಗಳಿಂದ ಒಂದೇ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ, ಜನಪ್ರತಿನಿಧಿಗಳಿಂದ ಯಾವುದೇ ಶಾಶ್ವತ ಪರಿಹಾರ ದೊರಕಿಲ್ಲ ಎಂಬ ಆಕ್ರೋಶ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಅಧಿಕಾರಕ್ಕೆ ಬಂದ ಬಳಿಕ ಜನರ ನಡುವೆ ಕಾಣಿಸಿಕೊಳ್ಳದ ಜನಪ್ರತಿನಿಧಿಗಳು, ಫೇಸ್ಬುಕ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಮಾತ್ರ ಸಕ್ರಿಯರಾಗಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ. ಗ್ರಾಮಗಳಲ್ಲಿ ಜನರು ಕುಡಿಯುವ ನೀರಿಗಾಗಿ ಕಿಲೋಮೀಟರ್‌ಗಳಷ್ಟು ದೂರ ನಡೆದು ಹೋಗಬೇಕಾದ ಸ್ಥಿತಿ ಇದೆ. ಕೆಸರುಮಯ ರಸ್ತೆಗಳು, ಹದಗೆಟ್ಟ ಸಂಪರ್ಕ ವ್ಯವಸ್ಥೆ ಜನರ ದೈನಂದಿನ ಜೀವನಕ್ಕೆ ದೊಡ್ಡ ತೊಂದರೆಯಾಗಿವೆ. ಯುವಕರಿಗೆ ಉದ್ಯೋಗವಿಲ್ಲದೆ ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ.

### ಫೇಸ್‌ಬುಕ್, ಟ್ವಿಟ್ಟರ್ ಫೋಟೋದಲ್ಲಿ ಬಿಜಿ

ಜನರ ಸಮಸ್ಯೆಗಳನ್ನು ನೇರವಾಗಿ ಕೇಳಿ ಪರಿಹಾರ ನೀಡುವ ಬದಲು, ಜನಪ್ರತಿನಿಧಿಗಳು ಟ್ವಿಟ್ಟರ್, ಫೇಸ್‌ಬುಕ್‌ನಲ್ಲಿ ಫೋಟೊ ಪೋಸ್ಟ್, ಶುಭಾಶಯಗಳಲ್ಲೇ ನಿರತರಾಗಿದ್ದಾರೆ ಎಂದು ಗ್ರಾಮೀಣ ಭಾಗದ ಜನರು ದೂರುತ್ತಿದ್ದಾರೆ. 'ಚುನಾವಣೆಯ ಸಮಯದಲ್ಲಿ ಮಾತ್ರ ಜನರು ನೆನಪಾಗುತ್ತಾರೆ, ನಂತರ ಐದು ವರ್ಷ ಕಾಣೆಯಾಗುತ್ತಾರೆ ಎಂದು ಕಿಡಿಕಾರಿದ್ದಾರೆ.

**ಗೆಲುವು ತಮ್ಮ ಪರವಾದರೆ ಮತಗಳ್ಳತನ ಆಗಲ್ಲ, ಅವರು ಸೋತರೆ ಮತಗಳ್ಳತನ ಆಗುತ್ತದೆ: ಛಲವಾದಿ ನಾರಾಯಣಸ್ವಾಮಿ**

# ಅಟಲ್ ಬಿಹಾರಿ ವಾಜಪೇಯಿ ಅವರ ಕೊಡುಗೆ ದೇಶಕ್ಕೆ ಅಪಾರ: ಡಾ. ಸಿದ್ದು ಪಾಟೀಲ್

• **ಮಲ್ಲಮ್ಮ ನುಡಿ ವಾರ್ತೆಚಿಟಗುಪ್ಪ:**

ಭಾರತ ಕಂಡ ಸರಳ ಸಜ್ಜನಿಕೆಯ ಅಪರೂಪದ ರಾಜಕಾರಣಿ ಅಜಾತಶತ್ರು ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಅವರ ಕೊಡುಗೆ ಅಪಾರ ಎಂದು ಶಾಸಕ ಡಾ. ಸಿದ್ದು ಪಾಟೀಲ್ ಹೇಳಿದರು. ಪಟ್ಟಣದ ಆರ್ಯ ಸಮಾಜದಲ್ಲಿ ಆಟಲ ಬಿಹಾರಿ ವಾಜಪೇಯಿ ವೆಲ್ಫೇರ್ ಅಸೋಸಿಯನ್ ವತಿಯಿಂದ ಹಮ್ಮಿಕೊಂಡಿದ್ದ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ವರ್ಷದ ಜನ್ಮ ದಿನಾಚರಣೆಯನ್ನು ಕೇಕ್ ಕತ್ತರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು,ದೇಶದ ಅಭಿವೃದ್ಧಿಯನ್ನೇ ಉಸಿರಾಗಿಸಿಕೊಂಡಿದ್ದ ವಾಜಪೇಯಿ ಅವರು ರಸ್ತೆಗಳು ಅಭಿವೃದ್ಧಿ ಆಗದೆ ದೇಶದ ಅಭಿವೃದ್ಧಿ ಅಸಾಧ್ಯ ಎಂದು ಹೇಳುತ್ತಿದ್ದರು. ಆದ್ದರಿಂದಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಕ ಸುವರ್ಣ ಚತುಷ್ಪಥ ಯೋಜನೆ ಜಾರಿಗೆ ತಂದಿದ್ದರು ಎಂದರು. ಅವರ ಮಾರ್ಗ ದರ್ಶನದಲ್ಲೆ ನಾನು ಚಿಟಗುಪ್ಪ ಪಟ್ಟಣ ಸೇರಿದಂತೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದೇನೇ ಎಂದರು. ಸಾಹಿತಿ ಮಾಣಿಕ ನೇಳಗಿ ಮಾತನಾಡಿ, ಅಟಲ್ ಬಿಹಾರಿ ವಾಜಪೇಯಿ ಅವರೊಬ್ಬ ಕವಿ, ಹೆಸರಾಂತ ಪತ್ರಕರ್ತ, ಶ್ರೇಷ್ಠ ವಾಗ್ಮಿ, ಚಿಂತಕ,



## ಅಟಲ್ ಜೀ ಜನ್ಮದಿನ: ಪೌರ ಕಾರ್ಮಿಕರಿಗೆ ಸನ್ಮಾನ

ದಾರ್ಶನಿಕ, ನಿಸ್ವಾರ್ಥ ರಾಜಕಾರಣಿಯಾಗಿ ಹೆಸರು ಪಡೆದಿದ್ದಾರೆ. ವಾಜಪೇಯಿ ಅವರಿಗೆ ಪದ್ಮ ವಿಭೂಷಣ, ಲೋಕಮಾನ್ಯ ತಿಲಕ್ ಪ್ರಶಸ್ತಿ, ಉತ್ತಮ ರಾಜಕೀಯ ಪಟು ಗೌರವ, ಪಂಡಿತ್ ಗೋವಿಂದ್ ವಲ್ಲಭ್ ಪಂತ್ ಪ್ರಶಸ್ತಿ, ಭಾರತ ರತ್ನ ಪ್ರಶಸ್ತಿ, ಬಾಂಗ್ಲಾ ವಿಮೋಚನಾ ಯುದ್ಧ ಪ್ರಶಸ್ತಿ ಸಂದಿವೆ. ಭಾರತದ ಪ್ರಮುಖ ನಗರಗಳ ನಡುವೆ ಸಂಪರ್ಕ ಕಲ್ಪಿಸುವ ಸುವರ್ಣ ಚತುಷ್ಪಥ ರಸ್ತೆ ನಿರ್ಮಾಣ ಯೋಜನೆ ಕೂಡ ವಾಜಪೇಯಿ ಅವರ ಪರಿಕಲ್ಪನೆಯಾಗಿದೆ. ಪಾಕಿಸ್ತಾನ ಜತೆಗಿನ ಸಂಬಂಧವನ್ನು ಸುಧಾರಿಸುವುದು ವಾಜಪೇಯಿ ಅವರ ವೈಯಕ್ತಿಕ ಉದ್ದೇಶವಾಗಿತ್ತು. ಅದಕ್ಕಾಗಿ ಅವರು ಶ್ರಮಿಸಿದ್ದರು ಎಂದರು. ದಿವಂಗತ ಅಶೋಕ ಗುತ್ತೆದಾರ ಅವರು ಪ್ರತಿ ವರ್ಷ ವಾಜಪೇಯಿ ಅವರ ಜನ್ಮದಿನ ಚಿಟಗುಪ್ಪದಲ್ಲಿ ಆಚರಿಸುತ್ತಿದ್ದರು. ಇಂದಿಗೂ ಚಿಟಗುಪ್ಪ ಪಟ್ಟಣದಲ್ಲಿ ಆಟಲ ಬಿಹಾರಿ ವಾಜಪೇಯಿ ಅವರ ಜನ್ಮದಿನ ಆಚರಿಸುತ್ತಿರುವುದು ಶ್ಲಾಘನೀಯ ಎಂದರು. ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಶಿವಾನಂದ ಮಂಠಾಳಕರ್, ಈಶ್ವರಸಿಂಗ್ ಠಾ-

• ಆಟಲ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಪ್ರಯುಕ್ತ ಪೌರ ಕಾರ್ಮಿಕರಿಗೆ ಸನ್ಮಾನಿಸಿ ಗೌರವಿಸಿದರು. ಡಾ. ಸೇಡಂಕರ್ ಇವರ ನೇತೃತ್ವದಲ್ಲಿ ಉಚಿತ ಆರೋಗ್ಯ ತಪಾಸಣೆ ಜರುಗಿತ್ತು.

ಕೂರ್, ಬಸವರಾಜ ಆರ್ಯ ಆಟಲ ಬಿಹಾರಿ ವಾಜಪೇಯಿ ರವರ ಇತಿಹಾಸದ ಬಗ್ಗೆ ತಿಳಿಸಿದರು. ಸಚಿನ ಮಠಪತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸೂರ್ಯಕಾಂತ ಮಠಪತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡಾ. ಭದ್ರೇಶ್ವ ಪಾಟೀಲ್, ಮಲ್ಲಿಕಾರ್ಜುನ ಕುಂಬಾರ್, ಪ್ರಭಾಕರ ನಾಗರಾಳೆ, ಅನೀಲ ಪರ್ಸಗಿ, ವಿಶ್ವನಾಥ ಪಾಟೀಲ್ ಮಾಡಗುಳ, ಡಾ. ಸೇಡಂಕರ್, ಆಕಾಶ ಗುತ್ತೆದಾರ್, ಅಮಿತ ತೊಗಲೂರ್, ಅನೀಲ ಜೋಶಿ, ರಾಜಗೋಪಾಲ ಐನಾಪುರ್, ನರಸಪ್ಪ ನರನಾಳ, ಪ್ರವೀಣ ರಾಜಾಪುರ್, ಅರುಣ ಬಾವಗಿ, ಮಹೇಶ್ ಮಹಾಜನ, ನಟವರ್ ಪವರ್, ಚಂದು ಬೆಳಕೇರಾ, ಸಾಯಿ ಸಿರ್ಕೆ, ಅಮರ ರೆಡ್ಡಿ, ಮಲ್ಲಿಕಾರ್ಜುನ, ಶ್ರೀಕಾಂತ ಫುಲೇ, ಸೇರಿದಂತೆ ಹಿರಿಯರು, ಮಹಿಳೆಯರು, ಯುವಕರು ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

# ಕಾಂಗ್ರೆಸ್ ಸಮಾವೇಶ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ :**

ಪಟ್ಟಣದ ಕೇಂದ್ರ ಬಸ್ ನಿಲ್ದಾಣ ಹತ್ತಿರದ ಸಾಯಿ ಅಚಲ್ ಫಂಕ್ಷನ್ ಹಾಲ್‌ನಲ್ಲಿ ಬ್ಲಾಕ್

ಕಾಂಗ್ರೆಸ್ ಸಮಿತಿ ಹುಮನಾಬಾದ ವತಿಯಿಂದ ಮಾಜಿ ಸಚಿವರಾದ ಶ್ರೀ ರಾಜಶೇಖರ

ಬಿ. ಪಾಟೀಲ್ ಅವರ ನೇತೃತ್ವದಲ್ಲಿ ಡಿಸೆಂಬರ್ 27ರಂದು ಬೆಳಗ್ಗೆ 10 ಗಂಟೆಗೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಸಮಾವೇಶ ಆಯೋಜನೆ ಮಾಡಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಅಫ್ಸರಮಿಯ ತಿಳಿಸಿದ್ದಾರೆ.

ಈ ಸಮಾವೇಶದಲ್ಲಿ ವಿಧಾನ ಪರಿಷತ್ ಶಾಸಕರಾದ ಡಾ. ಚಂದ್ರಶೇಖರ ಬಿ. ಪಾಟೀಲ್ ಹಾಗೂ ಭೀಮರಾವ ಬಿ. ಪಾಟೀಲ್ ಪಾಲ್ಗೊಳ್ಳಲಿದ್ದಾರೆ. ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಸರಿಯಾದ ಸಮಯಕ್ಕೆ ಬಂದು ಸಮಾವೇಶ ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಬಡವರಿಗೆ ಕೂಲಿ ಕಾರ್ಮಿಕರಿಗೆ ಇಂದಿರಾ ಕ್ಯಾಂಟಿನ್ ಅನುಕೂಲವಾಗಲಿದೆ: ರಹೀಂ ಖಾನ್



• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಡಿ,25 ಬಡವರಿಗೆ, ಕೂಲಿ ಕಾರ್ಮಿಕರಿಗೆ ಇಂದಿರಾ ಕ್ಯಾಂಟಿನ್ ಅನುಕೂಲವಾಗಲಿದೆ ಎಂದು ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಅವರು ತಿಳಿಸಿದರು.

ಇವರು ಇಂದು ಜಿಲ್ಲಾಡಳಿತ, ನಗರಾಭಿವೃದ್ಧಿ ಇಲಾಖೆ,

ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಓಲ್ಡ್ ಸಿಟಿಯ ನೂರು ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆ ಆವರಣದಲ್ಲಿ ನೂತನ ಇಂದಿರಾ ಕ್ಯಾಂಟಿನ್ ಉದ್ಘಾಟಿಸಿ, ಉಪಹಾರ ಸೇವಿಸಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹಸಿವು ಮುಕ್ತ ಕರ್ನಾಟಕ ನಿರ್ಮಾಣ ಮಾಡುವ ಆಶಯದಂತೆ ಹಾಗೂ ಯಾರು ಹಸುವಿನಿಂದ ಇರಬಾರದು ಎಂಬ ಕಾರಣಕ್ಕೆ ನಗರ ಪ್ರದೇಶದ ಜನರಿಗೆ ಕೈಗೆಟುಕುವ ದರದಲ್ಲಿ ಆಹಾರ ನೀಡುವ ಉದ್ದೇಶದಿಂದ ಇಂದಿರಾ ಕ್ಯಾಂಟಿನ್ ಆರಂಭಿಸಲಾಗಿದೆ.

ನಗರದ ಓಲ್ಡ್ ಸಿಟಿಯ ಜನರಿಗೆ ಮತ್ತು ಇಲ್ಲಿನ ಆಸ್ಪತ್ರೆಗೆ ಬರುವ ಜನರಿಗೆ ಈ ಕ್ಯಾಂಟಿನ್ ಉಪಯುಕ್ತವಾಗಲಿದೆ. ಬೀದರ ನಗರದಲ್ಲಿ 3 ಹೊಸ ಇಂದಿರಾ ಕ್ಯಾಂಟಿನ್ ಆರಂಭವಾಗಲಿವೆ ಎಂದರು.

ನಗರ ಸಮಸ್ಯೆಗಳನ್ನು ಗುರುತಿಸಿ, ಅದ-ಕ್ಕೆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರ ಕೈಗೊಳ್ಳಲಾಗುವುದು. ರಸ್ತೆ ಮತ್ತು ಡ್ರೆನ್‌ಗಾಗಿ 100 ಕೋಟಿ ಹಾಗೂ 50 ಕೋಟಿ ವಿಶೇಷ ಅನುದಾನ ಮುಖ್ಯಮಂತ್ರಿಗಳು ನೀಡಿದ್ದಾರೆ.

ನಗರೋತ್ಥಾನ ಯೋಜನೆಯಡಿ 50 ಕೋಟಿಯಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಬಿ-ಖಾತಾದ ಉಪಯೋಗ ಜನರು ಪಡೆದುಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಮಹಮ್ಮದ್ ಗೌಸ್, ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್, ಜಿಲ್ಲಾ ನಗರಾಭಿವೃದ್ಧಿ ಕೋಶದ

ಯೋಜನಾ ನಿರ್ದೇಶಕರಾದ ಶಿವರಾಜ್ ರಾಥೋಡ್ ಸೇರಿದಂತೆ ನಗರಸಭೆಯ ಸದಸ್ಯರು ಮತ್ತು ಗಣ್ಯ ಮಾನ್ಯರು ಉಪಸ್ಥಿತರಿದ್ದರು.

# ಇಂದು ಶ್ರೀ ಸ್ವಾಮಿ ಅಯ್ಯಪ್ಪ ಪಡಿ ಪೂಜೆ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಶಬರಿಗಿರಿ ಶ್ರೀ ಸ್ವಾಮಿ ಅಯ್ಯಪ್ಪ ಪಡಿ ಪೂಜೆ ಕಾರ್ಯಕ್ರಮ ಇಂದು ಕಮಲಾಪುರ್ ತಾಲೂಕಿನ ಸೊಂತ ಗ್ರಾಮದ ಹೊರವಲಯದಲ್ಲಿರುವ ಶ್ರೀ ದತ್ತ ದಿಗಂಬರ ಮಾಣಿಕೇಶ್ವರ ದೇವಸ್ಥಾನ ಹಾಗೂ ಶ್ರೀ ಶರಣ ಶಂಕರಲಿಂಗ ಮಹಾರಾಜರ ಆಶ್ರಮದಲ್ಲಿ ಪರಮ ಪೂಜ್ಯ ಶ್ರೀ ಬಾಲಯೋಗಿ ಅಭಿನವ ಶರಣ ಶಂಕರಲಿಂಗ ಮಹಾರಾಜರ ನೇತೃತ್ವದಲ್ಲಿ ಇಂದು ಸಂಜೆ 5:30 ಗಂಟೆಗೆ ಶ್ರೀ ಅಯ್ಯಪ್ಪ ಸ್ವಾಮಿ ಪಡಿ ಪೂಜೆ ಕಾರ್ಯಕ್ರಮ ಜರುಗಲಿದೆ. ಪೂಜೆ ಕಾರ್ಯಕ್ರಮದಲ್ಲಿ ಸಮಸ್ತ ಸದ್ಭಕ್ತರು ಭಾಗವಹಿಸಿ ದರ್ಶನ ಪಡೆದು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳ ಕ್ಷೇತ್ರದಲ್ಲಿ ಉತ್ತಮ ಕೆಲಸ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ :**

ರಾಜ್ಯದಲ್ಲಿ ಮಕ್ಕಳ ಕುಂದು ಕೊರತೆ, ಸಮಸ್ಯೆಗಳನ್ನು ಬಗೆಹರಿಸಲು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಅವರು ವಿಶೇಷ ಕಾಳಜಿ, ಮುತುವರ್ಜಿ ವಹಿಸುತ್ತಿದ್ದಾರೆ ಎಂದು ಮಾಜಿ ಶಾಸಕ ಪ್ರಕಾಶ ಖಂಡ್ರೆ ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ನಡೆದ ಶತಾಯಷಿ ಡಾ. ಚನ್ನಬಸವ ಪಟ್ಟದ್ದೇವರ 136ನೆಯ ಜಯಂತ್ಯುತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಹಿಂದೆ ಬಿಜೆಪಿ ಸರಕಾರದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾಗಿ ಶಶಿಧರ ಕೋಸಂಬೆ ನೇಮಕಗೊಂಡು ಕಳೆದ ಎರಡುವರೇ ವರ್ಷಗಳಿಂದ ಮಕ್ಕಳ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿ ಆ ಹುದ್ದೆಗೆ ಗೌರವ ತಂದು ಕೊಡುವ ಕೆಲಸ ಮಾಡುತ್ತಿದ್ದಾರೆ.

ಇದೀಗ ಆಯೋಗದ ಅಧ್ಯಕ್ಷರಾಗಿ ಜಿಲ್ಲೆಗೆ ಕೀರ್ತಿ ತಂದು ಕೊಟ್ಟಿದ್ದಾರೆ. ಅವರು ರಾಜ್ಯದಾದ್ಯಂತ ಸುತ್ತಾಟ ನಡೆಸಿ ವಸತಿ ನಿಲಯ, ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಮಕ್ಕಳಿಗೆ ನ್ಯಾಯ ಒದಗಿಸುವ ಕೆಲಸ ಮಾಡುತ್ತಿರುವುದು ಖುಷಿ ತಂದು ಕೊಟ್ಟಿದೆ ಎಂದು ತಿಳಿಸಿದರು.

# ಸಮಾಜಕ್ಕಾಗಿ ಸಂಘಟನೆ ಉತ್ತಮ ವೇದಿಕೆ: ಲೋಕೇಶ ಮಹಾರಾಜ್



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಸಂಘಟನೆಯಲ್ಲಿ ಶಕ್ತಿಇದೆ, ಸಮಾಜದ ಸೇವೆಗಾಗಿ ಸಂಘಟನೆ ಉತ್ತಮ ವೇದಿಕೆಯಾಗಿದೆ ಎಂದು ಚಿಕ್ಕನಾಗಾಂವ ಬಂಜಾರಾ ತಾಂಡಾದ ಸಂತ ಲೋಕೇಶ ಮಹಾರಾಜ್ ಅಭಿಪ್ರಾಯಪಟ್ಟರು.

ಪಟ್ಟಣದ ನ್ಯಾಶನಲ್ ಇನ್ಸಿಟ್ಯೂಟ್ ಆಫ್ ಫೈರ್ ಮತ್ತು ಸೇಫಟಿ ತಂತ್ರಜ್ಞಾನ ಕಾಲೇಜು ಆವರಣದಲ್ಲಿ ಗುರುವಾರ ನಡೆದ ಕರ್ನಾಟಕ ಪ್ರದೇಶ ಬಂಜಾರಾ(ಲಮಾಣಿ) ಸೇವಾಸಂಘ ಉದ್ಘಾಟನಾ ಸಮಾರಂಭ ಮತ್ತು ನೂತನ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಸಮಾಜಕ್ಕಾಗಿ ದುಡಿಯುವುದ ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ. ನಮ್ಮ ವೈಯಕ್ತಿಕ ಕಾರ್ಯಕ್ರಮಗಳಂತೆ ಸಮಾಜಕ್ಕಾಗಿ ಯಾರು ದುಡಿಯುತ್ತಾರೆಯೋ ಅವರು ಬದುಕು ಸಾರ್ಥಕ ಬದುಕಾಗಿರುತ್ತದೆ. ಮನುಷ್ಯಜೀವನ ಇನ್ನೊಬ್ಬರ ಒಳಿತಿಗಾಗಿ ಬಂದಿರುತ್ತದೆ. ಹೀಗಾಗಿ ಮನುಷ್ಯ ಜನ್ಮದ ಸಾರ್ಥಕತೆಗೆ ಸಮಾಜ ಸೇವೆ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಪ್ರದೇಶ ಬಂಜಾರಾ ಸೇವಾ ಸಂಘದ ಜಿಲ್ಲಾಧ್ಯಕ್ಷ ಆನಂದ ಬಾಬುಹೊನ್ನಾನಾಯಕ, ಸಮಾಜಕ್ಕಾಗಿ ದುಡಿಯುವ ಪ್ರತಿಯೊಬ್ಬರೂ ನಮ್ಮ ಸಂಘಟನೆಗೆ ಅತ್ಯವಶ್ಯಕ, ಈ ನಿಟ್ಟಿನಲ್ಲಿ ಭಾಲ್ಕಿ ತಾಲೂಕಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಎಲ್ಲಾ ಪದಾಧಿಕಾರಿಗಳು ಸಂಘಟನೆಯಲ್ಲಿ ಉತ್ತಮವಾಗಿ ತೊಡಗಿಸಿಕೊಂಡು ಸಮಾಜಕ್ಕಾಗಿ ದುಡಿಯುವ ಪಣ ತೊಡಬೇಕು ಎಂದು ಹೇಳಿದರು.

ಸಂಘದ ಗೌರವಾಧ್ಯಕ್ಷ ನಿವೃತ್ತ ಉಪನ್ಯಾಸಕ ಎಮ್.ಪಿ.ರಾಠೋಡ ಮಾತನಾಡಿ, ಎಲ್ಲಾ ಸಂಘಟನೆಗಳಂತೆ ನಮ್ಮ ಸಂಘಟನೆ ಆಗಬಾರದು. ನಮ್ಮ ಸಮಾಜಕ್ಕಾಗಿ ಉತ್ತಮ ಕಾರ್ಯ ಮಾಡುವುದೇ ನಮ್ಮೆಲ್ಲರ ಗುರಿಯಾಗಿರಬೇಕು. ಎಲ್ಲರ ಸಮಸ್ಯೆಗಳನ್ನು ಅರಿತು ಸಂಘದ ಪದಾಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಹೇಳಿದರು. ಇದೇವೇಳೆ ತಾಲೂಕು ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆಮಾಡಲಾಯಿತು. ನೂತನ ಅಧ್ಯಕ್ಷರನ್ನಾಗಿ ವಿಲಾಸ ಕಾಶಿನಾಥ ರಾಠೋಡ್ ರವರಿಗೆ ಸರ್ವಾನುಮತದಿಂದ ಆಯ್ಕೆಮಾಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟನೆಯ ಸುಭಾಷ ಚವ್ಹಾಣ, ಪರಕಾಶ ಪವಾರ, ಬಾಬು ರಾಠೋಡ, ಬಾಲಾಜಿ ರಾಠೋಡ, ವಿಜಯ ರಾಠೋಡ, ದಯಾನಂದ ಜಾಧವ, ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಜಯರಾಜ ದಾಬಶೆಟ್ಟಿ, ರಾಮ ಚವ್ಹಾಣ, ರಾಜಕುಮಾರ ಖುಬಾ ರಾಠೋಡ, ಮಾನಾಜಿ ರಾಠೋಡ, ಅಂಕುಶ ರಾಠೋಡ, ಗೋಪಾಲ ಜಾಧವ, ಗೋವಿಂದ ಚವ್ಹಾಣ, ಭೀಮರಾವ ಪವಾರ, ಪುರಸಭೆ ಸದಸ್ಯ ಬಾಬುರಾವ ರಾಠೋಡ ಉಪಸ್ಥಿತರಿದ್ದರು. ಶಂಕರ ಚವ್ಹಾಣ ಸ್ವಾಗತಿಸಿದರು. ಗೋವಿಂದ ಚವ್ಹಾನ ನಿರೂಪಿಸಿದರು. ಗೋಪಾಲ ಜಾಧವ ವಂದಿಸಿದರು.

**ತಾಲೂಕು ಘಟಕದ ನೂತನ ಪದಾಧಿಕಾರಿಗಳು**

**ವಿಲಾಸ ಕಾಶಿನಾಥ ರಾಠೋಡ (ಅಧ್ಯಕ್ಷರು), ಅನೀಲ ಭೀಮರಾವ ಆಡೆ ಮತ್ತು ಅನೀಲ ರಾಠೋಡ (ಉಪಾಧ್ಯಕ್ಷರು), ರಂಗರಾವ ಉಮಾಜಿ ಜಾಧವ (ಪ್ರಧಾನ ಕಾರ್ಯದರ್ಶಿ), ಗೋವಿಂದ ರಾಠೋಡ ನೀಲಮನಹಳ್ಳಿ ತಾಂಡಾ (ಸಂಘಟನಾ ಕಾರ್ಯದರ್ಶಿ), ಗೋವಿಂದ ಬಾಬುರಾವ ಚವ್ಹಾಣ (ಖಜಾಂಚಿ), ಅಮಿತ ಕಾಶಿನಾಥ ಜಾಧವ ನಾವದಗಿ, ಸುಭಾಷ ಲಾಲು ಆಡೆ, ಬಾಲಾಜಿ ಪವಾರ, ರಾಮ ಚವ್ಹಾಣ, ಭೀಮ ರಾಠೋಡ, ಗೋವಿಂದ ಭೀಮರಾವ ಚವ್ಹಾಣ, ಅರವಿಂದ ಗೋವಿಂದ ರಾಠೋಡ, ವೆಂಕಟ ಮೋಹನ ರಾಠೋಡ, ಎಮಾಜಿ ಲಕ್ಷ್ಮಣ ಚವ್ಹಾಣ, ಸುನೀಲ ಜೈಸಿಂಗ್ ಜಾಧವ, ಧನಾಜಿ ಮಾರುತಿರಾವ ಆಡೆ, ಪ್ರಕಾಶ ರಾಠೋಡ, ಭೀಮ ಚವ್ಹಾಣ, ಶಿವದತ್ತ ರಾಠೋಡ, ಪ್ರಕಾಶ ಭೀಮರಾವ ಜಾಧವ, ಗೋವಿಂದ ಧನಸಿಂಗ ರಾಠೋಡ, ಶಿವಾಜಿ ರಾಠೋಡ, ವಾಲ್ಮಿಕಿ ರಾಮಜಿ ರಾಠೋಡ, ಭೀಮರಾವ ರಾಮರಾವ, ಪ್ರಕಾಶ ರಾಠೋಡ, ಧನರಾಜ ಜಾಧವ (ಕಾರ್ಯಕಾರಿಣೆ ಸದಸ್ಯರು).**

# ಭಾರತದ ಪ್ರಜಾಪ್ರಭುತ್ವಕ್ಕೆ ಅಟಲ್ ಬಿಹಾರಿ ವಾಜಪೇಯಿ ಕೊಡುಗೆ ಅಪಾರ ರಘುನಾಥ ಮಲ್ಕಾಪುರೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ :**

ವಾಜಪೇಯಿ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಅತ್ಯುತ್ತಮ ನಾಯಕತ್ವವನ್ನು ಒದಗಿಸಿದರು ಮತ್ತು ವಿಶ್ವಾದ್ಯಂತ ಮೆಚ್ಚುಗೆಯನ್ನು ಗಳಿಸಿದರು ಜೊತೆಗೆ ಭಾರತದ ಪ್ರಜಾಪ್ರಭುತ್ವಕ್ಕೆ ಅವರ ಕೊಡುಗೆ ಅಪಾರವಾದದ್ದು ಎಂದು ಮಾಜಿ ಸಭಾಪತಿ ರಘುನಾಥ ಮಲ್ಕಾಪುರೆ ಅವರು ಹೇಳಿದರು.

ಬೀದರ ನಗರದ ನೌಬಾದ ಬಳಿಯ ಬಿಜೆಪಿ ಪಕ್ಷದ ಕಛೇರಿಯಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರ ಜಯಂತಿ ನಿಮಿತ್ತ ವಾಜಪೇಯಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಹಿಂದಿಯಲ್ಲಿ ವಿಶ್ವಸಂಸ್ಥೆಯನ್ನು ಉದ್ದೇಶಿಸಿ ಮಾತನಾಡಿದ ಭಾರತದ ಮೊದಲ ಪ್ರಧಾನಿ

ವಾಜಪೇಯಿ,ವಿರೋಧಪಕ್ಷದವರನ್ನೊಳಗೊಂಡ ವಿದೇಶಗಳಿಗೆ ಅಧ್ಯಯನಕ್ಕೆ ಕಳಿಸಿದ ಕಿರ್ತಿ ವಾಜಪೇಯಿ ಅವರಿಗೆ ಸಲ್ಲುತ್ತದೆ ಎಂದರು.

ಆತ್ಮನಿರ್ಭರ ಭಾರತ ಅಭಿಯಾನದ ಜಿಲ್ಲಾ ಸಂಚಾಲಕ ಬಾಬು ವಾಲಿ ಮಾತನಾಡಿ ವಾಜಪೇಯಿ ಅವರ ಒಡನಾಡಿಯಾಗಿ ಕೆಲಸ ಮಾಡಿದ ಅನುಭವದ ನೆನಪು ಇನ್ನು ನಮ್ಮ ಕಣ್ಣಮುಂದಿದೆ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಒಬ್ಬ ಅತ್ಯುತ್ತಮ ಸಂಸದೀಯ ಪಟು, ನಮ್ಮ ರಾಷ್ಟ್ರೀಯ ನಾಯಕರ ಸಾಲಿನಲ್ಲಿ ಅವರು ಎತ್ತರವಾಗಿ ನಿಂತವರು. ದೃಢನಿಶ್ಚಯ, ಸಮರ್ಪಣೆ ಮತ್ತು ದೂರದೃಷ್ಟಿಯ ಧೈರ್ಯಕ್ಕೆ ಹೆಸರುವಾಸಿಯಾಗಿದ್ದ ಅವರು ದೇಶದಲ್ಲಿ ಪ್ರಮುಖ ಅಭಿವೃದ್ಧಿ ಬದಲಾವಣೆಗಳನ್ನು ತರುವಲ್ಲಿ ಮೊದಲಿಗರು ಎಂದರು.

ಈ ಸಂದರ್ಭದಲ್ಲಿ ನಗರ ಮಂಡಲ ಅದ್ಯಕ್ಷ ಶಶಿಧರ ಹೊಸಳ್ಳಿ, ಗ್ರಾಮೀಣ ಮಂಡಲ ಅದ್ಯಕ್ಷ ದೀಪಕ ಗಾದಗೆ ಪ್ರಮುಖರಾದ ಈ ಈ

ಶ್ವರಸಿಂಗ ಠಾಕೂರ, ಗುರುನಾಥ ಜ್ಯಾಂತಿಕರ್, ಬಾಬುರಾವ ಕಾರಬಾರಿ, ರಾಜು ನೆಮತಬಾದೆ, ಗುರುನಾಥ ರಾಜ-ಗೀರಾ, ಸಂತೋಷ ರೆಡ್ಡಿ, ರಾಜೇಂದ್ರ ಪೂಜಾರಿ, ವಿಜಯಲಕ್ಷ್ಮಿ ಕೌಟಗೆ, ಲುಂಬಿಣಿ ಗೌತಮ, ನೀತಿನ ನವಲಕೆಲೆ, ರೋಷನ ವರ್ಮಾ,

ವೀರು ದಿಗ್ವಾಲ, ಬಸವ ಮೂಲಗೆ ಸೇರಿದಂತೆ ಇತರರಿದ್ದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೀರಪ್ಪಾ ಔರಾದೆ ನಿರೂಪಿಸಿದರೆ ಕೀರಣ ಪಾಟೀಲ ವಂದಿಸಿದರು.

# ವಾಜಪೇಯಿ ಜನಪರ ಆಡಳಿತ ಮಾದರಿ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ :**

ದೇಶದ ಪ್ರಗತಿಗೆ ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಮಾಜಿ ಶಾಸಕ ಪ್ರಕಾಶ ಖಂಡ್ರೆ ಸ್ಮರಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ತಾಲೂಕು ಬಿಜೆಪಿ ವತಿಯಿಂದ ಗುರುವಾರ ಆಯೋಜಿಸಿದ್ದ ಮಾಜಿ ಪ್ರಧಾನಿ ದಿವಗಂತ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ವಾಜಪೇಯಿ ಅವರು ದೇಶದ ಪ್ರಧಾನಿಯಾಗಿ ಜನಪರ, ಪಾರದರ್ಶಕ ಆಡಳಿತ ನೀಡಿದ್ದರು. ಸರ್ವ ಶಿಕ್ಷಣ ಅಭಿಯಾನ, ಪ್ರಧಾನ ಮಂತ್ರಿ ಗ್ರಾಮ ಸಡಕ್, ಅಂತ್ಯೋದಯ, ಬೆಳೆ ವಿಮೆ ಸೇರಿದಂತೆ ಜನಪರ ಯೋಜನೆಗಳನ್ನು ವಾಜಪೇಯಿ ಅವರು ತಮ್ಮ ಅವಧಿಯಲ್ಲಿ ಜಾರಿಗೆ ತಂದು ದೇಶದ ಪ್ರಗತಿಗೆ ಹೊಸ ನಾಂದಿ ಹಾಡಿದ್ದರು.

ಅಂತವರ ಜನಪರ ಆಡಳಿತ, ಯೋಜನೆ, ಯೋಚನೆ ಎಲ್ಲ ಜನಪ್ರತಿನಿಧಿಗಳಿಗೆ ಮಾದರಿಯಾಗಬೇಕು ಎಂದು ತಿಳಿಸಿದರು. ಮಂಡಲ ಅಧ್ಯಕ್ಷ ವೀರಣ್ಣ ಕಾರಬಾರಿ ಪ್ರಾಸ್ತಾವಿಕ ಮಾತನಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಶಿವರಾಜ ಗಂದಗೆ, ಜೈ ಭೀಮ್ ಬಂದು, ಗೋವಿಂದರಾವ ಬಿರಾದಾರ್, ಜೈ ಭೀಮ್ ಬಂಧು, ಕೆ.ಡಿ.ಗಣೇಶ, ವೆಂಕಟ ಲಾಳೆ, ಅಶೋಕ ಪಾಟೀಲ್, ವೆಂಕಟ ಬಿರಾದಾರ್, ಬಾಬುರಾವ ಧೂಪೆ, ಸುಭಾಷ ಬಿರಾದಾರ್, ಸೂರಜಸಿಂಗ್ ರಾಜಪೂತ್, ಸಂಜೀವ ಸಿಂಧೆ, ಸಂತೋಷ ಬುಸಗುಂಡೆ, ಜಗನ್ನಾಥ ಬಿರಾದಾರ್, ವಿಜಯ ಕುಮಾರ್ ಕೋಳಿ, ಸಿದ್ದು ಕಾಡಾದಿ, ಶಾಹುರಾಜ ಪವಾರ್, ಸಂತೋಷ ಪಾಟೀಲ್, ಅನರಾಜ್ ಕುಂದೆ, ರಫೀಕ್ ಚೌಧ್ರಿ, ದೇವಾನಂದ್ ಬಗ್ದೂರೆ, ಲಕ್ಷ್ಮಣ ಮುದಾಳೆ, ಡಾ.ಜಗದೀಶ್ ಭೂರೆ, ವಿಷ್ಣುಕಾಂತ ಹಿಲಾಲ್ಪುರ್, ಸಿದ್ದೋಧನ್ ಕಾಂಬಳೆ, ಸತೀಶ ನಾಯಕ್, ವೈಶಾಲಿ ಬಿರಾದಾರ್, ರೇಷ್ಮಾ ತಮಾಸಂಗೆ, ಮೀನಾಕ್ಷಿ, ಶಿವಕುಮಾರ ಮಲ್ಲಾಸುರೆ, ವೈಜಿನಾಥ, ಗಣಪತಿ ಮಾಟಿ ಸೇರಿದಂತೆ ಹಲವರು ಇದ್ದರು.

ಪಂಡರಿ ಮೇತ್ರೆ ಸ್ವಾಗತಿಸಿ, ನಿರೂಪಿಸಿದರು, ಪಾಂಡುರಂಗ ಕನಸೆ ವಂದಿಸಿದರು.

## ದ್ವೇಷ ಭಾಷಣ ರದ್ದತಿ ವಿಧೇಯಕಕ್ಕೆ ಬಿಜೆಪಿ ವಿರೋಧ



ಮಲ್ಲಮ್ಮ ನುಡಿ ವಾರ್ತೆ

ಕಾರಟಗಿ : ರಾಜ್ಯ ಕಾಂಗ್ರೆಸ್ ಸರ್ಕಾರ ಅನುಮೋದನೆಗೆ ತಂದಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕವನ್ನು ಯಾವುದೇ ಕಾರಣಕ್ಕೂ ಜಾರಿಗೊಳಿಸದಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ.

ಪಟ್ಟಣದ ತಹಸಿಲ್ದಾರ್ ಕಚೇರಿವರೆಗೆ ಬುಧವಾರ ರ್‍ಯಾಲಿ ನಡೆಸಿದ ಬಿಜೆಪಿ ಕಾರ್ಯಕರ್ತರು ಬಳಿಕ ಶಿರಸ್ತೇದಾರ್ ಉಮಾಮಹೇಶ್ವರರ ಮೂಲಕ ರಾಜ್ಯಪಾಲರಿಗೆ ಬರೆದ ಪತ್ರ ರವಾನಿಸಿದರು.

ಈ ವೇಳೆ ಮಂಡಲ ಅಧ್ಯಕ್ಷ ಮಂಜುನಾಥ್ ಮಸ್ಕಿ ಮಾತನಾಡಿ, "ರಾಜ್ಯ ಸರ್ಕಾರ ವಿಧೇಯಕದ ನೆಪದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ವನ್ನು ಕಿಟ್ಟುಕೊಳ್ಳಲು ಮುಂದಾಗಿದೆ. ದ್ವೇಷಭಾಷಣಕ್ಕೆ ನೀಡಿರುವ ವ್ಯಾಖ್ಯಾನವೇ ಅಸ್ಪಷ್ಟವಾಗಿದೆ. ಸರ್ಕಾರದ ವಿರುದ್ಧ ಮಾತನಾಡುವವರ ಬಾಯಿ ಮುಚ್ಚಿಸುವ ಹುನ್ನಾರ ನಡೆಸಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ದ ಹಕ್ಕನ್ನು ಕಸಿದುಕೊಳ್ಳುತ್ತಿದೆ" ಎಂದು ತಿಳಿಸಿದರು.ಈ ವೇಳೆ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಮೌನೇಶ್ ಧಡೇಸೂಗೂರು, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ರತ್ನಕುಮಾರಿ, ಪುರಸಭೆ ಸದಸ್ಯ ಆನಂದ ಎಮ್., ಎಸ್.ಟಿ. ಮೋರ್ಚಾ ಅಧ್ಯಕ್ಷ ದೇವರಾಜ ನಾಯಕ, ಪದಾಧಿಕಾರಿಗಳಾದ ಪಾರ್ವತಿ ಗುರಿಕಾರ, ಮಂಜುನಾಥ್ ಹೊಸಕೇರಾ,ಬಸವರಾಜ ಶಿವಶಕ್ತಿ, ದೀಪ ಹಿರೇಮಠ, ಶರಣಬಸವರೆಡ್ಡಿ. ಮಂಜುನಾಥ ನಾಯಕ, ಶಿವಲೀಲಾ, ಹೊನ್ನೂರಪ್ಪ ಮಡಿವಾಳ, ತಿಪ್ಪಣ್ಣ ನಾಯಕ, ಪ್ರಿಯಾಂಕಾ ಪವರ್, ಸೇರಿದಂತೆ ಇತರರಿದ್ದರು.

## ಸಾಧನೆಗೆ ಶಕ್ತಿಯಾದ ಗೌರವ ಡಾಕ್ಟರೇಟ : ಜನಾಬ ಹಾಫಿಜ ಸಯ್ಯದ ಮುಹಮ್ಮದ ಅಲಿ ಅಲ ಹುಸ್ಸೇನಿ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: ಯಾವುದೇ ಗೌರವ ಗಳಿಸಲು ವ್ಯಕ್ತಿಯ ಸಾಧನೆಗಳು ಮತ್ತು ಸಮಾಜಮುಖಿ ಕೆಲಸಗಳಿಂದ ಸಾಧ್ಯ. ಸಾಧಿಸುವುದು ಇನ್ನೂ ಬಹಳಷ್ಟಿದೆ. ಈ ಗೌರವ ಡಾಕ್ಟರೇಟ್ ನನಗೆ ಸಾಧಿಸಲು ಪ್ರೇರಣೆಯಾಗಲಿದೆ ಎಂದು ಕಲಬುರಗಿಯ ಖಾಜಾ ಬಂದಾನವಾಜ ವಿಶ್ವವಿದ್ಯಾಲಯದ ಕುಲಾಧಿಪತಿ ಜನಾಬ ಹಾಫೀಜ ಸಯ್ಯದ ಮುಹಮ್ಮದ ಅಲಿ ಅಲ ಹುಸ್ಸೇನಿ ನುಡಿದರು.



ಖಾಜಾ ಬಂದಾನವಾಜ ವಿಶ್ವ ವಿದ್ಯಾಲಯದ ಕುಲಾಧಿಪತಿ, ಕೆಬಿಎನ ದರ್ಗಾ ಸಜ್ಜಾದೆ ನಶೀನ ಜನಾಬ ಸಯ್ಯದ ಮುಹಮ್ಮದ ಅಲಿ ಅಲ ಹುಸ್ಸೇನಿವರಿಗೆ ಶರಣ ಬಸವ ವಿವಿವತಿಯಿಂದ ಬುಧವಾರ ಗೌರವ ಡಾಕ್ಟರೇಟ ಪದವಿ ಪ್ರದಾನ ಮಾಡಿದ ಸಂದರ್ಭ. ಸಂಸ್ಥಾನದ 9ನೇ ಪೀಠಧಿಪತಿ ಚಿ. ದೊಡ್ಡಪ್ಪ ಅಪ್ಪಾ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಶ್ರೀ ಬಸವರಾಜ್ ದೇಶಮುಖ, ನಿರ್ದೇಶಕರು ಡಾ. ವಿ. ಡಿ. ಮೈತ್ರಿ, ವಿಶ್ವವಿದ್ಯಾಲಯದ ಕುಲಪತಿ ಡಾ. ಅನಿಲಕುಮಾರ್ ಜಿ ಬಿಡವೆ, ಕುಲಸಚಿವರು ಡಾ.ಎಸ್. ಜಿ. ಡೊಳ್ಳೆಗೌಡರ, ಕುಲಸಚಿವರು ಮೌಲ್ಯಮಾಪನ ಡಾ. ಎಸ್ ಎಚ್ ಹೊನ್ನಳ್ಳಿ, ಡೀನ್ ಲಕ್ಷ್ಮಿ ಪಾಟೀಲ್ ಮಾಕಾ ಕಾಣಬಹುದು.

ಅವರು ನಗರದ ಶರಣಬಸವ ವಿಶ್ವವಿದ್ಯಾಲಯ ನೀಡಿರುವ 2025ನೇ ಸಾಲಿನ ಗೌರವ ಡಾಕ್ಟರೇಟ ಪದವಿಯನ್ನು ಬುಧವಾರ ಸ್ವೀಕರಿಸಿ ಮಾತನಾಡಿದರು.

ನನಗೆ ಡಾಕ್ಟರೇಟ್ ಪದವಿ ಖುಷಿ ತಂದಿದೆ. ಜೊತೆಗೆ ಹೆಚ್ಚಿನ ಜವಾಬ್ದಾರಿ ವಹಿಸಿಕೊಟ್ಟಿದೆ. ನಾನು ಶರಣಬಸವ ವಿಶ್ವವಿದ್ಯಾಲಯಕ್ಕೆ ಕೃತಜ್ಞನಾಗಿದ್ದೇನೆ. ಖಾಜಾ ಬಂದಾನವಾಜರ ಆಶೀರ್ವಾದ ಮತ್ತು ನನ್ನ ಸುತ್ತ ಮುತ್ತಲಿನ ಜನರ ಪ್ರೀತಿ, ವಿಶ್ವಾಸ, ಸಹಾಯ, ಸಲಹೆ ಹಾಗೂ ಸಹಕಾರ ದಿಂದ ಇದು ಸಾಧ್ಯವಾಯಿತು. ನಾವು ಎಲ್ಲ ಒಂದೇ ಟೀಮ್ ಆಗಿ ಕೆಲಸ ಮಾಡುತ್ತೇವೆ. ಮಾನವ ಸೇವೆಯೇ ಖಾಜಾ ಬಂದಾನವಾಜ ವಿವಿ ಸ್ಥಾಪನೆಯ ಮುಖ್ಯ ಉದ್ದೇಶವಾಗಿದೆ. ನಾವೆಲ್ಲ ಒಂದು ಕುಟುಂಬವಾಗಿ ಈ ಮಾನವ ಸೇವೆಯನ್ನು ಮುಂದುವರೆಸುತ್ತೇವೆ ಎಂದರು. ತಂದೆಯವರಾದ ದಿವಂಗತ ಡಾ. ಸಯ್ಯದ ಶಹಾ ಖುಸ್ರೋ ಹುಸೇನಿಯವರನ್ನು ನೆನೆದ ಅವರು ತಂದೆಯ ಆದರ್ಶ ನಡೆ ಮತ್ತು ಮಾರ್ಗದರ್ಶನ ನಮ್ಮ ಮುಂದಿನ ಜೀವನಕ್ಕೆ ದಾರಿ ದೀಪವಾಗಿದೆ ಎಂದು ಹೇಳಿದರು. ಉಪಸ್ಥಿತರಿದ್ದ ಎಲ್ಲರಿಗೆ ಧನ್ಯವಾದಗಳನ್ನು ತಿಳಿಸಿದರು.

**ಖಾಜಾ ಬಂದಾನವಾಜ ದರ್ಗಾ ಮತ್ತು ಮತ್ತು ಶರಣಬಸವ ಸಂಸ್ಥೆಗಳು ಕಲಬುರಗಿಯ 2 ಕಣ್ಣುಗಳಿದ್ದಂತೆ. ವಿದ್ಯಾದಾನ, ಅನ್ನ ದಾನ ಹಾಗೂ ಮಾನವ ಸೇವೆಯಲ್ಲಿ ಎರಡು ಜೊತೆ ಜೊತೆಯಲ್ಲಿ ಸಾಗಿವೆ. ನಮ್ಮ ಕಮಿಟಿಯ ಎಲ್ಲ ಸದಸ್ಯರು ಬಹಳ ಖುಷಿಯಿಂದ ಸಜ್ಜಾದೆ ನಶೀನರ ಹೆಸರನ್ನು ಆಯ್ಕೆ ಮಾಡಿದರು. ಈ ಎರಡು ಸಂಸ್ಥೆಗಳು ರಾಷ್ಟ್ರೀಯ ಐಕ್ಯತೆ, ಸಾಮರಸ್ಯ, ಸೌಹಾರ್ದತೆಯನ್ನು ಮೂಡಿಸುತ್ತವೆ. ಸಯ್ಯದ ಮುಹಮ್ಮದ ಅಲಿ ಅಲ್ ಹುಸೇನಿಯವರಿಗೆ ಡಾಕ್ಟರೇಟ್ ನೀಡಿರುವುದು ಸಂತೋಷವಾಗಿದೆ. ಬಸವರಾಜ ದೇಶಮುಖ ಕಾರ್ಯದರ್ಶಿ, ಶರಣಬಸವ ವಿದ್ಯಾ ವರ್ಧಕ ಸಂಘ.**

ಈ ಮೊದಲು ಕಾರಣ ನಿಮಿತ್ಯ ಶರಣಬಸವ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಸಜ್ಜಾದೆ ನಶೀನರು ಡಾಕ್ಟರೇಟ್ ಸ್ವಿಕರಿಸಲು ಹಾಜರಿರಲಿಲ್ಲ. ಆದ್ದರಿಂದ ಬುಧವಾರ ಮಧ್ಯಾಹ್ನ ಬಡಿ ದೇವಡಿಯಲ್ಲಿ ಪದವಿ ಪ್ರದಾನ ಮಾಡಲಾಯಿತು.

ಶರಣಬಸವೇಶ್ವರ್ ಸಂಸ್ಥಾನದ 9ನೇ ಪೀಠಧಿಪತಿ ಚಿ. ದೊಡ್ಡಪ್ಪ ಅಪ್ಪಾ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಶ್ರೀ ಬಸವರಾಜ ದೇಶಮುಖ, ನಿರ್ದೇಶಕರು ಡಾ. ವಿ. ಡಿ. ಮೈತ್ರಿ, ವಿಶ್ವವಿದ್ಯಾಲಯದ ಕುಲಪತಿ ಡಾ. ಅನಿಲಕುಮಾರ್ ಜಿ ಬಿಡವೆ, ಕುಲಸಚಿವರು ಡಾ.ಎಸ್. ಜಿ. ಡೊಳ್ಳೆಗೌಡರ್, ಕುಲಸಚಿವರು ಮೌಲ್ಯಮಾಪನ ಡಾ. ಎಸ್ ಎಚ್ ಹೊನ್ನಳ್ಳಿ, ಡೀನ್ ಲಕ್ಷ್ಮಿ ಪಾಟೀಲ್ ಮಾಕಾ, ಟಿ ವಿ ಶಿವಾನಂದನ, ಕೆಬಿಎನ್ ವಿಶ್ವವಿದ್ಯಾಲಯದ ನಿರ್ದೇಶಕ ಡಾ ಮುಸ್ತಫಾ ಅಲ ಹುಸ್ಸೇನಿ, ಉಪ ಕುಲಪತಿ ಪ್ರೊ. ಅಲಿ ರಜಾ ಮೂಸ್ವಿ, ಸಮ ಉಪಕುಲಪತಿ ಪ್ರೊ. ಅಶಫಾಕ ಅಹ್ಮದ, ಕುಲಸಚಿವ ವಿಲಾಯತ ಅಲಿ, ಕೆಈಎಸ್ ಸೇಕ್ರೆಟರಿ ಪ್ರೊ. ಎಎಮ್ ಪಠಾಣ, ಐಕ್ಯೂ ಎ ಸಿ ನಿರ್ದೇಶಕ ಡಾ ಬಷೀರ್ ಹಾಗೂ ಡೀನರಾದ ಪ್ರೊ ನಿಶಾತ ಆರಿಫ್ ಹುಸ್ಸೇನಿ, ಡಾ ಜಮಾ ಮೂಸ್ವಿ, ಡಾ ಗುರು ಪ್ರಸಾದ, ಡಾ ಶ್ರೀನಿವಾಸ, ಡಾ ಸುಭಾಸ ಕಮಲ, ಹಾಜರಿದ್ದರು.

## ಕಣ್ಣಿನ ಉಚಿತ ಶಿಬಿರ ಯಶಸ್ವಿ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

ನಗರದ ಕಣ್ಣಿ ಮಾರ್ಕೆಟ್‌ನಲ್ಲಿ ಅಲ್ಲಮಪ್ರಭು ಪಾಟೀಲ್ ಅಭಿಮಾನಿಗಳ ಮುಸ್ಲಿಂ ಅಲ್ಪಸಂಖ್ಯಾತರ ಸಂಘದ ವತಿಯಿಂದ ಕಾಂಗ್ರೆಸ್ ಮುಖಂಡ ಶರಣ್ ಅಲ್ಲಂಪ್ರಭು ಪಾಟೀಲ್ ಅವರ ಜನ್ಮದಿನದ ನಿಮಿತ್ಯ ಶ್ರೀ ಸಿದ್ಧರಾಮೇಶ್ವರ ನೇತ್ರ ಆಸ್ಪತ್ರೆ ವತಿಯಿಂದ ಬೃಹತ್ ಉಚಿತ ಕಣ್ಣಿನ ಶಿಬಿರ ಕಾರ್ಯಕ್ರಮ ಆಯೋಜನೆ ಮಾಡಲಾಯಿತು.

ಈ ಸಂದರ್ಭದಲ್ಲಿ ಡಾ. ಸಿರಾಜ್ ಬಾಬಾ ಸಜ್ಜದೆ ನಷೀನ್ ಶೇಕ್ ರೋಜಾ ದರ್ಗಾ ಶರೀಫ್ ಅವರು ದಿವ್ಯ ಸಾನಿಧ್ಯ ವಹಿಸಿದರು, ಕಾರ್ಯಕ್ರಮ ಆಯೋಜಕ ಮೋದಿನ್ ಪಟೇಲ್ ಅಣಬಿ, ಕಾಂಗ್ರೆಸ್ ಮುಖಂಡರಾದ ಇಲಿಯಾಸ್ ಸೇಠ ಬಾಗಬಾನ್, ಶೇಖ ಹುಸೇನ್ ಬಾಬಾ, ರುಕುಂ ಪಟೇಲ್ ಕೊಡಿ, ಮುಸ್ತಾಕ್ ಸೇಟ್, ರಜಾಕ್ ಪಟೇಲ್, ಸೈಯದ್ ಏಜಾಜ್‌ಅಲಿ ಇನಾಮ್ದಾರ್, ಅಮಜದ ವಕೀಲರು, ಚನ್ನು ಪಾಟೀಲ್, ಸುಭಾಷ್ ಡೆಂಕಿ, ಸಾಜಿದ್ ಪಟೇಲ್, ಪಾಷಾಮಿಯ, ಮಹೆಬೂಬ್ ಪಟೇಲ್ ಬಿದ್ದಪುರ್, ಇಮ್ರಾನ್,



ಶಪ್ಪು, ಶಬೀರ್ ಬಿಲ್ಡರ್, ರಿಯಾಜ್ ಪಟೇಲ್, ಸೈರಾಬಾನು, ಶೇಖ ಸಮ್ರಿನ್, ಫಾತಿಮಾ, ಅನಿತಾ ಜಮಾದಾರ್, ಸಂಗೀತ ಪಾಟೀಲ್, ಗೀತಾ, ವಕೀಲ ಪಟೇಲ್, ವಜೀರ್ ಪಟೇಲ್, ಕಿಶೋರ್ ಗಾಯಕವಾಡ, ಸಂದೀಪ್ ಮಾಳಗಿ, ಫೌಜಿಯಾ ಬೇಗಂ, ಅಹಮದಿ ಬೇಗಮ್, ಪರ್ವೀನ್ ಬೇಗಂ, ಸುಗ್ರಬೆಗಂ, ಕಣ್ಣಿ ಮಾರ್ಕೆಟ್ ಸಂಘದ ಅಧ್ಯಕ್ಷ ಮಕ್ಬೂಲ್ ಪಟೇಲ್, ಸಲೀಂ, ಜಿಲಾನ್ ಗುತ್ತೇದಾರ್ ಸೇರಿದಂತೆ ಇತರರು ಇದ್ದರು.

ಮೋದಿನ್ ಪಟೇಲ್ ಅಣಬಿ ಅವರು ಸುಮಾರು 300 ರೋಗಿಗಳು ತಪಾಸಣೆ ಮಾಡಿಸಿದರು. ಹಾಗೂ ಅನೇಕ ರೋಗಿಗಳಿಗೆ ಶಸ್ತ್ರ ಚಿಕಿತ್ಸೆ ಮಾಡಲಾಯಿತು. ಈ ಕಣ್ಣಿನ ಶಿಬಿರನ್ನು ಯಶಸ್ವಿಯಾಗಿ ನಡೆಯಿತು.

## ಕರಾವಳಿ ಉತ್ಸವದಲ್ಲಿ ಹೆಲಿಕ್ಯಾಪ್ಟರ್ ಜಾಲಿ ರೈಡ್‌ಗೆ ಸತೀಶ್ ಕೆ. ಸೈಲ್ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ಕಾರವಾರ;





ಕರಾವಳಿ ಉತ್ಸವದ–2025 ರ ಅಂಗವಾಗಿ ಹೆಲಿಕ್ಯಾಪ್ಟರ್ ಜಾಲಿ ರೈಡ್‌ಗೆ ಕಾರವಾರದ ಲಂಡನ್ ಬ್ರಿಡ್ಜ್ ಬಳಿ ಕರ್ನಾಟಕ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ್ ಕೆ. ಸೈಲ್ ಬುಧವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಹೆಲಿಕ್ಯಾಪ್ಟರ್ ಜಾಲಿ ರೈಡ್ ನಡೆಸಲು ತಹಶೀಲ್ದಾರ, ಲೋಕೋಪಯೋಗಿ ಇಲಾಖೆ, ನಗರಸಭೆ, ಅರಣ್ಯ ಇಲಾಖೆ ಹಾಗೂ ಇತರೆ ಇಲಾಖೆ ಅಧಿಕಾರಿಗಳು ಮತ್ತು ಇವೆಂಟ್ ಮ್ಯಾನೇಜ್ ಮೆಂಟ್ ಅವರ ಸಹಕಾರ ಅಪಾರವಾಗಿದೆ ಎಂದರು.

ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಮಾತನಾಡಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪ್ರತಿ ಟಿಕೆಟ್‌ಗೆ ರೂ 3,900 ನಿಗಧಿಪಡಿಸಲಾಗಿದೆ. ಇಂದು ಎಂಸಿಎ ಅಧ್ಯಕ್ಷ ಹಾಗೂ ಶಾಸಕ ಸತೀಶ್ ಸೈಲ್ ಅವರು ಅಧ್ಯಕ್ಷತೆಯಲ್ಲಿ ವಿಶೇಷವಾಗಿ ಆಶಾ ನಿಕೇತನ ವಿಶೇಷ ಶಾಲೆಯ ವಿದ್ಯಾರ್ಥಿಗಳಿಗೆ ಹೆಲಿಕ್ಯಾಪ್ಟರ್ ರೈಡ್ ಮಾಡುವ ಮೂಲಕ ಚಾಲನೆ ನೀಡಲಾಗಿದೆ. ಮುಂದಿನ 5 ದಿನಗಳ ಕಾಲ ಹೇಲಿಕ್ಯಾಪ್ಟರ್ ರೈಡ್ ಬೆಳಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಹಾರಡಲಿದ್ದು, ಹೇಲಿಕ್ಯಾಪ್ಟರ್ ಕಾರವಾರ ಪ್ರದೇಶವನ್ನು 7 ನಿಮಿಷದಲ್ಲಿ ಸುತ್ತುಹಾಕಲಾಗುವುದು ಎಂದರು.

ಹೆಲಿಕ್ಯಾಪ್ಟರ್‌ನ ಮೊದಲ ಜಾಲಿ ರೈಡ್ ಆಗಿ, ಆಶಾನಿಕೇತನ ವಿಶೇಷ ಶಾಲೆಯ ವಿದ್ಯಾರ್ಥಿಗಳ ಹಾರಾಟ ನಡೆಸಿದರು.

ಈ ಸಂದರ್ಭದಲ್ಲಿ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ದಿಲೀಶ್ ಶಶಿ, ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕಿ ಮಂಗಳ ಗೌರಿ ಭಟ್, ಉಪ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ ಮತ್ತಿತರರು ಉಪಸ್ಥಿತರಿದ್ದರು.

# CITATION

**IN THE COURT OF THE PRL. CIVIL JUDGE AND JMFC., AT HUMNABAD.**

**CRL. MISC. No.2083/2025.**

**Petitioners :**

**Mohammad Tahuddin S/o Isaquoddin,** Age: 60-yrs. Occu: Agriculture, R/o Village Godwadi. Tq. Humnabad. Dist. Bidar.

**Respondent:**

The Registrar of Birth and Death through The Chief officer TMC Humnabad. Dist. Humnabad.

**Sub:- Petition U/Sec. 13(3) of Birth and Death Registration Act-1969**

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Mother of petitioner by namely LATE. ZOHRABEE W/O ISAQUODDIN, she was died on 07.07.2007 at Village Ghodwadi. Tq. Humnabad, Dist. Bidar. The petitioner claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 22.01.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 17-12-2025.**

**//By order of the court//**

**Chief Ministerial Officer,**

**Prl. Civil Judge & JMFC Court,**

**Humnabad.**

# CITATION

**IN THE COURT OF THE PRL. CIVIL JUDGE AND JMFC., AT HUMNABAD.**

**CRL. MISC. No.2933/2025.**

**Petitioners :**

1. **Dharamraj S/o Late. Adeppa,** Age: 72-year, Occu: Labour.
2. **Vita Bai D/o Late. Adeppa. W/o Bakappa.** Age: 70-year. Occu: Household.
3. **Kashamma D/o Late. Adeppa. W/o Hanamanth.** Age: 71-year, Occu: Household

All R/o Hallikhed-K Wadi. Tq. Humnabad. Now at Kitta. Tq. Basavakalyan.

**Respondent:**

The Registrar of Birth and Death through The Tahasildar Humnabad.

**Sub: Petition U/Sec. 13(3) of Birth and Death Registration Act-1969**

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner No. 1 to 3. Deceased by namely LATE. ADEPPA S/O SAIBANNA, he is died on 01.06.1984 at Village Hallikhed-K wadi. Tq. Humnabad. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 22.01.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 19-12-2025**

**//By order of the court//**

**Chief Ministerial Officer,**

**Prl. Civil Judge & JMFC Court, Humnabad.**

# :CITATION:

**IN THE COURT OF THE PRL. CIVIL JUDGE AND JMFC., AT HUMNABAD.**

**CRL. MISC. No.2934/2025.**

**Petitioners :**

1. **Rekha W/o Late Mallikarjun @ Bothi Kashanna** Mallappa, Age: 29-yrs. Occu: House hold
2. **Nandini D/o Late Mallikarjun Bothi Kashanna Mallappa,** Age: 09-yrs. Minor U/G real and natural Mother Petitioner No.1 Both R/o Village Sindhankera. Tq. Humnabad. Dist. Bidar.

**Respondent:**

The Registrar of Birth and Death through The Tahasildar Humnabad. Dist. Bidar

**Sub: Petition U/Sec. 13(3) of Birth and Death Registration Act-1969**

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Husband of petitioner No.1 and Father of petitioner No.2 by namely LATE. MALLIKARJUN @ BOTHI KASHANNA MALLAPPA S/O KASHANNA, who is died on 25.12.2022 at Village Sindhankera, Tq. Humnabad Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 22.01.2026 at 11.00 AM in person or any authorized pleader to answer such claim otherwise the matter will be heard and determined in your absence as per law.

**Given under my hand and seal of he court, this the 19-12-2025.**

**//By order of the court//**

**Chief Ministerial Officer,**

**Prl. Civil Judge & JMFC Court, Humnabad.**

# PAPER PUBLICATION

IN THE COURT OF SENIOR CIVIL JUDGE AT HUMNABAD P&SC No.04/2025

**Petitioners**

1. **Sharanappa S/o Sidramappa Guragol** age 74 yrs occu; pensioner R/o H.No.2-168 Shivachanar road Chetty Galli Humnabad.
2. **Santosh Kumari W/o Vithal rao Patil** age 46 yrs occup; Private Service and house hold R/o H.No.2-168 Shivachander road chetty galli Humnabad.
3. **Revansiddappa S/o Sharanappa Guragol** age 45 yrs occu; Agri R/o H.No.2-168 Shivachander road chetty galli Humnabad.
4. **Sangeeta W/o Mahadevappa Dongargi** age 42 yrs occu; House hold R/o Sai Colony Manik Nagar To Humnabad.
5. **Nagabasavanna S/o Sharanappa Guragol** aged 41 yrs occu: Agri and service R/o H.No.2-168 Shivachanar road Chetty Galli Humnabad.

**//Vs//**

**Respondent**

: To whom so ever it may concern.

**Sub:- Petition under section 372 of Indian Succession Act..**

To,

**Respondent-To whom so ever it may concern.**

Whereas, the petitioners No.1 to 5 filed the instant P&SC before Civil Judge Senior division Humnabad for issuance of succession certificate of the deceased Lalita W/o Sharanappa Guragol R/o Humnabad Dist Bidar she died on 02-08-2025. During the life time of deceased Lalitabai, was having account with postal department Br. Humnabad, so she died without mentioning name of nominee in the nominee column of her account. So accordingly the petitioners filed the instant petition against to whom so ever it may be concerned, the petitioners No.1 to 5 have filed the instant petition and they are the only legal heirs and successors of the deceased Lalita so if any other persons having interest, rights etc, then they be appeared before this Hon'ble court and join the instant case with claiming their right on or before 02-02-2026. failing which this court will proceed against you as per law.

**Given under my hand and the seal of the court, on 02th day of February-2025.**

**//By order of the Court//**

**(C.M.O)**

**Senior Civil Judge & JMFC Court**

**Humnabad.**



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2025–28ನೇ ಸಾಲಿನ ಚುನಾವಣೆಯನ್ನು ಪ್ರಾಮಾಣಿಕವಾಗಿ, ಪಾರದರ್ಶಕವಾಗಿ ನಡೆಸಿದಕ್ಕಾಗಿ ಸಹಾಯಕ ಚುನಾವಣಾಧಿಕಾರಿ ಉಮಾಶಂಕರ ಎಸ್.ಚಿನಮ್ಮಳಿ ಅವರಿಗೆ ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್ ಅವರು ಸನ್ಮಾನಿಸಿದರು, ನಗರ ಪೊಲೀಸ ಆಯುಕ್ತರಾದ ಡಾ. ಶರಣಪ್ಪ ಎಸ್.ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳದಾ ಅಡ್ಡೂರು ಶ್ರೀನಿವಾಸಲು, ಶರಣಬಸವ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಟಿ.ವ್ಹಿ.ಶಿವಾನಂದನ್, ಸಂಯುಕ್ತ ಕರ್ನಾಟಕ ಪತ್ರಿಕೆಯ ಸ್ಥಾನಿಕ ಸಂಪಾದಕರಾದ ಪ್ರಭಾಕರ ಜೋಶಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಬಾಬುರಾವ ಯಡ್ರಾಮಿ, ಭೀಮಾಶಂಕರ ಫಿರೋಜಾಬಾದ, ಪ್ರವೀಣ ರೆಡ್ಡಿ ಹಾಗೂ ಸತೀಶಕುಮಾರ ಜೇವರ್ಗಿ ಇತರರು ಚಿತ್ರದಲ್ಲಿ ಕಾಣಬಹುದು.

# ಜನ ಸಾಗರದ ಮಧ್ಯೆ ಅದ್ದೂರಿಯಾಗಿ ರಥೋತ್ಸವ ಜರುಗಿತು



ಮಲ್ಲಮ್ಮ ನುಡಿ ವಾರ್ತೆ.

ಬಸವಕಲ್ಯಾಣ: ತಾಲೂಕಿನ ಸುಕ್ಷೇತ್ರ ಹಾರಕೂಡ ಸಂಸ್ಥಾನ ಹಿರೇಮಠದಲ್ಲಿ ಪೂಜ್ಯಶ್ರೀ ಸದ್ಗುರು ಚನ್ನಬಸವಶಿವಯೋಗಿಗಳವರ 74ನೇ ಜಾತ್ರಾ ಮಹೋತ್ಸವದ ನಿಮಿತ್ಯ ಬುಧುವಾರ ಬೆಳಗ್ಗೆ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಶಿವಯೋಗಿಗಳ ಗದ್ದುಗೆಗೆ ಗೌರವ ಸಮರ್ಪಿಸಿದರು.

ನಂತರ ಸಂಜೆ 6 ಗಂ–ಟೆಗೆ ಸದ್ಗುರು ಶ್ರೀ ಚನ್ನಬಸವ ಶಿವಯೋಗಿಗಳವರ ರಥೋತ್ಸವ ಅದ್ದೂರಿಯಾಗಿ ಜರುಗಿತು. ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರ ನೇತೃತ್ವದಲ್ಲಿ ರಥೋತ್ಸವ ಹಾಗೂ ಚಿಂತನ ಗೋಷ್ಠಿಯು ನಡೆಯಿತು. ಈ ಸಂದರ್ಭದಲ್ಲಿ ಹುಲಸೂರಿನ ಪೂಜ್ಯ ಶ್ರೀ ಡಾ ಶಿವಾನಂದ ಮಹಾಸ್ವಾಮಿಜಿ. ಇಳಕಲ್ ನ ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಡಾ. ಗುರುಮಹಾಂತ ಸ್ವಾಮಿಗಳು. ಸಾಯಗಾಂವದ ಪೂಜ್ಯ ಶ್ರೀ ಶಿವಾನಂದ ದೇವರು. ಮಾಜಿ ಸಚಿವರಾದ ರೇವು ನಾಯಕ ಬೆಳಮಗಿ. ಶಾಸಕರಾದ ಶರಣು ಸಲಗರ್. ಹುಮನಾಬಾದ ಶಾಸಕರಾದ ಡಾ ಸಿದ್ದಲಿಂಗಪ ಪಾಟೀಲ. ಕಲಬುರ್ಗಿಯ ಗ್ರಾಮಿಣ ಪ್ರದೇಶದ ಶಾಸಕರಾದ ಬಸವರಾಜ ಮತ್ತಿಮೂಡ. ಹುಮನಾಬಾದ ವಿಧಾನ ಪರಿಷತ್ ಸದಸ್ಯ ಭೀಮರಾವ್ ಪಾಟೀಲ್. ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ. ಕಾಡ ಅಧ್ಯಕ್ಷರಾದ ಬಾಬು ಹೊನ್ನನಾಯಕ. ಸಾವಿತ್ರಿ ಸಲಗರ. ಹಾಗೂ ಮಲ್ಲಮ್ಮ ಬಿ. ಪಾಟೀಲ ಅಟ್ಟೂರ. ಧನರಾಜ ತಾಡಂಪ್ಪಳ್ಳಿ.ಸಿದಾಣಟಿಜಜಜಿಟಿಜಜಮ ಗುದಗೆ. ರಾಜಕುಮಾರ ಸಿರಗಾಪುರ. ಜಗನ್ನಾಥ ಪಾಟೀಲ ಮಂತಾಳ. ಮಲ್ಲಿನಾಥ ಹಿರೇಮಠ

ಹಾರಕೂಡ. ಗುರುಲಿಂಗಪ್ಪ ಸೈದಾಪೂರೆ. ವಿಜಯಕುಮಾರ ಖೂಬಾ ನವಲಿಂಗ ಪಾಟೀಲ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸೂಗೂರ(ಕೆ)ನಲ್ಲಿ ವೈಕುಂಠ ದ್ವಾರ ದರ್ಶನ 30 ರಂದು



ಮಲ್ಲಮ್ಮ ನುಡಿ ವಾರ್ತೆ

ಕಾಳಗಿ: ತಾಲೂಕಿನ ಸುಕ್ಷೇತ್ರವಾದ ಸೂಗೂರು(ಕೆ) ಗ್ರಾಮದಲ್ಲಿ ಡಿ.30 ರಂದು ವೆಂಕಟೇಶ್ವರ ಸ್ವಾಮಿಯ ವೈಕುಂಠ ದ್ವಾರ ದರ್ಶನ ಬೆಳಿಗ್ಗೆ 6 ರಿಂದ ರಾತ್ರಿ 8 ಗಂಟೆಯವರೆಗೆ ನಡೆಯಲಿದ್ದು, ಭಕ್ತರು ದರ್ಶನ ಪಡೆದು ಪಾವನರಾಗಬೇಕೆಂದು ವೆಂಕಟೇಶ್ವರ ದೇವಸ್ಥಾನದ ಪ್ರಮುಖ ಆರ್ಚಕ ಶ್ರೀ ಶ್ರೀ ಕೃಷ್ಣದಾಸ ಮಹಾರಾಜರು ತಿಳಿಸಿದ್ದಾರೆ.

ಡಿ.31ರಂದು ಸೂಗೂರು(ಕೆ) ಗ್ರಾಮದ ತಿರುಪತಿ ಚಿಕ್ಕ ತಿರುಪತಿ ಎಂದೇ ಹೆಸರುವಾಸಿಯಾದ ತಿರುಪತಿ ವೆಂಕಟೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ಮಹಾಪ್ರಸಾದ ಹಾಗೂ ವೈಕುಂಠ ದ್ವಾರ ದರ್ಶನ ಬೆಳಿಗ್ಗೆ 6 ರಿಂದ ರಾತ್ರಿ 8 ರವರೆಗೆ ಭಕ್ತರು ಪಡೆಯಬಹುದು ಎಂದು ಅವರು ತಿಳಿಸಿದ್ದಾರೆ.

# ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮ ದಿನೋತ್ಸವ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕುಕನೂರ ತಾಲೂಕಿನ ಮಸಬ ಹಂಚಿನಾಳ ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ದೇಶದ ಹೆಮ್ಮೆಯ ಮಾಜಿ ಪ್ರಧಾನಮಂತ್ರಿಗಳು ಹಾಗೂ ಅಜಾತಶತ್ರು ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮ ದಿನೋತ್ಸವ ಕಾರ್ಯಕ್ರಮ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಹಾಲಪ್ಪ ಆಚಾರ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಹಿರಿಯರಾದ ಬಸವಲಿಂಗಪ್ಪ ಭೂತೆ, ಶಿವಕುಮಾರ ನಾಗಲಾಪುರ ಮಠ, ಶರಣಪ್ಪ ಬಣ್ಣದಬಾವಿ, ಶಂಭು ಜೋಳದ, ಅಮರೇಶ ಹುಬ್ಬಳ್ಳಿ, ಅಯ್ಯನಗೌಡ ಕೆಂಚಮ್ಮ ನವರ, ಬಿಜೆಪಿ ಯುವ ಮೋರ್ಚಾ ತಾಲೂಕ ಅಧ್ಯಕ್ಷ ಕಲ್ಲೇಶಪ್ಪ ಕರಮುಡಿ, ಬಿಜೆಪಿ ಕುಕುನೂರು ನಗರ ಘಟಕದ ಅಧ್ಯಕ್ಷ ಬಸವರಾಜ ಹಾಳಕೇರಿ, ಎಸ್ ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ್ ಕಾಳಿ, ಕರಬಸಯ್ಯ ಬಿನ್ನಾಳ, ಮಂಗಳೇಶ ಮಂಗಳೂರು, ದೊಡ್ಡಯ್ಯ ಗುರುವಿನ, ಚಂದ್ರು ಮರದಡ್ಡಿ, ಪ್ರಕಾಶ್ ಬೋರಣ್ಣವರ, ವೀರೇಶ ಸಬರದ, ಶಿವರಾಜ ಗೌಡಪ್ಪನವರ,

ಮಧು ಬಾರಿಗಿಡದ, ಮಲ್ಲಿಕಾರ್ಜುನ್ ಚೌದ್ರಿ, ಬಾಲರಾಜ್ ಗಾಳಿ, ಜಗನ್ನಾಥ್ ಭೋವಿ, ಚಂದ್ರು ಬಗನಾಳ, ಮಸಬ ಹಂಚಿನಾಳ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಹನುಮಂತ ಬನ್ನಿಕೊಪ್ಪ, ಮುದಿಯಪ್ಪ ವಜ್ರಬಂಡಿ, ವೀರೇಶ ಜಲ್ಲಿ , ಭೀಮೇಶ್ ಬೇವೂರ ಸಂಗಮೇಶ ಗೊಂದಿ, ಹಾಗೂ ಬಿಜೆಪಿ ಪಕ್ಷದ ಹಿರಿಯರು ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಸಾಲುಮರದ ತಿಮ್ಮಕ್ಕಳ ಕಾರ್ಯ ಮಾದರಿಯಾಗಲಿ:ಶಾಸಕ ನಾಡಗೌಡ



ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ: ಮಕ್ಕಳಿಲ್ಲದ ಕೊರಗನ್ನು ಮರೆತು ಸಾವಿರಾರು ಮರಗಳನ್ನು ನೆಟ್ಟು ಅವುಗಳನ್ನು ಪೋಷಿಸಿ ಸ್ವಂತ ಮಕ್ಕಳಂತೆ ಬೆಳೆಸಿದ ವೃಕ್ಷ ಮಾತೆ ಸಾಲುಮರದ ತಿಮ್ಮಕ್ಕಳ ಪರಿಸರ ಕಾಳಜಿ ನಮ್ಮೆಲ್ಲರಿಗೂ ಮಾದರಿಯಾಗಬೇಕಾಗಿದೆ ಎಂದು ಶಾಸಕ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡ(ಅಪ್ಪಾಜಿ) ಹೇಳಿದರು. ಗುರುವಾರ ಹಸಿರು ಸಂಪದ ಬಳಗದ ವತಿಯಿಂದ ಪಟ್ಟಣದ 5 ಮತ್ತು6 ನೇ ವಾರ್ಡಿನ ಉದ್ಯಾನವನದಲ್ಲಿ ಹಮ್ಮಿಕೊಂಡ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಹಸಿರು ಸಂಪದ ಬಳಗದ ಪದಾಧಿಕಾರಿಗಳು ಪಟ್ಟಣದ ಜನರಲ್ಲಿ ಪರಿಸರ ಪ್ರಜ್ಞೆ ಜಾಗೃತಿಗೊಳಿಸುವ ಕಾರ್ಯವನ್ನು ಮಾಡುತ್ತಿರುವುದು ಸಂತೋಷದ ವಿಷಯ ಅವರಿಗೆ ತಾವೆಲ್ಲರೂ ಸಹಕರಿಸಬೇಕು. ಪಟ್ಟಣವನ್ನು ಹಸಿರನ್ನಾಗಿಸುವಲ್ಲಿ ಸಾಮುದಾಯಿಕ ಭಾಗವಹಿಸಿಕೆಯು ಅಷ್ಟೇ ಮುಖ್ಯವಾಗಿದೆ ಮುಂದಿನ ದಿನಗಳಲ್ಲಿ ಈ ಎರಡು ವಾರ್ಡ್ ಗಳ ಉದ್ಯಾನವನವನ್ನು ಅಭಿವೃದ್ಧಿಗೊಳಿಸುವ ಕಾರ್ಯ ಮಾಡಲಾಗುವುದು ಇದರಲ್ಲಿ ಯಾವುದೇ ರೀತಿಯ ರಾಜಕೀಯ ಹಸ್ತಕ್ಷೇಪದ ಅಗತ್ಯವಿಲ್ಲ, ಇಡೀ ಪಟ್ಟಣದ ಅಭಿವೃದ್ಧಿಗೆ ನಾನು ಬದ್ಧನಾಗಿರುವೆ ಈ ಉದ್ದೇಶಕ್ಕಾಗಿಯೇ ಕಳೆದ ಐದು ದಿನಗಳಿಂದ ಪಟ್ಟಣದ ಪ್ರವಾಸಿನಲ್ಲಿದ್ದೇನೆ ಪಟ್ಟಣದಲ್ಲಿ ಒಂದು ಸುಸಜ್ಜಿತವಾದ ಕ್ರೀಡಾಂಗಣ ನಿರ್ಮಾಣದ ಬೇಡಿಕೆಯನ್ನು ಇಡಲಾಗಿದೆ ಇದನ್ನು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಮಾತನಾಡಿ ಕ್ರಮ ವಹಿಸಲು ಪ್ರಯತ್ನಿಸುತ್ತೇನೆ ಎಂದರು. ಕರವೇ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜೈ ಭೀಮ ಮುತ್ತಗಿ ಪ್ರಸ್ತಾವಿಕವಾಗಿ ಮಾತನಾಡಿದರು. ಈ ಸಮಯದಲ್ಲಿ ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ್ ಅಹಮದ್ ಖಾಜಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ, ಪಿಎಸ್ಐ ಜ್ಯೋತಿ ಖೋತ್, ಅರಣ್ಯಾ ಧಿಕಾರಿಗಳಾದ ಬಸನಗೌಡ ಬಿರಾದಾರ, ಗಿರೀಶ್ ಹಲಕುಡೆ, ಹಸಿರು ಸಂಪದ ಬಳಗದ ಅಧ್ಯಕ್ಷ ಡಾ.ವಿಜಯಕುಮಾರ ಕಾರ್ಚಿ, ಉಪಾಧ್ಯಕ್ಷ ಪ್ರಭುಗೌಡ ಮದರಕಲ್ಲ, ಸಂಚಾಲಕ ಎಸ್.ಎಸ್. ಗಡೇದ, ಶ್ರೀಕಾಂತ್ ಪತ್ತಾರ, ಡಾ.ನಜೀರ ಕೋಳ್ಯಾಳ, ಪ್ರಶಾಂತ ಜನಾದ್ರಿ, ಮುಖಂಡರಾದ ಸಿದ್ದನಗೌಡ ಪಾಟೀಲ ನಾವದಗಿ, ನೀಲಮ್ಮಗೌಡತಿ ಪಾಟೀಲ, ಶರಣು ಧಣಿ, ಸಂಗನಗೌಡ ಅಸ್ಕಿ, ಮೆಹಬೂಬ ಕೆಂಭಾವಿ, ಬಸನಗೌಡ ಜೈನಾಪೂರ, ಜೈಸಿಂಗ್ ಮೂಲಿಮನಿ, ಇಬ್ರಾಹಿಂ ಮನ್ಸೂರ್, ಮಹೆಬೂಬ ಲಾಹೋರಿ, ಮಹೆಬೂಬಶಾ ಮಕಾನದಾರ, ಮುದ್ದು ಪಟೇಲ, ಶಫೀಕ್ ಇನಾಮದಾರ, ಸದ್ದಾಮ್ ಹೊನ್ನಳ್ಳಿ, ಮೋದಿನ ನಗಾರ್ಚಿ, ಅಶ್ರಫ್ ಜಮಾದಾರ, ರಿಯಾಜ್ ಮುಲ್ಲಾ, ಜಾವೇದ ಕೆಂಭಾವಿ, ಇಕ್ಬಾಲ್ ಆಗ್ರಾ, ಮುರ್ತುಜಾ ಜಮಾದಾರ, ಇಬ್ರಾಹಿಂ ಆರಬೋಳ, ಪುರಸಭೆ ಸಿಬ್ಬಂದಿಗಳು ಹಾಗೂ ವಾರ್ಡ್ ನಿವಾಸಿಗಳು ಇದ್ದರು.

ತಾಳಿಕೋಟಿ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಬದ್ಧನಾಗಿರುವೆ ಇದರಲ್ಲಿ ಯಾವುದೇ ರೀತಿಯ ರಾಜಕೀಯ ಮಾಡುವ ಅಗತ್ಯ ಇಲ್ಲ, ಈ ಕಾರ್ಯದಲ್ಲಿ ನನಗೆ ಅಧಿಕಾರಿಗಳ ಹಾಗೂ ಸಾರ್ವಜನಿಕರ ಸಹಕಾರದ ಅಗತ್ಯ ಇದೆ. ಶಾಸಕ ಅಪ್ಪಾಜಿ ನಾಡಗೌಡ.

# ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ : ತಾಲೂಕಿನ ಕಾತರಕಿ ಗುಡ್ಲಾನೂರು ವಲಯದಲ್ಲಿ ಇಂದು ಸಾಮೂಹಿಕ ಸತ್ಯ ನಾರಾಯಣ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ ಹಮ್ಮಿ ಕೊಂಡಿದ್ದು ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ಶ್ರೀ ಷ, ಬ್ರ, 108 ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಶ್ರೀ ಷ, ಬ್ರ, 108 ಮರುಳುರದ್ಯಾ ಶಿವಾಚಾರ್ಯ ಮಹಾಸ್ವಾಮಿಗಳು ಹಿರೇಮಠ ಹಾಗೂ ಉದ್ಘಾಟನೆಯನ್ನು ಜನಜಾಗೃತಿ ವೇದಿಕೆ ಯೋಜನಾಧಿಕಾರಿಗಳು ಶ್ರೀ ನಾಗೇಶ್ ಉದ್ಘಾಟನೆ ಮಾಡಿ ಯೋಜನಾ ಕಾರ್ಯಕ್ರಮ ಬಗ್ಗೆ ಯೋಜನೆ ಮೂಲ ಹಿನ್ನಲೆ ಬಗ್ಗೆ ಮಾಹಿತಿ ನೀಡಿದರು ಹಾಗೂ ಮಾನ್ಯ ಯೋಜನಾಧಿಕಾರಿಗಳು ಶ್ರೀ ಜಗದೀಶ ಕೆ ಎಚ್ ಪ್ರಸ್ತಾವಿಕ ಮಾತುಗಳನ್ನು ಆಡಿದರು ಹಾಗೂ ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಶಿವಮ್ಮ ಭೈರಣ್ಣನವರ

ಮುಖ್ಯ ಅತಿಥಿಗಳಾದ ವೆಂಕನಗೌಡ್ರ್ ಹಿರೇಗೌಡ್ರ, ವಿರುಪಾಕ್ಷ ಗೌಡ ಪೊಲೀಸ್ ಪಾಟೀಲ್, ಯರಿಯಪ್ಪ ಹಿರೇಗೌಡ್ರ್, ರಾಮನಗೌಡ ನಂದನಗೌಡ್ರ, ಯಲ್ಲನಗೌಡ ಮಾಲಿಪಾಟೀಲ್, ಕೊಟ್ರೇಯ್ಯ ಅಬ್ಬಿಗೇರಿಮಠ, ನಾಗರಾಜ್ ಹುರಕಡ್ಲಿ, ಬಸವರಾಜ್ ಉಳ್ಳೆಗಡ್ಡಿ , ಈ ಕಾರ್ಯಕ್ರಮವನ್ನು ವಲಯದ ಮೇಲ್ವಿಚಾರಕರಾದ ವಿಶ್ವನಾಥ್ ಹಿರೇಮಠ್ ಸ್ವಾಗತಿಸಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಪ್ರಗತಿ ಬಂದು ಸ್ವ ಸಹಾಯ ಸಂಘದ ಸದಸ್ಯರು ಒಕ್ಕೂಟ ಪದಾಧಿಕಾರಿಗಳು ಸೇವಾಪ್ರತಿನಿಧಿಗಳು ಭಾಗವಹಿಸಿದರು.

# ತಾಲ್ಲೂಕು ಮಟ್ಟದ ಕ್ರೀಡಾಕೂಟ 27ಕ್ಕೆ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ : ಮೇರಾ ಯುವ ಭಾರತ್ ಕಲ್ಬುರ್ಗಿ, ಮತ್ತು ಕಲ್ಬುರ್ಗಿ ಯೂಥ್ ಅಡ್ವೆಂಚರ್ ಸ್ಪೋರ್ಟ್ಸ್ ಅಸೋಸಿಯೇಷನ್ ವತಿಯಿಂದ.ಸರ್ಕಾರಿ ಪದವಿ ಪೂರ್ವ ಕಾಲೇಜು ಮಾಡಬೋಳ ಆಟದ ಮೈದಾನದಲ್ಲಿ ಡಿಸೆಂಬರ್ 27 ರಂದು ಕಾಳಗಿ ತಾಲೂಕು ಮಟ್ಟದ ಕ್ರೀಡಾಕೂಟ ಆಯೋಜಿಸಲಾಗಿದೆ.ಕ್ರೀಡಾಕೂಟದಲ್ಲಿ ವೈಯಕ್ತಿಕ ಹಾಗೂ ಗುಂಪು ಸ್ಪರ್ಧೆಗಳು ನಡೆಯಲಿವೆ. ವೈಯಕ್ತಿಕ ಸ್ಪರ್ಧೆಯಲ್ಲಿ ಯುವಕರ ವಿಭಾಗದಲ್ಲಿ ಬ್ಯಾಡ್ಮಿಂಟನ್, ವೇಟ್ ಲಿಫ್ಟಿಂಗ್, ಯುವತಿಯರ ವಿಭಾಗದಲ್ಲಿ 100 ಮೀಟರ್ ಓಟ ಹಾಗೂ ಸ್ಲೋ ಸೈಕ್ಲಿಂಗ್ ಸ್ಪರ್ಧೆಗಳು ಜರುಗಲಿವೆ. ಗುಂಪು ಸ್ಪರ್ಧೆಯಲ್ಲಿ ಯುವಕರ ವಿಭಾಗದಲ್ಲಿ ವಾಲಿಬಾಲ್ ಹಾಗೂ ಯುವತಿಯರ ವಿಭಾಗದಲ್ಲಿ ಕಬಡ್ಡಿ ಸ್ಪರ್ಧೆ ಜರುಗಲಿವೆ.ಸ್ಪರ್ಧೆಗಳಲ್ಲಿ ವಿಜೇತರಾದವರು ಜಿಲ್ಲಾಮಟ್ಟದ ಸ್ಪರ್ಧೆಗೆ ಅರ್ಹರಾಗಲಿದ್ದಾರೆ. ಸ್ಪರ್ಧೆಯಲ್ಲಿ ಭಾಗವಹಿಸ

ಬಯಸುವ 15 ರಿಂದ 29 ವರ್ಷಗಳ ಒಳಗಿನ ಆಸಕ್ತರು ಭಾಗವಹಿಸಬಹುದು ಮೊಬೈಲ್ ಸಂಖ್ಯೆ 9741877683 (ದೇವರಾಜ್ ಕನ್ನಡಿಗೆ ), +91 88800 09273(ಮಲ್ಲಿಕಾರ್ಜುನ) ಗೆ ಸಂಪರ್ಕಿಸಿ ಹೆಸರು ನೋಂದಾಯಿಸಬಹುದು ಎಂದು ಯೂಥ್ ಅಡ್ವೆಂಚರ್ ಸ್ಪೋರ್ಟ್ಸ್ ಅಸೋಸಿಯೇಷನ್ ಅಧ್ಯಕ್ಷ ದೇವರಾಜ್ ಕನ್ನಡಿಗ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಲಬುರಗಿ: ಕ್ರೈಸ್ತ ಧರ್ಮಿಯವರ ಪವಿತ್ರ ಹಬ್ಬವಾಗಿರುವ ಕ್ರಿಸ್‌ಮಸ್ ಹಬ್ಬವನ್ನು ನಗರದ ವಿಜಯವಿದ್ಯಾಲಯ ಚರ್ಚ್‌ನಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಕ್ರಿಸ್‌ಮಸ್ ಹಬ್ಬ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಫಾದರ್ಸ್ ರವರು, ಮಹಿಳೆಯರು. ಮಕ್ಕಳು ಸೇರಿದಂತೆ ಕ್ರೈಸ್ತ ಸಮಾಜದ ಬಾಂಧವರು ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.



ಕಲಬುರಗಿ: ಕ್ರೈಸ್ತ ಧರ್ಮಿಯವರ ಪವಿತ್ರ ಹಬ್ಬವಾಗಿರುವ ಕ್ರಿಸ್‌ಮಸ್ ಹಬ್ಬವನ್ನು ನಗರದ ಹಿಂದುಸ್ಥಾನಿ ಕವನೆಂಟ್ ಚರ್ಚ್‌ನಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಕ್ರಿಸ್‌ಮಸ್ ಹಬ್ಬ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಫಾದರ್ಸ್ ರವರು, ಮಹಿಳೆಯರು. ಮಕ್ಕಳು ಸೇರಿದಂತೆ ಕ್ರೈಸ್ತ ಸಮಾಜದ ಬಾಂಧವರು ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಕ್ರಿಸ್‌ಮಸ್, ಹೊಸ ವರ್ಷಾಚರಣೆಯ ನಿಮಿತ್ತ ಗೋಕರ್ಣಕ್ಕೆ ಲಕ್ಷಾಂತರ ಪ್ರವಾಸಿಗರ ಆಗಮನ ಟ್ರಾಫಿಕ್ ಜಾಮ್ ತಡೆಯಲು ಪೊಲೀಸರ ಹರಸಾಹಸ

ಗೋಕರ್ಣ : ಕ್ರಿಸ್‌ಮಸ್ ಹಬ್ಬದ ನಿಮಿತ್ತ ಮತ್ತು ಹೊಸ ವರ್ಷಾಚರಣೆಯ ಸಮಯದ ಹಿನ್ನೆಲೆಯಲ್ಲಿ ಲಕ್ಷಾಂತರ ಜನರು ಗೋಕರ್ಣಕ್ಕೆ ಲಗ್ಗೆ ಇಡುತ್ತಿದ್ದಾರೆ. ಇಲ್ಲಿಯ ರಸ್ತೆಗಳು ಇಕ್ಕಟ್ಟಾಗಿರುವುದರಿಂದ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದೆ. ಆದರೆ ಪೊಲೀಸರು ಸಾಕಷ್ಟು ಶ್ರಮಪಟ್ಟು ಯಾರಿಗೂ ತೊಂದರೆಯಾಗದಂತೆ ಸಾಕಷ್ಟು ಶ್ರಮ ವಹಿಸಿ ಕಾರ್ಯನಿರ್ವಹಿಸುತ್ತಿದ್ದಾರೆ.

ಧಾರ್ಮಿಕ ತಾಣವಾಗಿ ಜತೆಗೆ ಪ್ರವಾಸೋದ್ಯಮದಲ್ಲಿಯೂ ವಿಶ್ವಾದ್ಯಂತ ತನ್ನನ್ನು ಗುರುತಿಸಿಕೊಂಡಿರುವ ಗೋಕರ್ಣಕ್ಕೆ ಪ್ರತಿನಿತ್ಯ ಸಾವಿರಾರು ಭಕ್ತರು ಆಗಮಿಸುತ್ತಲೇ ಇರುತ್ತಾರೆ. ಆದರೆ ಪ್ರತಿವರ್ಷ ಕ್ರಿಸ್‌ಮಸ್ ಹೊಸವರ್ಷಾಚರಣೆಯ ಸಂದರ್ಭದಲ್ಲಿ ಎಗ್ಗಿಲ್ಲದಂತೆ ಜನ ತಂಡೋಪತಂಡವಾಗಿ ಆಗಮಿಸುತ್ತಾರೆ. ವಾಹನಗಳ ಸಂಖ್ಯೆಯೂ ಮಿತಿ ಮೀರಿರುವುದರಿಂದ ಅವುಗಳನ್ನು ಒಂದೆಡೆ ಇಡುವುದು ಕೂಡ ಕಷ್ಟವಾಗುತ್ತದೆ. ಗೋಕರ್ಣ ಪೊಲೀಸರು ಭಕ್ತರಿಗೆ ಮತ್ತು ಪ್ರವಾಸಿಗರಿಗೆ ತೊಂದರೆಯಾಗದಂತೆ ಪೊಲೀಸರಿಗೆ ನಿಯೋಜಿಸಿದ್ದಾರೆ. ಅಷ್ಟೇ ಅಲ್ಲದೇ ಪೊಲೀಸ್ ನಿರೀಕ್ಷಕ ಹಾಗೂ ಪಿಎಸ್‌ಐಗಳು



ಕೂಡ ನೇರವಾಗಿ ತೊಂದರೆ–ಯಾಗದಂತೆ ನೋಡಿಕೊಳ್ಳುತ್ತಿದ್ದಾರೆ. ಆದರೂ ಕೂಡ ಕೈಮೀರಿ ಟ್ರಾಫಿಕ್ ಜಾಮ್ ಆಗುತ್ತಿರುವುದು ಸಾಮಾನ್ಯ ಎಂಬಂತಾಗಿದೆ. ಗುರುವಾರ ಗೋಕರ್ಣದ ಮುಖ್ಯ ಕಡಲತೀರ, ದೇವಾ;ಯ ಸೇರಿದಂತೆ ಹಲವು ಬೀಚ್‌ಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕಂಡುಬರುತ್ತಿದ್ದಾರೆ. ಹೀಗಾಗಿ ಪ್ರತಿಯೊಂದು ಕಡೆಯಲ್ಲಿಯೂ ಜನರಿಗೆ ತೊಂದರೆಯಾಗದಂತೆ ಪೊಲೀಸರನ್ನು ನೇಮಿಸಿದ್ದಾರೆ. ಆದರೆ ಪೊಲೀಸರ ಕೊರತೆಯ ನಡುವೆಯೂ ಈಗಿರುವ ಪೊಲೀಸರು ಇದನ್ನು ನಿರ್ವಹಿಸುತ್ತಿದ್ದಾರೆ.

ಗೋಕರ್ಣಕ್ಕೆ ಸಾವಿರಾರು ಕಾರ್ ಬರುವುದರಿಂದ ಅದನ್ನು ಪಾರ್ಕಿಂಗ್ ಮಾಡಿಸಿ ಪ್ರವಾಸಿಗರನ್ನು ಮತ್ತು ಭಕ್ತರನ್ನು ಬಿಡಲಾಗುತ್ತಿದೆ. ಒಂದೊಮ್ಮೆ ಮಹಾಬಲೇಶ್ವರ ದೇವಸ್ಥಾನದ ಸಮೀಪ ಕಾರ್ ಹೋದರೆ ಮತ್ತೆ ಟ್ರಾಫಿಕ್ ಉಂಟಾಗುತ್ತದೆ. ಹಾಗೇ ಭಕ್ತರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ಪೊಲೀಸರು ದೇವಸ್ಥಾನದ ಬಾಗಿಲನ್ನು ಹೆಚ್ಚು ಸಮಯ ತೆಗೆಯುವಂತೆ ಸಲಹೆ ನೀಡಿ ಭಕ್ತರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ.

“ ಗೋಕರ್ಣ ಎಂದರೆ ಧಾರ್ಮಿಕ ಮತ್ತು ಪ್ರವಾಸಿತಾಣ. ಹೀಗಾಗಿ ಇಲ್ಲಿಗೆ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದರು. ಆದರೆ ಕ್ರಿಸ್‌ಮಸ್ ಮತ್ತು ಹೊಸವರ್ಷಾಚರಣೆಯ ನಿಮಿತ್ತ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುವುದರಿಂದ ಕೆಲವೊಮ್ಮೆ ಟ್ರಾಫಿಕ್ ಜಾಮ್ ಆಗುವ ಸಾಧ್ಯತೆಯಿರುತ್ತದೆ. ಹೀಗಾಗಿ ನಮ್ಮ ಪೊಲೀಸರನ್ನು ಆಯಾಕಟ್ಟಿನ ಜಾಗದಲ್ಲಿ ನಿಲ್ಲಿಸಲಾಗಿದೆ. ಭಕ್ತರಿಗೆ ಮತ್ತು ಪ್ರವಾಸಿಗರಿಗೆ ತೊಂದರೆ–ಯಾಗದಂತೆ ಪೊಲೀಸರು ತಮ್ಮ ಕರ್ತವ್ಯವನ್ನು ಮಾಡುತ್ತಿದ್ದಾರೆ.

– ಶ್ರೀಧರ ಎಸ್.ಆರ್.
ಪೊಲೀಸ್ ನಿರೀಕ್ಷಕರು
ಗೋಕರ್ಣ




ಕಲಬುರಗಿ: ನಗರದ ಪತ್ರಿಕಾ ಭವನದ ಸಾಂಸ್ಕೃತಿಕ ಸಭಾಂಗಣದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮಕ್ಕೆ ಎಸ್‌ಪಿ ಅಡ್ಡೂರು ಶ್ರೀನಿವಾಸುಲು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕರಾಕಾಪ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು, ರಾ.ಪ್ರ.ಕಾ. ಜಿ.ಸಿ. ಲೋಕೇಶ, ಟಿ.ವಿ. ಶಿವಾನಂದನ್, ಪ್ರಭಾಕರ ಜೋಶಿ, ದೇವಿಂದ್ರಪ್ಪ ಕಪನೂರ, ಸಂಗಮನಾಥ ರೇವತಗಾಂವ, ಭವಾನಿಸಿಂಗ ಠಾಕೂರ, ಜಿಲ್ಲಾಧ್ಯಕ್ಷ ಬಾಬುರಾವ ಯಡ್ರಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭೀಮಾಶಂಕರ ಫಿರೋಜಾಬಾದ ಸೇರಿದಂತೆ ಅನೇಕರಿದ್ದರು.

# ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಅಂಗವಾಗಿ ಕ್ರಿಕೆಟ್ ಪಂದ್ಯಾವಳಿ, ಕ್ರೀಡೆಯಿಂದ ಮಾನಸಿಕ ಹಾಗೂ ದೈಹಿಕ ಸದೃಢತೆ: ಪುರುರಾಜ ಸಿಂಗ್ ಸೋಲಂಕಿ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಕ್ರೀಡೆಯಿಂದ ಮಾನಸಿಕ ಹಾಗೂ ದೈಹಿಕ ಸದೃಡತೆ ಸಾಧ್ಯವೆಂದು ಪ್ರೋಬೆಷನರಿ ಐಎಎಸ್ ಅಧಿಕಾರಿ ಪುರುರಾಜ ಸಿಂಗ್ ಸೋಲಂಕಿ ಹೇಳಿದರು. ಅವರಿಂದು ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ರಾಯಚೂರು ರಿಪೋರ್ಟ್ಸ್ ಗಿಲ್ಡ್ ಹಾಗು ಜಿಲ್ಲಾ ಮತ್ತು ಪ್ರಾದೇಶಿಕ ದಿನಪತ್ರಿಕೆಗಳ ಸಂಘ ಹಾಗೂ ವಾರ್ತಾ ಮತ್ತು ಸಾರ್ವಜನಿಕರ ಸಂಪರ್ಕ ಇಲಾಖೆ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಅಂಗವಾಗಿ ಆಯೋಜಿಸಿದ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿ ಪ್ರತಿಯೊಬ್ಬರು ತಮ್ಮ ದಿನ ನಿತ್ಯದ ಯಾಂತ್ರಿಕ ಜೀವನದಲ್ಲಿ ಮಾನಸಿಕ ಹಾಗೂ ದೈಹಿಕ ಸದೃಢತೆ ಸಾಧಿಸಲು ಕ್ರೀಡೆ ಅತ್ಯಂತ ಸಹಕಾರಿಯಾಗಿದ್ದು ನಾವೆಲ್ಲರೂ ನಮ್ಮ ಬಿಡುವಿನ ಸಮಯದಲ್ಲಿ ಕ್ರೀಡೆಗಳಲ್ಲಿ ತೊಡಗಬೇಕೆಂದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಮಾಹಿತಿ ಆಯೋಗದ ಕಲಬುರ್ಗಿ ಪೀಠದ ಆಯುಕ್ತರಾದ ಬಿ.ವೆಂಕಟಸಿಂಗ್ ಮಾತನಾಡಿ ಕ್ರೀಡೆ ನಮ್ಮ ಜೀವನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ ಪತ್ರಕರ್ತರು ತಮ್ಮ ದಿನ ನಿತ್ಯದ ಸುದ್ದಿ ಸಂಗ್ರಹ ಜಂಜಾಟದಲ್ಲಿ ತೊಡಗಿರುತ್ತಾ-ರೆ ಅವರು ಒತ್ತಡ ಜೀವನದಿಂದ ಹೊರಬರಲು ಕ್ರೀಡೆ ಅತಿಮುಖ್ಯವೆಂದು ಅಭಿಪ್ರಾಯಪಟ್ಟ ಅವರು ನಾನು ಸಹ ಪತ್ರಕರ್ತ ವೃತ್ತಿಯಲ್ಲಿರುವ ಸಂದರ್ಭದಲ್ಲಿ ಪ್ರತಿ ವರ್ಷ ಆಯೋಜಿಸುವ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುತ್ತಿದ್ದೆ ಎಂದರು.

ಮತ್ತೋರ್ವ ಅತಿಥಿಗಳಾದ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಮಾರ್ ಸ್ವಾಮಿ ಮಾತನಾಡಿ ಕ್ರೀಡೆಯಿಂದ ಒತ್ತಡದ ಜೀವನದಿಂದ ಮುಕ್ತಿ ಹೊಂದಲು ಸಾಧ್ಯವಾಗುತ್ತದೆ ಎಂದರು. ರಾಯಚೂರು ರಿಪೋರ್ಟ್ಸ್ ಗಿಲ್ಡ್ ಅಧ್ಯಕ್ಷ ವಿಜಯ್ ಜಾಗಟಗಲ್ ಮಾತನಾಡಿ ಕ್ರೀಡೆಯಿಂದ ನಾವು ಲವಲವಿಕೆಯಿಂದಿರಲು ಸಾಧ್ಯ ಪ್ರತಿ ವರ್ಷ ಪತ್ರಕರ್ತರಿಗೆ ಕ್ರೀಡಾಕೂಟ ಆಯೋಜಿಸುತ್ತಾ ಬರಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಪ್ರಾದೇಶಿಕ ದಿನಪತ್ರಿಕೆಗಳ ಸಂಘದ ಅಧ್ಯಕ್ಷರಾದ ಚೆನ್ನಬಸವ ಬಾಗಲವಾಡ, ರಿಪೋರ್ಟ್ಸ್ ಗಿಲ್ಡ್ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಹೂಗಾರ್, ಖಜಾಂಚಿ ಸಣ್ಣ ಈರಣ್ಣ, ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಸಂಪಾದಕರ ಸಂಘದ ಪ್ರಧಾನ ಕಾರ್ಯದರ್ಶಿ ಖಾನ್ ಸಾಬ್ ಮೋಮಿನ್, ಕ್ರೀಡಾ ವಸ್ತುವಾರಿಗಳಾದ ಶ್ರೀಕಾಂತ ಸಾವೂರು, ರಿಪೋರ್ಟ್ ಗಿಲ್ಡ್ ನಿಕಟಪೂರ್ವ ಅಧ್ಯಕ್ಷ ಚೆನ್ನಬಸವಣ್ಣ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣಾ ಶಾವಂತಗೇರಿ ಸೇರಿದಂತೆ ಹಿರಿಯ ಕಿರಿಯ ಪತ್ರಕರ್ತರು, ಅನೇಕರು ಇದ್ದರು.

ಕ್ರೀಡಾಕೂಟದಲ್ಲಿ ಜಿಲ್ಲಾ ಪೊಲೀಸ್ ತಂಡ , ಜಿಲ್ಲಾ ಸರ್ಕಾರಿ ನೌಕರರ ತಂಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ತಂಡ, ಅರಣ್ಯ ಇಲಾಖೆ ತಂಡ , ನ್ಯಾಯವಾದಿಗಳ ತಂಡ, ಕೆಎಸ್‌ಆರ್‌ಟಿಸಿ ಅಧಿಕಾರಿಗಳ ತಂಡ, ಎಲೆಕ್ಟ್ರಾನಿಕ್ ಮೀಡಿಯಾ ಪತ್ರಕರ್ತರ ತಂಡ ಮತ್ತು ಮುದ್ರಣ ಮಾಧ್ಯಮ ಪತ್ರಕರ್ತರ ತಂಡಗಳು ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದಾರೆ.

# ಜಿಲ್ಲೆಯಾದ್ಯಂತ ಶೇ.104 ರಷ್ಟು ಪೋಲಿಯೋ ಲಸಿಕೆ ವಿತರಣೆ ಯಶಸ್ವಿ : ಡಿಹೆಚ್‌ಓ ನಾಯ್ಕ



• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ):**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಜಿಲ್ಲೆಯಾದ್ಯಂತ ಯಶಸ್ವಿಯಾಗಿ ನಿರ್ವಹಿಸಲಾಗಿದೆ ಎಂದು ಡಾ.ಎಲ್.ಆರ್.ಶಂಕರ್ ನಾಯ್ಕ ತಿಳಿಸಿದ್ದಾರೆ.

ಡಿಸೆಂಬರ್.21 ರಂದು ಪೋಲಿಯೋ ಲಸಿಕೆ ಬೂತ್‌ಗಳಲ್ಲಿ 1,27,366 ಮಕ್ಕಳಿಗೆ ಮತ್ತು ಡಿಸೆಂಬರ್.22 ರಿಂದ 24 ರ ವರಗೆ ಪೋಲಿಯೋ ಲಸಿಕೆ ಹಾಕಿಸದೇ ಇರುವ ಮಕ್ಕಳಿಗೆ ಮನೆ ಮನೆಗೆ ಭೇಟಿ ನೀಡಿ 6,843 ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಜಿಲ್ಲೆಯಲ್ಲಿ ಒಟ್ಟು 1,34,209 ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಶೇ.104 ರಷ್ಟು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಗಿದೆ.

ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಜತೆಗೆ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕತೆ-ರ್ಯಯರು ಸೇರಿದಂತೆ ವಿವಿಧ ಇಲಾಖೆಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಿದ ಹಿನ್ನೆಲೆಯಲ್ಲಿ ಪೋಲಿಯೋ ಲಸಿಕೆ ಕಾರ್ಯಕ್ರಮ ಯಶಸ್ಸು ಸಾಧಿಸಲಾಗಿದೆ ಎಂದರು

# ಅಕ್ರಮ ಸೆಂಧಿ ಮಾರಾಟ ಆರೋಪಿಗಳ ಬಂಧನ



• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಅಕ್ರಮ ಸೆಂಧಿ ಮಾರಾಟ ಮಾಡಿದ ಇಬ್ಬರ ಮೇಲೆ ನೇತಾಜಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ನಗರದ ಮೈಲಾರ ನಗರ, ಹರಿಜನವಾಡ, ಬಿ ಆರ್ ಬಿ ವೃತ್ತ ಹಾಗೂ ಜೆ.ಡಿ. ತೋಟ ಸೇರಿದಂತೆ ಇನ್ನಿತರೆ ಬಡಾವಣೆಗಳಲ್ಲಿ ಪ್ರತಿನಿತ್ಯ ರಾತ್ರಿ ಅಕ್ರಮ ಸೇಂದಿ ಮಾರಾಟ ನಿರಂತರವಾಗಿ ನಡೆಯುತ್ತಿದೆ.

ಪ್ರಕರಣಕ್ಕೆ ಸಂಬಂಧಿಸಿ ಎಚ್ಚೆತ್ತುಕೊಂಡ ನೇತಾಜಿ ಪೊಲೀಸರು ಈರಮ್ಮ ಗಂಡ ಶಿವಪ್ಪ ಹಾಗೂ ಮಹೇಶ ತಂದೆ ಶಿವಪ್ಪ ಈ ಇಬ್ಬರ ಮೇಲೆ ಪ್ರಕರಣ ದಾಖಲಿಸಿ 17 ಲೀಟರ್ ಸೆಂಧಿ ಹಾಗೂ ಹಣ ಜಪ್ತಿ ಮಾಡಲಾಗಿದೆ. ಅಕ್ರಮ ಸೆಂಧಿ ಮಾರಾಟ ಮಾಡಲಾಗುತ್ತದೆ ಎಂದು ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ.

## ಕಲ್ಟ್ ಚಲನಚಿತ್ರ ಪ್ರಚಾರಕ್ಕೆ ನಗರಕ್ಕೆ ಆಗಮಿಸಿದ ನಟ ಝೈದ್ ಖಾನ್

# ರೋಮ್ಯಾಂಟಿಕ್ ಇಮೋಷನಲ್ ಚಿತ್ರ : ಝೈದ್ ಖಾನ್

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಕಲ್ಟ್ ಚಿತ್ರ ರೋಮ್ಯಾಂಟಿಕ್ ಹಾಗೂ ಇಮೋಷನಲ್ ನಿಂದ ಕೂಡಿದೆ ಎಂದು ಕಲ್ಟ್ ಚಿತ್ರ ನಟ ಝೈದ್ ಖಾನ್ ಹೇಳಿದರು.

ಅವರಿಂದು ಕಲ್ಟ್ ಚಿತ್ರ ಪ್ರಚಾರಕ್ಕೆ ಆಗಮಿಸಿ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗಾರೊಂದಿಗೆ ಮಾತನಾಡುತ್ತ, ಚಿತ್ರ ಕಲ್ಟ್ ಜ.23ರಂದು ಬಿಡುಗಡೆಯಾಗಲಿದ್ದು, ಚಿತ್ರದ ಪ್ರೋಮೋಷನ್‌ಗಾಗಿ ನಗರಕ್ಕೆ ಆಗಮಿಸಿದ್ದು, ಈಗಾಗಲೇ ರಾಜ್ಯದ 31 ಜಿಲ್ಲೆಗಳು, 88 ತಾಲೂಕಗಳಲ್ಲಿ ಚಿತ್ರದ ಪ್ರಚಾರ ಮಾಡಲಾಗಿದೆ.

ಕಲ್ಟ್ ಒಂದು ಉತ್ತಮ ಚಿತ್ರವಾಗಿದ್ದು, ಪ್ರೀತಿ ಮತ್ತು ಭಾವನತ್ಮಕ ಕಥೆಯಿಂದ



ಕೂಡಿದ್ದು, ಕುಟುಂಬ ಸಮೇತ ನೋಡುವಂತ ಚಿತ್ರವಾಗಿದೆ ಎಲ್ಲರೂ ಕುಟುಂಬದೊಂದಿಗೆ ಬಂದು ಚಿತ್ರ ವೀಕ್ಷಿಸುವ ಮೂಲಕ ಚಿತ್ರ ತಂಡಕ್ಕೆ ಬೆಂಬಲಿಸುವಂತೆ ಮನವಿ ಮಾಡಿದರು.,

ಚಿತ್ರದಲ್ಲಿ ರಚಿತರಾಮ್,ಮಲೈಕಾ ಟಿ.ವಸಪಾಲ್,

ರಂಗಾಯಣ ರಘು ಸೇರಿದಂತೆ ಅನೇಕ ಕಲಾಕರರು ನಟಿಸಿದ್ದಾರೆ. ಚಿತ್ರ ಶೂಟಿಂಗ್ ಬೆಂಗಳೂರು,ಮೈಸೂರು,ಹಂಪಿ ಸೇರಿದಂತೆ ಅನೇಕ ಪಟ್ಟಣ ಪ್ರದೇಶಗಳಲ್ಲಿ ನಡೆದಿದೆ. ಚಿತ್ರ ಕನ್ನಡ ಭಾಷೆಯಲ್ಲಿ ಮಾತ್ರ ಮಾಡಲಾಗಿದೆ.

ಕನ್ನಡಚಿತ್ರಗಳನ್ನುನಿರ್ದೇಶಕರು,ಕಲಾವಿದರು, ಪ್ರೇಕ್ಷಕರ ನಾಡಿ ಮಿಡಿತ ಅರಿತು ಅವರ ನಂಬಿಕೆ ಗಳಿಸುವಂತೆ ಚಿತ್ರಗಳನ್ನು ಮಾಡಬೇಕು ಆಗ ಕನ್ನಡ ಚಿತ್ರಗಳು ಸಹ ಬೇರೆ ಬೇರೆ ಭಾಷೆಗಳ ಚಿತ್ರಗಳು ನಡೆಯುವಂತೆಯಶಸ್ವಿಯಾಗಿನಡೆಯುತ್ತವೆ ಎಂದರು.

ಯುವಕರು ಮಾದಕ ವಸ್ತುಗಳ ದಾಸರಾಗುತ್ತಿದ್ದಾರೆ.

ಇದರ ವಿರುದ್ಧ ಜಾಗೃತಿ ಮೂಡಿಸುವ ಚಿತ್ರಗಳು ಮಾಡುವ ಉದ್ದೇಶವಿದಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು ನಾವು ಜಾಗೃತಿ ಮೂಡಿಸುವದಕ್ಕಿಂತ ಇದರ ನಿಯಂತ್ರಣಕ್ಕೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕೆಂದು ಹೇಳಿದರು. ಅಲ್ಲದೇ ಪಾಲಕರು ಮಕ್ಕಳ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಅವಶ್ಯಕವಾಗಿದೆ ಎಂದರು.

ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು ಯಾವುದೇ ಕಾರಣಕ್ಕೂ ನಾನು ರಾಜಕೀಯಪ್ರವೇಶಮಾಡುವುದಿಲ್ಲವೆಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಮಹ್ಮದ್ ಶಾಲಂ,ಶ್ರೀನಿವಾಸ ರೆಡ್ಡಿ, ಯೂಸೂಫ್ ಖಾನ್, ಅಸ್ಲಂ ಪಾಷಾ, ಶೈಬಾಜ್,ಸಾಧೀಖ್ ಖಾನ್, ನಿರ್ಮಾಲ ಬೆಣ್ಣೆ ಸೇರಿಂತೆ ಅನೇಕ ಉಪಸ್ಥಿತರಿದ್ದರು.

# ಡಿ,27ರಂದು ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ನೋಡಲ್ ಆಫೀಸರ್ 220 ಕೆವಿ ಸ್ವೀಕರಣ ಕೇಂದ್ರ ಕೆಪಿಟಿಸಿಎಲ್ ರಾಯಚೂರು ಅವರ ಮೂರನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವ ಪ್ರಯುಕ್ತ ಡಿಸೆಂಬರ್ 27ರ ಬೆಳಿಗ್ಗೆ 10 ರಿಂದ ಸಂಜೆ 06 ಗಂಟೆವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆ 10ರಿಂದ ಸಿಇಓ ಆಫೀಸ್, ಶ್ರೀರಾಮ ನಗರ, ಉದಯ ನಗರ, ಆಜಾದ್ ನಗರ, ಸ್ಟೇಶನ್ ಏರಿಯಾ, ಇಂದಿರಾ ನಗರ, ಅಶೋಕ್ ಡಿಪೋ, ಗೋಲ್ ಮಾರ್ಕೆಟ್, ಚಾರಾ ಬಜಾರ್, ಮಚ್ಚಿ ಬಜಾರ್, ಕಮೇಲಾ, ಅರಬ್ ಮೊಲ್ಲಾ, ಆಟೋ ನಗರ, ಸಿಯಾತಲಾಬ್,

ಗಂಜ್ ಸರ್ಕಲ್, ಗೋಶಾಲ ರೋಡ್, ಡಿಸ್ಟ್ರಿಕ್ಟ್ ಕೋರ್ಟ್,ಜಿಲ್ಲಾ ಪಂಚಾಯತ್ ಆಫೀಸ್, ಟಿಫಾನೀಸ್, ಬಸವೇಶ್ವರ ಸರ್ಕಲ್, ಫಾರೆಸ್ಟ್ ಆಫೀಸ್, ಫೈರ್ ಸ್ಟೇಶನ್, ವೆನ್ನರಿ ಆಸ್ಪತ್ರೆ, ಕಾಂಗ್ರೆಸ್ ಆಫೀಸ್, ಮಂಚಲಾಪುರ ಕ್ರಾಸ್, ಹೊಸ ಶಿವಂ ಆಸ್ಪತ್ರೆ, ಕ್ಲಾರಿಟಿ ಆಸ್ಪತ್ರೆ, ಭಂಡಾರಿ ಆಸ್ಪತ್ರೆ, ಸುದ್ದಿಮೂಲ, ಹಿಂದಿ ವರ್ಧಮಾನ, ಬಿಎಸ್‌ಎನ್‌ಎಲ್ ಕಚೇರಿ, ಹೊಂಡಾ ಶೋರೂಮ್, ಅಹ್ಮದ್ ಫಂಕ್ಷನ್ ಹಾಲ್, ಸುಣ್ಣಭಟ್ಟಿ,

ಎಸ್‌ಆರ್‌ಎಸ್ ಲಾಡ್ಜ್, ರೈಲ್ವೆ ಸ್ಟೇಷನ್, ಆಫೀರ್ಸ್ ಕಾಲೋನಿ, ಆಶಾಪುರ ರಸ್ತೆ, ಗುಡ್ ಶೆಡ್ ರಸ್ತೆ, ಐಡಿಎಸ್‌ಎಮ್‌ಟಿ ಲೇಔಟ್, ಪವನ್ ಲೇಔಟ್, ಗ್ಯಾನ್ ಮಂದಿರ, ಆಫಿರ್ಸ್ ಕಾಲೋನಿ, ಮೆಥಡಿಸ್ಟ್ ಚರ್ಚ್, ಜಂಡಕಟ್ಟ, ನವರಂಗ ದರ್ವಾಜ, ಟಿಪ್ಪು ಸುಲ್ತಾನ್ ರೋಡ್, ಡಿ.ಸಿ. ಆಫೀಸ್ ಮುಂದುಗಡೆ, ಹಾಜಿ ಕಾಲೋನಿ, ಕೋಟ್‌ತಲಾರ್, ಹೊಸ ಸಿಎಮ್‌ಸಿ ಕಚೇರಿ, ಡ್ಯಾಡಿ ಕಾಲೋನಿ, ಆಶ್ರಫೀಯಾ ಕಾಲೋನಿ, ಕಾ-ಕತೀಯ ಕಾಲೋನಿ, ಶಾಂತಿ ಕಾಲೋನಿ, ಡಾಲರ್ಸ್ ಕಾಲೋನಿ, ಪಿಸಿಬಿ ಕಾಲೋನಿ, ಪಾರ್ವತಿ ಕಾಲೋನಿ, ರಾಘವೇಂದ್ರ ಕಾಲೋನಿ, ಸಾರಾ ಟೀರ್ಸ್ ಕಾಲೋನಿ, ಒಳ ಚರಂಡಿ ಸಂಸ್ಕರಣ ಘಟಕ ಮಂಚಲಾಪೂರ ರೋಡ್, ಬಸವೇಶ್ವರ ಕಾಲೋನಿ, ಬಂದೇನವಾಜ್ ಕಾಲೋನಿ, ಭಾರತಿ ನಗರ, ಚೆಕ್ಪೋ

ಸ್ಟ್, ಎನ್‌ಜಿಒ ಕಾಲೋನಿ, ಗೌಸಿಯಾ ಕಾಲೋನಿ, ಎಸ್.ಟಿ ನಿಜಾಮುದ್ದೀನ್ ಕಾಲೋನಿ, ದೇವರಾಜ್ ಅರಸ್ ಕಾಲೋನಿ. ಗಾಂಧಿ ಲೇಔಟ್, ಅಶೋಕ್ ಕುಮಾರ್ ಲೇಔಟ್, ಲಿಂಗಸುಗೂರು ರಸ್ತೆ, ವಿದ್ಯುತ್ ವ್ಯತ್ಯಯವಾಗಲಿದೆ.

ಕೃಷಿ ವಿಶ್ವವಿದ್ಯಾಲಯ ಎದುರುಗಡೆ, ಶಿವಂ ಆಸ್ಪತ್ರೆ, ಎಸ್.ಎನ್.ಟಿ.ಟಾಕೀಸ್, ಲೋಹಾರವಾಡಿ, ಗಾಂಧಿ ಚೌಕ, ಬಂದರ್ ಗಲ್ಲಿ, ಎಂ.ಜಿ.ರಸ್ತೆ, ಹರಿಹರ ರಸ್ತೆ, ಮಕ್ತಲ ಪೇಟೆ, ಪಿಂಜರವಾಡಿ, ಶರಣಬಸವೇಶ್ವರ ಆಸ್ಪತ್ರೆ. ಬೆಟ್ಟದೂರ ಆಸ್ಪತ್ರೆ. ಪ್ಯಾರೇಸ್ ಗಾರ್ಡನ್, ವಡ್ಡಪ್ಪಜೀನ್ ಕುಂಬಾರಓಣಿ, ಮಡ್ಡಿ ಪೇಟೆ, ಬ್ರೆಸ್ತಾವಾರ ಪೇಟೆ, ಚಂದ್ರಮಾಲೇಶ್ವರ ಚೌಕ ಬಟ್ಟೆ ಬಜಾರ್ ತರಕಾರಿ ಮಾರ್ಕೆಟ್, ಮೇದರವಾಡಿ ಹೊಸ ಅಮೃತ ಆಸ್ಪತ್ರೆ ಸಂತೋಷಿ ನೊವಿತಾಲ್ ಸೇರಿದಂತೆ ಸುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ 24*7 ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532-226386, 08532-231999ಗೆ ಸಂಪರ್ಕಿಸುವಂತೆ ವಿದ್ಯುತ್ ವ್ಯತ್ಯಯದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಅಂಗವಾಗಿ ಕ್ರಿಕೆಟ್ ಪಂದ್ಯಾವಳಿ

## ಕ್ರೀಡೆಯಿಂದ ಮಾನಸಿಕ ಹಾಗೂ ದೈಹಿಕ ಸದೃಡತೆ: ಪುರುರಾಜ ಸಿಂಗ್ ಸೋಲಂಕಿ



**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಕ್ರೀಡೆಯಿಂದಮಾನಸಿಕಹಾಗೂದೈಹಿಕ ಸದೃಡತೆ ಸಾಧ್ಯವೆಂದು ಪ್ರೋಬೆಷನರಿ ಐಎಎಸ್ ಅಧಿಕಾರಿ ಪುರುರಾಜ ಸಿಂಗ್ ಸೋಲಂಕಿ ಹೇಳಿದರು. ಅವರಿಂದು ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ರಾಯಚೂರು ರಿಪೋರ್ಟ್ಸ್ ಗಿಲ್ಡ್ ಹಾಗು ಜಿಲ್ಲಾ ಮತ್ತು ಪ್ರಾದೇಶಿಕ ದಿನಪತ್ರಿಕೆಗಳ ಸಂಘ ಹಾಗೂ ವಾರ್ತಾ ಮತ್ತು ಸಾರ್ವಜನಿಕರ ಸಂಪರ್ಕ ಇಲಾಖೆ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಅಂಗವಾಗಿ ಆಯೋಜಿಸಿದ ಕ್ರಿ-ಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿ ಪ್ರತಿಯೊಬ್ಬರು ತಮ್ಮ ದಿನ ನಿತ್ಯದ ಯಾಂತ್ರಿಕ ಜೀವನದಲ್ಲಿ ಮಾನಸಿಕ ಹಾಗೂ ದೈಹಿಕ ಸದೃಢತೆ ಸಾಧಿಸಲು ಕ್ರೀಡೆ ಅತ್ಯಂತ ಸಹಕಾರಿಯಾಗಿದ್ದು ನಾವೆಲ್ಲರೂ ನಮ್ಮ ಬಿಡುವಿನ ಸಮಯದಲ್ಲಿ ಕ್ರೀಡೆಗಳಲ್ಲಿ ತೊಡಗಬೇಕೆಂದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಮಾಹಿತಿ ಆಯೋಗದ ಕಲಬುರ್ಗಿ ಪೀಠದಆಯುಕ್ತರಾದಬಿ.ವೆಂಕಟಸಿಂಗ್ ಮಾತನಾಡಿ ಕ್ರೀಡೆ ನಮ್ಮ ಜೀವನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ ಪತ್ರಕರ್ತರು ತಮ್ಮ ದಿನ ನಿತ್ಯದ ಸುದ್ದಿ ಸಂಗ್ರಹ ಜಂಜಾಟದಲ್ಲಿ ತೊಡಗಿರುತ್ತಾರೆ ಅವರು ಒತ್ತಡ ಜೀವನದಿಂದ ಹೊರಬರಲು ಕ್ರೀಡೆ ಅತಿಮುಖ್ಯವೆಂದು ಅಭಿಪ್ರಾಯಪಟ್ಟ ಅವರು ನಾನು ಸಹ ಪತ್ರಕರ್ತ ವೃತ್ತಿಯಲ್ಲಿರುವ ಸಂದರ್ಭದಲ್ಲಿ ಪ್ರತಿ ವರ್ಷ ಆಯೋಜಿಸುವ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುತ್ತಿದ್ದೆ ಎಂದರು.

ಮತ್ತೋರ್ವ ಅತಿಥಿಗಳಾದಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಮಾರ್ ಸ್ವಾಮಿ ಮಾತನಾಡಿ ಕ್ರೀಡೆಯಿಂದ ಒತ್ತಡದ ಜೀವನದಿಂದ ಮುಕ್ತಿ ಹೊಂದಲು ಸಾಧ್ಯವಾಗುತ್ತದೆ ಎಂದರು. ರಾಯಚೂರು ರಿಪೋರ್ಟ್ಸ್ ಗಿಲ್ಡ್ ಅಧ್ಯಕ್ಷ ವಿಜಯ್ ಜಾಗಟಗಲ್ ಮಾತನಾಡಿ ಕ್ರೀಡೆಯಿಂದ ನಾವು ಲವಲವಿಕೆಯಿಂದಿರಲು ಸಾಧ್ಯ ಪ್ರತಿ ವರ್ಷ ಪತ್ರಕರ್ತರಿಗೆ ಕ್ರೀಡಾಕೂಟ ಆಯೋಜಿಸುತ್ತಾ ಬರಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಮತ್ತು ಪ್ರಾದೇಶಿಕ ದಿನಪತ್ರಿಕೆಗಳ ಸಂಘದ ಅಧ್ಯಕ್ಷರಾದ ಚೆನ್ನಬಸವ ಬಾಗಲವಾಡ , ರಿಪೋರ್ಟ್ಸ್ ಗಿಲ್ಡ್ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಹೂಗಾರ್, ಖಜಾಂಚಿ ಸಣ್ಣ ಈರಣ್ಣ, ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಸಂಪಾದಕರ ಸಂಘದ ಪ್ರಧಾನ ಕಾರ್ಯದರ್ಶಿ ಖಾನ್ ಸಾಬ್ ಮೋಮಿನ್, ಕ್ರೀಡಾ ವಸ್ತುವಾರಿಗಳಾದ ಶ್ರೀಕಾಂತ ಸಾವೂರು, ರಿಪೋರ್ಟ್ ಗಿಲ್ಡ್ ನಿಕಟಪೂರ್ವ ಅಧ್ಯಕ್ಷ ಚೆನ್ನಬಸವಣ್ಣ, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣಾ ಶಾವಂತಗೇರಿ ಸೇರಿದಂತೆ ಹಿರಿಯ ಕಿರಿಯ ಪತ್ರಕರ್ತರು, ಅನೇಕರು ಇದ್ದರು.

ಕ್ರೀಡಾಕೂಟದಲ್ಲಿ ಜಿಲ್ಲಾ ಪೊಲೀಸ್ ತಂಡ , ಜಿಲ್ಲಾ ಸರ್ಕಾರಿ ನೌಕರರ ತಂಡ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ ತಂಡ, ಅರಣ್ಯ ಇಲಾಖೆ ತಂಡ , ನ್ಯಾಯವಾದಿಗಳತಂಡ,ಕೆಎಸ್‌ಆರ್‌ಟಿಸಿ ಅಧಿಕಾರಿಗಳ ತಂಡ, ಎಲೆಕ್ಟ್ರಾನಿಕ್ ಮೀಡಿಯಾ ಪತ್ರಕರ್ತರ ತಂಡ ಮತ್ತು ಮುದ್ರಣ ಮಾಧ್ಯಮ ಪತ್ರಕರ್ತರ ತಂಡಗಳು ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದಾರೆ.

# ನಡೆದಾಡುವ ದೇವರು ಡಾ. ಚನ್ನಬಸವ ಪಟ್ಟದ್ದೇವರ: ಹುಡಗಿಕರ



• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:**

ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹುಮನಾಬಾದ ವತಿಯಿಂದ ನಡೆದಾಡುವ ದೇವರು ಭಾಲ್ಕಿಯ ಪರಮ ಪೂಜ್ಯರಾದ ಡಾ. ಚನ್ನಬಸವ ಪಟ್ಟದ್ದೇವರ 136 ನೇ ಜಯಂತಿಯನ್ನು ಆಚರಿಸಲಾಯಿತು, ಜಿಲ್ಲಾ ವಿಜ್ಞಾನ ಪರಿಷತ್ತಿನ ಜಿಲ್ಲಾ ಅಧ್ಯಕ್ಷರಾದ ಸುರೇಂದ್ರನಾಥ ಹುಡಗಿಕರ ಪರಮ ಪೂಜ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು ನಮ್ಮ ಕಲ್ಯಾಣ ಕರ್ನಾಟಕದ ನಡೆದಾಡುವ ದೇವರು ಕನ್ನಡವನ್ನು ರಜಾಕರ ಅವದಿಯಲ್ಲಿ ಮನೆ ಮನೆಗೆ ಪಸರಿಸಿದ ಕೀರ್ತಿ ಭಾಲ್ಕಿಯ ಮಠಕೆ ಸಲ್ಲುತ್ತದೆ ಕನ್ನಡ ಶಾಲೆಗಳು ಪ್ರಾರಂಬಿಸುವ ಮುಖಾಂತರ ಮಠಗಳಲ್ಲಿ ಕನ್ನಡ ವಚನಗಳು ಪ್ರಚಾರಿಸುವ ಮುಖಾಂತರ ಬಸವ ತತ್ವ ನಾಡಿನಾದ್ಯಂತ ಪ್ರಚಾರ ಮಾಡಿ ಕನ್ನಡ ಅಭಿಮಾನ ಜನರಲಿ ಬೆಳೆಸುವ ಕಾರ್ಯ ಮಾಡಿರುವದು ಪೂಜ್ಯರಿಗೆ ಸಲ್ಲುತ್ತದೆ, ಅಂಥಹ ಮಹಾನ ವ್ಯಕ್ತಿಯ ಜಯಂತಿಯನ್ನು ನಾಡಿನಾದ್ಯಂತ ಆಚರಿಸುತ್ತಿರುವದು ಸಂತಸ ತಂದಿದೆ ಎಂದು ನುಡಿದರು, ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣ ಅಧಿಕರಿಗಳಾದ ವೆಂಕಟೇಶ ಗುಡಾಳ, ಹಾಗೂ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷರಾದ ರವೀಂದ್ರರೆಡ್ಡಿ ಮಾಲಿಪಾಟೀಲ ಇದ್ದರು ಕಾರ್ಯಕ್ರಮ ಅಧ್ಯಕ್ಷತೆ ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷರಾದ ಸಿದ್ದಲಿಂಗ ವಿ ನಿರ್ಣಾ ವಹಿಸಿಕೊಂಡು ಕನ್ನಡ ಸಾಹಿತ್ಯ ಪರಿಷತ್ತು ಕಡ್ಡಾಯವಾಗಿ ಡಾ.ಚನ್ನಬಸವ ಪಟ್ಟದೇವರ ಜಯಂತಿ ನಿರಂತರವಾಗಿ ಆಚರಿಕೊಂಡು ಬರುತ್ತಿದೆ, ಗಡಿ ಭಾಗದಲ್ಲಿರುವ ನಮ್ಮ ಅನೇಕ ಗ್ರಾಮಗಳಲ್ಲಿ ಮರಾಠಿ, ಹಿಂದಿ, ತೆಲುಗು, ಉರ್ದು ಹೀಗೆ ಅನೇಕ ಭಾಷೆಗಳಿದ್ದರು ಕನ್ನಡ ಕಟ್ಟುವಲ್ಲಿ ಕನ್ನಡ ಉಳಿಸುವಲ್ಲಿ ಪೂಜ್ಯರ ಶ್ರಮವಿರುವುದು

ಎಂದು ಮರೆಯವ ಹಾಗಿಲ್ಲ ಹೊರಗೆ ಉರ್ದು ನಾಮಫಲಕ ಹಾಕಿ ಕೋಣೆಗಳಲ್ಲಿ ಕನ್ನಡ ಕಲಿಸುವ ಕಾರ್ಯ ಮಾಡಿರುವ ಕೀರ್ತಿ ಪೂಜ್ಯರಿಗೆ ಸಲ್ಲುತ್ತದೆ ಹಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಅನೇಕ ಮಹನೀಯರ ಮಹತ್ಮರ ಕಾರ್ಯಕ್ರಮ ನಿರಂತರ ವಾಗಿ ಮಾಡುವ ಉದ್ದೇಶ ಹೊಂದಿದೆ ಕಾರ್ಯಕ್ರಮದಲ್ಲಿ ಭಾಗವಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿದರು. ಕಾರ್ಯಕ್ರಮದಲ್ಲಿ ಹಿರಿಯರಾದ ಶಶಿಧರ ಮಾಲಿಪಾಟೀಲ, ಶ್ರೀಧರ ಚವ್ಹಾಣ, ತಾಂಬೆ , ಸಂತು ದೇವೇಂದ್ರ, ಸಂತೋಷ ಸಾಗರ , ಜಯರಾಜ ಹಣಬಶೆಟ್ಟಿ, ಶಿವರಾಜ ರೆಡ್ಡಿ, ಕಾರ್ಯಕ್ರಮದಲ್ಲಿ ನಗರ ಘಟಕ ಅಧ್ಯಕ್ಷರಾದ ಸದಾಶಿವಯ್ಯ ಹಿರೇಮಠ ಸ್ವಾಗತಿಸಿದರು, ಮಲ್ಲಪ್ಪ ಜಿಗಜೇವಣಿ ನಿರೂಪಿಸಿದರು , ಕಸಾಪ ವಲಯ ಅಧ್ಯಕ್ಷರಾದ ಸಂತೋಷ ಆಚಾರ್ಯ ವಂದಿಸಿದರು ಅನೇಕು ಭಾಗಿಯಾಗಿದ್ದರು.

# ಮನಸ್ಮೃತಿಯನ್ನು ದಹಿಸಿದ ಪ್ರಗತಿಪರ ಚಿಂತಕರು.

• **ಮಲ್ಲಮ್ಮ ನುಡಿ ವಾರ್ತೆ ಚಿಂಚೋಳಿ:**



1927 ಡಿಸೆಂಬರ 25 ರಂದು ಡಾ.ಬಿ.ಆರ್. ಅಂಬೇಡ್ಕರ್ ರವರು, ಮನಸ್ಮೃತಿಯನ್ನು ದಹಿಸಿದ ಸ್ಮರಣಾರ್ಥವಾಗಿ ಚಿಂಚೋಳಿಯಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರಗತಿಪರ ಚಿಂತಕರೆಲ್ಲರೂ ಸೇರಿಕೊಂಡು ಸಾಂಕೇತಿಕವಾಗಿ ಮನಸ್ಮೃತಿಯ ನಕಲು ಪ್ರತಿಗಳನ್ನು ದಹಿಸಿದರು. ಈ ಕುರಿತು ಬಹುಜನ ಸಮಾಜ ಪಕ್ಷದ ಮುಖಂಡ ಗೌತಮ ಬಿ ಬೊಮ್ಮನಹಳ್ಳಿ ಮಾತನಾಡಿ,ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರು ಭಾರತ ದೇಶಕ್ಕೆ ಸಂವಿಧಾನವನ್ನು ರಚಿಸುವುದಕ್ಕಿಂತ ಮುಂಚೆ ಜಾರಿಯಲ್ಲಿದ್ದ ಮನುಸ್ಮೃತಿಯು ಹಲವಾರು ಉಚ್ಚ ನೀಚ ಪದ್ಧತಿಗಳನ್ನು ಒಳಗೊಂಡಿತ್ತು.ಮನುಸ್ಮೃತಿ ಜಾರಿಯಲ್ಲಿದ್ದ ಸಂದರ್ಭದಲ್ಲಿ ಮಹಿಳೆಯರ ಸ್ಥಿತಿ ಬಹು ಶೋಚನೀಯವಾಗಿತ್ತು. ಈ ಹಿಂದೆ ಭಾರತದಲ್ಲಿ ಗಂಡ ಸತ್ತ ನಂತರ ಅವನ ಚಿತೆಯಲ್ಲಿಯೇ ಅವನ ಹೆಂಡತಿಯನ್ನು ಸಹ ಜೀವಂತವಾಗಿ ಸುಡುವಂತಹ ಪರಿಸ್ಥಿತಿ ಜೀವಂತವಾಗಿತ್ತು. ಹೆಣ್ಣು ಮಕ್ಕಳು ನಾಲ್ಕು ಗೋಡೆಗಳ ಮಧ್ಯೆ ಯಾರಿಗೂ ಕಾಣದೆ, ಅಭಿರುಚಿ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಿ ಬದುಕಬೇಕಾಗಿತ್ತು ಇಂತಹ ಕಂದಾಚಾರಗಳನ್ನು ವಿರೋಧಿಸಿ ಅಂಬೇಡ್ಕರ್ ರವರು ಮನುಸ್ಮೃತಿಯನ್ನು ಸಾರ್ವಜನಿಕವಾಗಿ ದಹಿಸಿ ಸಮಾನತೆಯನ್ನು ಸಾರಿದರು. ಸಂವಿಧಾನ ಜಾರಿಗೆ ಬಂದ ಮೇಲೆ ಹೆಣ್ಣು ಮಕ್ಕಳು ಕೂಡ ಭಾರತದಂತಹ ಮಹಾನ ದೇಶಕ್ಕೆ ರಾಷ್ಟ್ರಪತಿಯಂತಹ ಉನ್ನತ ಸ್ಥಾನಮಾನಕ್ಕೆ ಆಯ್ಕೆಯಾಗುತ್ತಿದ್ದಾರೆ. ಇದು ಸಂವಿಧಾನದಿಂದ ದೊರೆತ ಅವಕಾಶ ಎಂದರು. ಬಳಿಕ ದಲಿತ ಸೇನೆಯ ನಗರ ಘಟಕದ ಅಧ್ಯಕ್ಷ ಚೇತನ ನಿರಾಳ್ಕರ್, ಸುನೀಲ ತ್ರಿಪಾಟಿ,ಗುಂಡಪ್ಪ ಹಸಿರಗುಂಡಗಿ ಸೇರಿದಂತೆ ಇನ್ನಿತರರು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ರಮೇಶ ದೋಟಿಕೊಳ್,ಸಂಜು ಗುರಂಪಳ್ಳಿ,ಅಕ್ಷಯಬೊಮ್ಮನಳ್ಳಿ,ರಾಹುಲ್ ಟಿ ಯಾಕಾಪುರ್,ನಾಗಸೇನ್ ಬೊಮ್ಮನಳ್ಳಿ,ಚಂದ್ರು ಐನೋಳ್ಳಿ, ನಾಗು ಚಿಂಚೋಳಿ,ಲಕ್ಷ್ಮಿಕಾಂತ್ ಐನಾಪುರ ಸೇರಿದಂತೆ ಇನ್ನಿತರರಿದ್ದರು.

## ಬಾಂಗ್ಲಾ: ಹಿಂದೂ ಯುವಕನ ಹತ್ಯೆ ಖಂಡಿಸಿ ಪ್ರತಿಭಟನೆ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಾಂಗ್ಲಾ ದೇಶದಲ್ಲಿ ಹಿಂದೂ ಯುವಕನ ಹತ್ಯೆ ಮಾಡಿದ ಕ್ರಮ ಖಂಡಿಸಿ ಇಲ್ಲಿನ ಪ್ರಜ್ಞಾವಂತ ನಾಗರಿಕರ ವೇದಿಕೆಯ ಆಶ್ರಯದಲ್ಲಿ ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಧಿಕಾರಿ ಎದುರು ಇರುವ ಶ್ರೀ ಮಹಾತ್ಮಗಾಂಧಿಯವರ ಪುತ್ಥಳಿ ಎದುರು ಜಮಾಯಿಸಿದ ನಾಗರಿಕರ ಹೋರಾಟ ಸಮಿತಿಯ ನೂರಾರು ಕಾರ್ಯಕರ್ತರು, ಹತ್ಯೆ ಮಾಡಿದವರು ಯಾರೇ ಇರಲಿ, ಎಷ್ಟೇ ಪ್ರಭಾವಿಗಳಿರಲಿ ಕೂಡಲೇ ಬಂಧಿಸಿ, ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ವೇದಿಕೆ ಅಧ್ಯಕ್ಷ ಕೆ.ಎಂ.ಮಹೇಶ್ವರ ಸ್ವಾಮಿ ಅವರು ಮಾತನಾಡಿ, ಬಾಂಗ್ಲಾ ದೇಶದಲ್ಲಿ ಇತ್ತೀಚೆಗೆ ಯುವಕ ದೀಪು ಚಂದ್ರಹಾಸ್ ಅವರನ್ನು ಪೋಲೀಸ್ ಅಧಿಕಾರಿಗಳ ಎದುರೇ ಮತಾಂಧರ ಗುಂಪೊಂದು ಹಲ್ಲೆ ಮಾಡಿ ಬರ್ಬರವಾಗಿ ಹತ್ಯೆ ಮಾಡಿದ ಪ್ರಕರಣವನ್ನು ಇಡಿ ಮನುಕುಲವನ್ನೇ ನೋವಿನಲ್ಲಿ ಮುಳುಗಿಸಿದೆ.

ಬಾಂಗ್ಲಾ ದೇಶದಲ್ಲಿ ಹಿಂದೂಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಹಿಂದೂಗಳ ರಕ್ಷಣೆಗಾಗಿ ವಿಶ್ವ ಸಂಸ್ಥೆ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೂಡಲೇ ಕಾರ್ಯಪ್ರವೃತ್ತರಾಗಿ ರಕ್ಷಣೆ ಒದಗಿಸಲು ಮುಂದಾಗಬೇಕು. ಅಲ್ಲಿನ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು.

ತುಂಗಭದ್ರಾ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಅವರು ಮಾತನಾಡಿ, ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ಹಿಂದೂ ಯುವಕನ ಮೇಲೆ ಹಲ್ಲೆ, ಬರ್ಬರ ಹತ್ಯೆ ಪ್ರಕರಣ ಇಡೀ ಮನುಕುಲವನ್ನೇ ನೋವಿನಲ್ಲಿ ಮುಳುಗಿಸಿದೆ.

ಕೂಡಲೇ ಹಿಂದೂಗಳ ರಕ್ಷಣೆಗೆ ವಿಶ್ವಸಂಸ್ಥೆ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ವಿಶ್ರಾಂತ ಪ್ರಾಚಾರ್ಯ ಲಿಂಗನಗೌಡ ಪಾಟೀಲ್, ಪ್ರಭಯ್ಯ, ಪಾಲಿಕೆ ಮಾಜಿ ಸದಸ್ಯ ಎಸ್.ಮಲ್ಲನಗೌಡ, ಆನೆ ಗಂಗಣ್ಣ, ಪಿ.ಬಂಡೇಗೌಡ, ಎಂ.ಎಸ್.ಸೋಮಲಿಂಗನ ಗೌಡ, ಬಿ. ಪಿ.ಎಡವಳ್ಳಿ ಹಳ್ಳಿಮನೆ, ದೊಡ್ಡ ಬಸಪ್ಪ, ಅಮರೇಂದ್ರನಾಥ್ ಚೌಧರಿ, ದರೂರು ಶಾಂತನಗೌಡ, ಕೆ.ಎಂ. ಚಂದ್ರ ಮೌಳಿ, ಅಶೋಕ್ ದಿನ್ನಿ, ಬೀ.ಎಂ.ಎರಿಸ್ವಾಮಿ, ಕೋಳೂರು ಚಂದ್ರಶೇಖರ್ ಗೌಡ, ಕೆ.ಎಂ.ಕೊಟ್ರೇಶ್, ಜಿ.ನಿಲಕಂಠಪ್ಪ, ಗಾದಿಲಿಂಗನಗೌಡ, ಜಾಲಿಹಾಳ ಶ್ರೀಧರ್ ಗೌಡ, ಡಾ.ಮಂಜುನಾಥ್, ಸೂರ್ಯ ಪ್ರಕಾಶ, ತಿಪ್ಪೇರುದ್ರಪ್ಪ, ಕಲಾವಿದ ನಟರಾಜ್, ಗಂಗಾಧರಯ್ಯ, ಶಿವಾ ರೆಡ್ಡಿ, ರಾಜಶೇಖರ್ ಸೇರಿದಂತೆ ಇತರರಿದ್ದರು.

## ಗ್ರಾಹಕರ ಹಕ್ಕು ಜವಾಬ್ದಾರಿ ಅರಿವು ಹೊಂದಿ: ನ್ಯಾ. ಹೊಸಮನೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಗ್ರಾಹಕರು ತಮಗಿರುವ ಹಕ್ಕುಗಳ ಬಗ್ಗೆ ಜವಾಬ್ದಾರಿ ಮತ್ತು ಅರಿವು ಹೊಂದಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ಆಹಾರ ಸುರಕ್ಷತಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ "ಡಿಜಿಟಲ್ ನ್ಯಾಯದ ಮೂಲಕ ಕಾರ್ಯಕ್ರಮ ಮತ್ತು ತ್ವರಿತ ನ್ಯಾಯ ವಿತರಣೆ" ಎಂಬ ಘೋಷವಾಕ್ಯದಡಿ ನಗರದ ಡಾ.ರಾಜ್ ಕುಮಾರ್ ರಸ್ತೆಯ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ಕಾಯ್ದೆ 1986 ಜಾರಿಗೆ ಬಂದ ಹಿನ್ನೆಲೆಯಲ್ಲಿ ಪ್ರತಿವರ್ಷ ಡಿ.24ರಂದು ರಾಷ್ಟ್ರೀಯ ಗ್ರಾಹಕ ದಿನವನ್ನು ಆಚರಿಸಲಾಗುತ್ತಿದೆ. ಹೀಗಾಗಿ ಸಾರ್ವಜನಿಕರು ಗ್ರಾಹಕ ಕಾಯ್ದೆ, ಹಕ್ಕುಗಳ ಕುರಿತು ಜಾಗೃತಿ ಹೊಂದಬೇಕು ಎಂದರು.



ಸಮಾಜದಲ್ಲಿ ಡಿಜಿಟಲ್ ಖರೀದಿ ಹೆಚ್ಚಾಗಿದ್ದು, ಆನ್‌ಲೈನ್ ಮೂಲಕ ಅತಿ ಹೆಚ್ಚು ವಂಚನೆಗಳು ಆಗುತ್ತಿವೆ. ಈ ಕುರಿತು ಎಚ್ಚರಿಕೆಯಿಂದ ವ್ಯವಹರಿಸಬೇಕು ಎಂದು ಕಿವಿಮಾತು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ರಾಮಬ್ರಹ್ಮಂ ಅವರು ಮಾತನಾಡಿ, ಕೇಂದ್ರ ಸರ್ಕಾರ ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು 1986ರ ಗ್ರಾಹಕ ಸಂರಕ್ಷಣಾ ಕಾಯಿದೆ 2019ರಡಿ ಗ್ರಾಹಕರ ಹಕ್ಕುಗಳನ್ನು ಒದಗಿಸಲಾಗಿದೆ. ಹಣ ನೀಡಿ ಪಡೆಯುವ ಪ್ರತಿಯೊಂದು ವಸ್ತುವಿನ ಗುಣಮಟ್ಟ, ಬೆಲೆ, ದಿನಾಂಕ, ಮುಕ್ತಾಯಗೊಳ್ಳುವ ದಿನ ಸೇರಿದಂತೆ ಎಲ್ಲಾ ಅಂಶಗಳನ್ನು ಪರಿಶೀಲಿಸುವ ಮೂಲಕ ವಸ್ತುವಿನ ಗುಣಮಟ್ಟ ಖಾತ್ರಿಪಡಿಸಿಕೊಳ್ಳಬೇಕು ಎಂದು ಹೇಳಿದರು.

ಗ್ರಾಹಕರಿಗಿರುವ ಹಕ್ಕು, ಕಾಯ್ದೆಗಳ ಕುರಿತು ಶಾಲೆ, ಕಾಲೇಜು, ಸಾರ್ವಜನಿಕ ಸ್ಥಳಗಳಲ್ಲಿ ಬೀದಿ ನಾಟಕಗಳ ಮೂಲಕ ಜಾಗೃತಿ ಮೂಡಿಸಬೇಕು ಎಂದರು.

ಕಾನೂನು ಮಾಪನ ಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕ ಮನೋಜ್ ಕುಮಾರ್ ಅವರು ಮಾತನಾಡಿ, ಗ್ರಾಹಕರು ಮೋಸದ ಬಗ್ಗೆ ಸಂಶಯ ಕಂಡುಬಂದಲ್ಲಿ ಅದನ್ನು ಖಚಿತಪಡಿಸಿಕೊಳ್ಳುವ ಹಕ್ಕಿದೆ. ಹಾಗಾಗಿ ಪ್ರತಿ ತೂಕದ ಯಂತ್ರಗಳನ್ನು ಪರಿಶೀಲನೆ ಮಾಡಿ ವಸ್ತುಗಳ ಖರೀದಿ ಮಾಡಬೇಕು. ಪದಾರ್ಥಗಳ ನಿವ್ವಳ ತೂಕವನ್ನು 1ಕೆಜಿ ಗೆ ಎಷ್ಟು ಗ್ರಾಂ ಬರುತ್ತದೆ ಮತ್ತು ವಸ್ತುಗಳ ಮೇಲೆ ಬರೆದಿರುವ ವಿಷಯವನ್ನು ಗ್ರಾಹಕರು ತಿಳಿದಿರಬೇಕು ಎಂದು ಹೇಳಿದರು.

ಹಿರಿಯ ವಕೀಲರಾದ ಅಂಕಲಯ್ಯ ಅವರು ಮಾತನಾಡಿ, ಗ್ರಾಹಕರು ಯಾವುದೇ ವಸ್ತು, ಸರಕುಗಳನ್ನು ಖರೀದಿಸುವ ಸಂದರ್ಭದಲ್ಲಿ ವಸ್ತುವಿನ ಗುಣಮಟ್ಟ, ಅವಧಿ ಇವನ್ನೆಲ್ಲಾ ಕಡ್ಡಾಯವಾಗಿ ಪರಿಶೀಲಿಸಿ ರಶೀದಿ ಪಡೆದುಕೊಳ್ಳಬೇಕು. ಖರೀದಿಸಿದ ವಸ್ತುವಿನ ಗುಣಮಟ್ಟ ಕಳಪೆ ಮತ್ತು ದೋಷಪೂರಿತವಾಗಿದರೆ ಅಂತಹ ಸಂದರ್ಭದಲ್ಲಿ ಗ್ರಾಹಕರು ರಶೀದಿಯನ್ನು ಗ್ರಾಹಕರು ಆಯೋಗಕ್ಕೆ ಕಳುಹಿಸಿ ದೂರು ಸಲ್ಲಿಸಿದರೆ ಗ್ರಾಹಕರಿಗೆ ಸೂಕ್ತ ಪರಿಹಾರ ಒದಗಿಸಬಹುದು ಎಂದು ಹೇಳಿದರು.

ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕಿ ಸಕೀನ ಅವರು ಮಾತನಾಡಿ, ಗ್ರಾಹಕರು ಗ್ರಾಹಕರ ಹಕ್ಕುಗಳ ಬಗ್ಗೆ ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಬಳ್ಳಾರಿಯ ಹಿರಿಯ ವಕೀಲರಾದ ಎನ್.ಪ್ರಕಾಶ್ ಅವರು, 'ಡಿಜಿಟಲ್ ನ್ಯಾಯದ ಮೂಲಕ ಕಾರ್ಯಕ್ರಮ ಮತ್ತು ತ್ವರಿತ ನ್ಯಾಯ ವಿತರಣೆ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿ, ಮಾರಾಟಗಾರರು ಗ್ರಾಹಕರನ್ನು ದೇವರೆಂದು ತಿಳಿಯುತ್ತಾರೆ. ಡಿಜಿಟಲೀಕರಣದ ಮೂಲಕ ದೇಶ-ವಿದೇಶಗಳಿಂದ ವಸ್ತುಗಳನ್ನು ಖರೀದಿ ಮಾಡಲಾಗುತ್ತಿದೆ. ನಾವು ನೀಡಿದ ಹಣಕ್ಕೆ ಕಳಪೆ ಗುಣಮಟ್ಟ ವಸ್ತುಗಳು ಬಂದಲ್ಲಿ ದೂರು ಸಲ್ಲಿಸಬಹುದು ಮತ್ತು ಆನ್‌ಲೈನ್ ಪೇಮೆಂಟ್ ಮಾಡುವಾಗ ಜಾಗರೂಕರಾಗಿಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯರಾದ ಮಾರ್ಲಾ ಶಶಿಕಲಾ, ಬಳ್ಳಾರಿ ಅನೌಪಚಾರಿಕ ಪಡಿತರ ಪ್ರಾದೇಶ ಸಹಾಯಕ ನಿರ್ದೇಶಕಿ ಹೆಚ್.ಹೊನ್ನಮ್ಮ, ನ್ಯಾಯ ಬೆಲೆ ಅಂಗಡಿಯ ಏಜೆಂಟರು, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಿಬ್ಬಂದಿ ವರ್ಗದವರು, ಸಾರ್ವಜನಿಕರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ರಾಜ್ಯ ಪ್ರಶಸ್ತಿಗೆ ಮಹಾಂತೇಶ ಮಸ್ಕಿ ಭಾಜನ



• **ಮಲ್ಮನ ನುಡಿ ವಾರ್ತೆ ಮಸ್ಕಿ:**

ಡಿ.25 ರಾಜ್ಯ ವೈಜ್ಞಾನಿಕ ಪರಿಷತ್ತಿನ ಮಸ್ಕಿ ಪಟ್ಟಣದ ಸಾಹಿತಿ, ಉಪನ್ಯಾಸಕ ಮಹಾಂತೇಶ ಮಸ್ಕಿ ಅವರಿಗೆ ಎಚ್. ಎನ್.ರಾಜ್ಯಮಟ್ಟದ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಗೆ ಡಿ.28 ರಿಂದ 30ರ ವರೆಗೆ ಡಾ.ಹುಲಿಕಲ್ ನೇತೃತ್ವದಲ್ಲಿ ನಟರಾಜ್ ಯಾದಗಿರಿಯಲ್ಲಿ ನಡೆಯಲಿರುವ ರಾಜ್ಯ ಮಟ್ಟದ 5ನೇ ವೈಜ್ಞಾನಿಕ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ನಬಿಸಾಬ್ ಆನೆಹೊಸೂರು ತಿಳಿಸಿದ್ದಾರೆ.

ಮಹಾಂತೇಶ ಮಸ್ಕಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದರು. ಅನೇಕ ಬರಹ ಹಾಗೂ ಕಾವ್ಯ ರಚನೆಯ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಜಿಲ್ಲೆಯ ಗಮನ ಸೆಳೆದ ಮಹಾಂತೇಶ ಮಸ್ಕಿ ಪ್ರಸ್ತುತ ಪಟ್ಟಣದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ವಿಜ್ಞಾನ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಜ್ಯುವೆಲರ್ಸ್ ಮೇಲೆ ಮತ್ತೆ ಎಸ್‌ಐಟಿ ದಾಳಿ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕೇರಳದ ಶಬ-ರಿಮಲೆ ಅಯ್ಯಪ್ಪ ದೇವಸ್ಥಾನದಲ್ಲಿ ನಡೆದ 4.5 ಕೆಜಿ ಚಿನ್ನ ಕಳವು ಪ್ರಕರಣ ಕ್ಕೆ ಸಂಬಂಧಿಸಿದಂತೆ ಕೇರಳ ಎಸ್‌ಐಟಿ ತಂಡ ಬಳ್ಳಾ-ರಿಯ ರೊದ್ದಂ ಜ್ಯುವೆಲ್ಸ್ ಅಂಗಡಿಗೆ ದಾಳಿ ನಡೆಸಿ ಶೋಧ ಕಾರ್ಯ ನಡೆಸಿದೆ. ಈಗಾಗಲೇ ಈ ಚಿನ್ನ ಕಳವು ಪ್ರಕರಣದಲ್ಲಿ ರೊದ್ದಂ ಜ್ಯುವೆಲ್ಸ್ ಮಾಲೀಕ ಗೋವರ್ಧನ್ ಅವರನ್ನು ಪೊಲೀಸರು ಬಂಧಿಸಿದ್ದು, ಈ ಹಿಂದೆ ಅಕ್ಟೋಬರ್ 24 ರಂದು ಕೂಡ ಎಸ್‌ಐಟಿ ತಂಡ ಜ್ಯುವೆಲ್ಸ್ ರೊದ್ದಂ ಜ್ಯುವೆಲ್ಸ್ ಶಾಪ್ ಮೇಲೆ ದಾಳಿ ನಡೆಸಿತ್ತು. ಇದೀಗ ಮತ್ತೆ ದಾಳಿ ನಡೆಸಿದ ಕೇರಳ ಎಸ್‌ಐಟಿ ಅಧಿಕಾ-ರಿಗಳು, ಅಂಗಡಿಯ ಬಾಗಿಲು ಮುಚ್ಚಿಸಿ ಒಳಗೆ ತೀವ್ರ ತಪಾಸಣೆ ನಡೆಸಿದ್ದಾರೆ. ಬಂಧಿತನಾಗಿದ್ದ ಗೋವರ್ಧನ್ ಅವರನ್ನು ವಿಚಾರಣೆ ನಡೆಸಿದ ವೇಳೆ ಹಲವು ಮಹತ್ವದ ಎಸ್‌ಐಟಿ ಮಾಹಿತಿಗಳನ್ನು ಅಧಿಕಾರಿಗಳ ಮುಂದೆ ಬಾಯಿ ಬಿಟ್ಟಿದ್ದಾನೆ. ಗೋವರ್ಧನ್ ನೀಡಿದ ಮಾಹಿತಿ ಆಧಾರದ ಮೇಲೆ ಮತೆ ಅವರ ಜ್ಯುವೆಲರಿ ಶಾಪ್ ಮೇಲೆ ದಾಳಿ ಮಾಡಿ ಅಗತ್ಯ ದಾಖಲೆಗಳು ಹಾಗೂ ಮಾಹಿತಿ ಸಂಗ್ರಹಿಸಲಾಗಿದೆ. ಶಾಪ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹತ್ತು ಮಂದಿ ಸಿಬ್ಬಂದಿಗಳನ್ನೂ ವಿಚಾರಣೆ ನಡೆಸಿದ ಎಸ್‌ಐಟಿ ಅಧಿಕಾ-ರಿಗಳು, ಗೋವರ್ಧನ್ ಹೇಳಿಕೆ ಹಾಗೂ ಸಿಬ್ಬಂದಿಗಳ ಹೇಳಿಕೆಗಳನ್ನು ಪರಸ್ಪರ ತಾಳೆ ಹಾಕಿ ಪರಿಶೀಲನೆ ನಡೆಸಿ ಬಳಿಕ ವಾಪಸ್ ತೆರಳಿದ್ದಾರೆ.

## ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗಿ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಕೋಟೆ ಬಾಗಿಲಿನ ಮುಂಭಾಗದಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಬದಿಯಿಂದ ಇಂದು ಬೆಳಿಗ್ಗೆ ಪ್ರಾರಂಭವಾದ ಮಹರ್ಷಿ ವಾಲ್ಮೀಕಿ ಪುತ್ಥಳಿಯ ಮೆರವಣಿಗೆಯಲ್ಲಿ ಸಾವಿರಕ್ಕೂ ಹೆಚ್ಚು ಮುತ್ತೈದೆಯರು ಪೂರ್ಣಕುಂಭ ಹಾಗೂ ಕಳಶಗಳೊಂದಿಗೆ ಭಾಗವಹಿಸಿ, ಮೆರವಣಿಗೆಗೆ ಮೆರುಗು ನೀಡಿದರು.

ಮೆರವಣಿಗೆಯಲ್ಲಿ ಕಹಳೆ, ಡೊಳ್ಳು, ಡೋಲು, ವಿವಿಧ ವಾದ್ಯಗಳ ಝೇಂಕಾರವು ಮುಗಿಲು ಮುಟ್ಟಿತ್ತು. ಮೆರವಣಿಗೆಯಲ್ಲಿ ಭಾಗವಹಿಸಿದ ವಾಲ್ಮೀಕಿ ಸಮುದಾಯದ ಯುವಕರು, ಮುಖಂಡರು ವಾದ್ಯಗಳ ನಾದಕ್ಕೆ ತಕ್ಕಂತೆ ಹೆಜ್ಜೆಯನ್ನು ಹಾಕುತ್ತಾ, ಕುಣಿದು ಕುಪ್ಪಳಿಸಿದರು.

ಮೆರವಣಿಗೆಯಲ್ಲಿ ಬಳ್ಳಾರಿ ನಗರ, ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಿಂದ, ಸಂಡೂರು ವಿಧಾನಸಭಾ ಕ್ಷೇತ್ರದಿಂದ, ಕಂಪ್ಲಿ ವಿಧಾನಸಭಾ ಕ್ಷೇತ್ರದಿಂದ ಹಾಗೂ ಸಿರುಗುಪ್ಪ ವಿಧಾನಸಭಾ ಕ್ಷೇತ್ರದಿಂದ ಆಗಮಿಸಿದ್ದ ವಾಲ್ಮೀಕಿ ಸಮುದಾಯದ ಹಿರಿಯ ಧುರೀಣರು, ಮುಖಂಡರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಮೆರವಣಿಗೆಯ ಮೆರುಗನ್ನು ಹೆಚ್ಚಿಸಿದರು. ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆ ಮೇದಾರ ಓಣಿಯ ಮುಂಭಾಗದಿಂದ ಮಹರ್ಷಿ ವಾಲ್ಮೀಕಿ ವೃತ್ತದವರೆಗೆ ನಡೆಯಿತು.

## ಮೆರವಣಿಗೆಯಲ್ಲಿ ಪಕ್ಷಾತೀತವಾಗಿ ಮುಖಂಡರ ಭಾಗಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಕೋಟೆ ಬಾಗಿಲಿನ ಮುಂಭಾಗದಲ್ಲಿರುವ ಶ್ರೀ ಆಂಜನೇಯಸ್ವಾಮಿದೇವಸ್ಥಾನದ ಬದಿಯಿಂದ ಇಂದು ಬೆಳಿಗ್ಗೆ ಪ್ರಾರಂಭವಾದ ಮಹರ್ಷಿ ವಾಲ್ಮೀಕಿ ಪುತ್ಥಳಿಯ ಮೆರವಣಿಗೆಯಲ್ಲಿ ಸಾವಿರಕ್ಕೂಹೆಚ್ಚುಮುತ್ತೈದೆಯರು ಪೂರ್ಣಕುಂಭ ಹಾಗೂ ಕಳಶಗಳೊಂದಿಗೆ ಭಾಗವಹಿಸಿ, ಮೆರವಣಿಗೆಗೆ ಮೆರುಗು ನೀಡಿದರು. ಮೆರವಣಿಗೆಯಲ್ಲಿ ವಾಲ್ಮೀಕಿ ಸಮುದಾಯದ ಮುಖಂಡರುಗಳು ಭಾಗವಹಿಸಿ,

ಒಗ್ಗಟ್ಟನ್ನುಪ್ರದರ್ಶಿಸುವುದರೊಂದಿಗೆ ಮೆರವಣಿಗೆಯ ಮೌಲ್ಯವನ್ನು ಹೆಚ್ಚಿಸಿದರು. ಈ ಮೆರವಣಿಗೆಯಲ್ಲಿ ರಾಯಚೂರಿನ ಮಾಜಿ ಸಂಸದರು ಹಾಗೂ ವಾಲ್ಮೀಕಿ ಸಮುದಾಯದ ಹಿರಿಯ ಧುರೀಣರಾದ ಸಣ್ಣ ಫಕ್ಕೀರಪ್ಪ, ವಾಲ್ಮೀಕಿ ಸಮುದಾಯದ ಹಿರಿಯ ಧುರೀಣರಾದ ಬಿ.ರಾಮ್ ಪ್ರಸಾದ್,

ಚಿನ್ನಾಯಪ್ಪ, ಓಬಳೇಶ, ಮೀನಳ್ಳಿ ತಾಯಣ್ಣ, ಎನ್. ಕೆ.ಸದಾಶಿವಪ್ಪ, ಮೀನಳ್ಳಿ ವೆಂಕಟೇಶ್,

ಮೆಡಿಕಲ್ ಮಲ್ಲಿಕಾರ್ಜುನ, ಕಪ್ಪಗಲ್ಲು ರಸ್ತೆಯ ಕೆ.ಹನುಮಂತಪ್ಪ, ಶಾನವಾಸಪುರ ದೊಡ್ಡ ಎಸ್ವಾಮಿ, ದೇವಿನಗರದ ಪರಶುರಾಮುಡು, ದೇವಿನಗರದ ವಂಡ್ರಪ್ಪ, ಹವಂಭಾವಿ ಟಿ.ಲೋಕೇಶ್, ಅಸುಂಡಿ ಗೋವಿಂದ, ಪಿ.ಜಗನ್ನಾಥ (ಜಗನ್), ವಿ.ಎನ್.ಶ್ರೀನಾಥ್, ಬಿ.ರುದ್ರಪ್ಪ, ಬಿ.ಜಯರಾಂ, ಹಳೆ ಎರಿಗುಡಿ ಎನ್.ಮುದಿಮಲ್ಲಯ್ಯ, ಕೆ.ಕೆ.ಹಾಳ್ ಸತ್ಯನಾರಾಯಣ, ಮುತು (ಮೃತ್ಯುಂ ಜಯ), ಪಿಡಿಹಳ್ಳಿ ಜನಾರ್ದನನಾಯಕ, ಕಾಯಿಪಲ್ಲೆ ಬಸವರಾಜ್, ಸಂಗನಕಲ್ಲು ವಿಜಯ್ ಕುಮಾರ್, ಕಪ್ಪಗಲ್ ರಸ್ತೆಯ ದುರ್ಗಾಮೋಹನ್, ಬಜ್ಜಪ್ಪ, ಹೊಸಎರಿಗುಡಿ ಎನ್.ಸೋಮಣ್ಣ, ವಿ.ಕೆ.ಬಸಪ್ಪ, ತಾಳೂರು ರಸ್ತೆಯ ಕೆ.ಅಂಗಣ್ಣ(ಹರಿ),

ಕರ್ಚೇಡು ಬಾದಾಮಿ ಶಿವಲಿಂಗನಾಯಕ, ಗುಗ್ಗರಹಟ್ಟಿಯ ಹಮಾಲಿ ತಿಮ್ಮಪ್ಪ, ಕೊಳಗಲ್ಲು ಹುಲಿಯಪ್ಪ, ಬೆಣಕಲ್ ಟಿ.ಸುರೇಶ್, ಬಸರಕೋಡು ಗೋವಿಂದರಾಜುಲು, ಹವ್ವಂಬಾವಿ ಟಿ.ಗಂಗಾಧರ, ಗಂಗಪ್ಪ,

ರಘುರಾಮು, ರಾಜು, ಲಾಲ್‌ಸ್ವಾಮಿ, ಸುಧಾ-ಕರ್, ಟಿ.ಹೊನ್ನೂರ್‌ಸ್ವಾಮಿ ಭವಾನಿಪ್ರಸಾದ್, ಚಾಗನೂರು ರಾಮಕೃಷ್ಣ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ವಾಲ್ಮೀಕಿ ಸಮುದಾಯದ ಮುಖಂಡರು ಭಾಗವಹಿಸಿದ್ದರು.

## ಸಂತೆಕೆಲ್ಲೂರು ಶ್ರೀಗಳಿಂದ ಆಶೀರ್ವಾದ ಪಡೆದ ರಾಜಣ್ಣ ಪರೆಡ್ಡಿ



• **ಮಲ್ಲಮ್ಮ ನುಡಿ ವಾರ್ತೆ ಮಸ್ಕಿ:**

ತಾಲ್ಲೂಕಿನ ಸಂತೆಕೆಲ್ಲೂರು ಗ್ರಾಮದಲ್ಲಿ ಕೃಷಿ ಋಷಿ ಘನಮಠ ನಾಗಭೂಷಣ ಶಿವಯೋಗಿಗಳ 146ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಘನಮಠೇಶ್ವರ ಮಠದ ಪೀಠಾಧ್ಯಕ್ಷ ಗುರುಬಸವ ಶ್ರೀಗಳಿಂದ ಮೆದಿಕಿನಾಳ ಗ್ರಾಮದ ಮುಖಂಡರಾದ ರಾಜಣ್ಣ ಪರೆಡ್ಡಿ, ಮಲ್ಲಣ್ಣ ಪರೆಡ್ಡಿ ಶಿವಪುತ್ರಯ್ಯ ಮಾಲಿಮಠ , ಇನ್ನಿತರದ ಮುಖಂಡರು ಆಶೀರ್ವಾದ ಪಡೆದರು.

## ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 75ನೇ ವಜ್ರ ಮಹೋತ್ಸವ ಕಾರ್ಯಕ್ರಮ



ಮಲ್ಲಮ್ಮನುಡಿ ವಾರ್ತೆ ಕುಕನೂರ:

ತಾಲ್ಲೂಕಿನ ಇಟಗಿ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ 75ನೇ ವರ್ಷದ ವಜ್ರ ಮಹೋತ್ಸವ ಕಾರ್ಯಕ್ರಮವು ಡಿ. 27 ಹಾಗೂ 28ರಂದು ಎರಡು ದಿನಗಳ ಕಾಲ ಶಾಲಾ ಆವರಣದಲ್ಲಿ ವಿಜೃಂಭಣೆಯಿಂದ ನಡೆಯಲಿದೆ ಎಂದು ವಜ್ರಮಹೋತ್ಸವ ಆಚರಣಾ ಸಮಿತಿ ಹಾಗೂ ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ (ಎಸ್‌ಡಿಎಂಸಿ) ಪದಾಧಿಕಾರಿಗಳು ತಿಳಿಸಿದ್ದಾರೆ.

ಇಟಗಿ ಗ್ರಾಮದ ಶಾಲಾ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಮುಖಂಡ ನವೀನಕುಮಾರ ಗುಳಗಣ್ಣವರ, ಅವರು, 1950ರಲ್ಲಿ ಸ್ಥಾಪನೆಯಾದ ಈ ಶಾಲೆಯು ಕಳೆದ 75 ವರ್ಷಗಳಿಂದ ಗ್ರಾಮೀಣ ಭಾಗದ ಸಾವಿರಾರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಸಮಾಜಕ್ಕೆ ಅನೇಕ ಸಾಧಕರನ್ನು ನೀಡಿದೆ ಎಂದು ತಿಳಿಸಿದರು. ವಜ್ರ ಮಹೋತ್ಸವವನ್ನು ಎಲ್ಲರೂ ಸೇರಿ ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದರು.

ಬೆಳಿಗ್ಗೆ 11 ಗಂಟೆಗೆ ನಡೆಯುವ ಮುಖ್ಯ ಸಮಾರಂಭದಲ್ಲಿ ಜಗದ್ಗುರು ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಹಾಗೂ ಮುಂಡರಗಿಯ ಅನ್ನದಾನೀಶ್ವರ ಶಾಖಾಮಠ, ಕುಕನೂರ ನ ಡಾ. ಮಹಾದೇವ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗೂ ಶಿವರಾಜ ತಂಗಡಗಿ ಅವರು, ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿ ಅವರು ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಶಾಲೆಯ 75 ವರ್ಷಗಳ ಇತಿಹಾಸವನ್ನು ಒಳಗೊಂಡ 'ವಜ್ರಸಿರಿ' ಸ್ಮರಣಿಕೆ ಹಾಗೂ ವಜ್ರ ಮಹೋತ್ಸವ ಗೀತೆ ಬಿಡುಗಡೆಗೊಳ್ಳಲಿದೆ. ವಜ್ರಮಹೋತ್ಸವ ಗೀತೆಯನ್ನು ನಿವೃತ್ತ ಉಪನ್ಯಾಸಕ ಹಾಗೂ ಸಾಹಿತಿ ಬಿ.ಎಂ. ಹಳ್ಳಿ ರಚಿಸಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ನಿವೃತ್ತಿ ಹೊಂದಿದ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರಿಗೆ ಗೌರವ ಸನ್ಮಾನ ನಡೆಯಲಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜು ನರೇಗಲ್‌ನ ಪ್ರಾಂಶುಪಾಲ ಸಂಗಪ್ಪ ಗುಳಗಣ್ಣವರ ಉಪನ್ಯಾಸ ಕಾರ್ಯಕ್ರಮ ನೀಡಲಿದ್ದಾರೆ. ಜಾನಪದ ಕಲಾವಿದ ಜೀವನಸಾಬ್ ವಾಲಿಕರ್ ಅವರಿಂದ ಹಾಸ್ಯ ಸಂಜೆ "ನಗೆ ಹಬ್ಬ" ನಡೆಯಲಿದ್ದು, ಶಾಲಾ ವಿದ್ಯಾರ್ಥಿಗಳಿಂದ ರಸಮಂಜರಿ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ನವೀನಕುಮಾರ ಗುಳಗಣ್ಣನವರ ಹೇಳಿದರು. ಡಿ.28ರಂದು ಬೆಳಿಗ್ಗೆ 10 ಗಂಟೆಗೆ ಕೊಪ್ಪಳದ ಗವಿಮಠದ ಸಂಸ್ಥಾನದ ಜಗದ್ಗುರುಗಳಾದ ಅಭಿನವ ಗವಿಸಿದ್ದೇಶ್ವರ ಸ್ವಾಮಿಗಳು ಹಾಗೂ ಯಲಬುರ್ಗಾದ ಶ್ರೀಧರ ಮುರುಡಿ ಹಿರೇಮಠದ ಬಸವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯಸಾನ್ನಿಧ್ಯ ವಹಿಸಿಕೊಳ್ಳಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸದ ರಾಜಶೇಖರ್ ಹಿಟ್ನಾಳ ಅವರು ನೆರವೇರಿಸಲಿದ್ದು, ಕಾಯ ರ್ಕ್ರಮ ಜ್ಯೋತಿಯನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಬೆಳಗಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ ಡಿ ಎಂ ಸಿ ಅಧ್ಯಕ್ಷ ಲಿಂಗರಾಜ್ ಹೊಸಭಾವಿ, ವಹಿಸಿಕೊಳ್ಳಲಿದ್ದಾರೆ.

ಕಾರ್ಯಕ್ರಮಕ್ಕೆ ಕೊಪ್ಪಳ ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್, ಮಾಜಿ ಸಂಸದ ಸಂಗಣ್ಣ ಕರಡಿ, ಜಿಲ್ಲಾ ಪಂಚಾಯತ್ ಸಿಇಒ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ದಿ, ಉಪ ಮುಖ್ಯ ಕಾರ್ಯದರ್ಶಿ ಟಿ. ಕೃಷ್ಣಮೂರ್ತಿ, ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಎ.ಸಿ., ಕರಣ್ ಕುಮಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ಸೋಮಶೇಖರಗೌಡ ಪಾಟೀಲ್ ಯಲಬುರ್ಗಾ ಬಿ ಇ ಒ ಅಶೋಕಗೌಡ ಅವರು ಸೇರಿದಂತೆ ಅನೇಕ ಗಣ್ಯರು ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ

# ಕಲಿಕಾ ಹಬ್ಬ ಮಕ್ಕಳ ಕಲಿಕೆಯನ್ನು ಉತ್ತೇಜಿಸುತ್ತದೆ

• ಮಲ್ಲಮ್ಮ ನುಡಿ. ಬಾಗಲಕೋಟೆ



ಜಿಲ್ಲೆಯ ಹುನಗುಂದ ತಾಲೂಕಿನ ತಿಮ್ಮಾಪೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಬಿಂಜವಾಡಗಿ ಕ್ಲಸ್ಟರ್ ಮಟ್ಟದ ಎಫ್ಎಲ್ಎನ್ ಮಕ್ಕಳ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಎಸ್.ಡಿ.ಎಂ.ಸಿ. ಅಧ್ಯಕ್ಷ ಯಮನಪ್ಪ ಜಬ್ಬಣ್ಣ ವಡ್ಡರ ಉದ್ಘಾಟಿಸಿದರು.

ಹುನಗುಂದ ತಾಲೂಕಿನ ಬಿಂಜವಾಡಗಿ ಕ್ಲಸ್ಟರ್ ಸಮೂಹ ಸಂಪನ್ಮೂಲ ಅಧಿಕಾರಿ ಲಕ್ಷ್ಮಣ ಲಮಾಣಿ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿ, ಸರಕಾರಿ ಶಾಲೆಗಳಲ್ಲಿ ಬಡವರು, ಸಾಮಾಜಿಕವಾಗಿ ಹಿಂದುಳಿದ ವರ್ಗದ ಮಕ್ಕಳೇ ಹೆಚ್ಚಾಗಿ ಓದುತ್ತಿದ್ದು ಅವರು ದೈಹಿಕವಾಗಿ ಮಾನಸಿಕವಾಗಿ ಮತ್ತು ಬೌದ್ಧಿಕವಾಗಿ ಅತ್ಯಂತ ಸಮರ್ಥರಿದ್ದಾರೆ ಅವರನ್ನು ಖಾಸಗಿ ಶಾಲೆಗಳ ಮಕ್ಕಳೊಂದಿಗೆ ಸ್ಪರ್ಧೆಗಿಳಿಯುವಂತೆ ಮಾಡುವಲ್ಲಿ ಇಂತಹ ಕಾರ್ಯಕ್ರಮಗಳು ಪೂರಕವಾಗಿವೆ ಎಂದರು.

ಶಾಲೆಯ ಮುಖ್ಯ ಗುರುಮಾತೆ ಕೆ.ಎಚ್.ಬೆಲ್ಲದ ಮಾತನಾಡಿ, ಕಲಿಕಾ ಹಬ್ಬಗಳು ಮಕ್ಕಳ ಕಲಿಕೆಯನ್ನು ಉತ್ತೇಜಿಸಲು ಮೊದಲು ಸಾಕ್ಷರತೆ ಮತ್ತು ಅಕ್ಷರ ಜ್ಞಾನವನ್ನು ಬಲಪಡಿಸಲು ಸರಕಾರ ಕಲಿಕಾ ಅಂತರವನ್ನು ಸರಿದೂಗಿಸಲು ಆಯೋಜಿಸಿದೆ ಎಂದು ಹೇಳಿದರು.

ಹಿರೇಬಾದವಾಡಗಿ ಶಾಲೆಯ ಮುಖ್ಯಗುರು ಎಸ್.ಜಿ.ಹುದ್ದಾರ, ಜಾಲಕಮಲದಿನ್ನಿಯ ಪ್ರಭಾರಿ ಮುಖ್ಯಗುರು ಆನಂದ ಬೇಗಾರ. ಘಟ್ಟಿಗನೂರ ಶಾಲೆಯ ಪ್ರಭಾರಿ ಮುಖ್ಯಗುರುಮಾತೆ ಜಿ.ಎಸ್. ದರಗಾದ, ಗ್ರಾಮ ಪಂಚಾಯತ ಸದಸ್ಯೆ ಶರಣಮ್ಮ ರಾಟ, ಶಿಕ್ಷಣ ಪ್ರೇಮಿ ಮಲ್ಲಮ್ಮ ಹನಮಗೌಡರ ಎಸ್.ಡಿ.ಎಮ್.ಸಿ. ಉಪಾಧ್ಯಕ್ಷೆ ಶೈಲಾ ಹೇರೂರ, ಸೈನಜಾ ಬೇಗಂ, ಬಾಷಾಸಾಬ ದರ್ಜಿ, ಮಾಂತೇಶ ಪೂಜಾರಿ, ರೇಣುಕಾ ಜಡಿಯಪ್ಪ, ವರ್ಕರ್ ರಮೇಶ ಹನುಮಂತ ಚಲವಾದಿ, ಶಿವಲಿಂಗಪ್ಪ ದರ್ಮಣ್ಣ ಮಾದರ, ಶ್ರೀಕಾಂತ ಚಿದಾನಂದ ಚಲವಾದಿ, ಯಮನಪ್ಪ ಹುಲಿಗೆಪ್ಪ ಮಾದರ, ಯಮನಪ್ಪ ಜಟ್ಟೆಪ್ಪ ಮಾದರ ಸವಿತಾ ಬಸವರಾಜ ಮಾದರ ಸರಸ್ವತಿ ಹುಲಗಪ್ಪ ಕಡೆಮನಿ ವೇದಿಕೆಯಲ್ಲಿದ್ದರು.

ಸ್ನೇಹಾ ಮಡಿವಾಳರ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಶಿಕ್ಷಕ ಬಿ.ಎಸ್.ತೋಟಿಗೇರ ಸ್ವಾಗತಿಸಿ ಪರಿಚರಿಸಿದರು. ಶಿಕ್ಷಕ ಮಂಜುನಾಥ ಟಕ್ಕಳಿಕಿ ನಿರೂಪಿಸಿದರು. ಶಿಕ್ಷಕಿ ಶಾರದಾ ಹೂಲಗೇರಿ ವಂದಿಸಿದರು.

ಕಾರ್ಯಕ್ರಮದಲ್ಲಿ ಹುನುಗುಂದ ಸಮೂಹ ಸಂಪನ್ಮೂಲ ಕೇಂದ್ರದ ಬಸವರಾಜ ಮುಂಡೆವಾಡಿ, ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಎಂ.ಟಿ.ನಡುವಿನಮನಿ ಹಾಗೂ ಪ್ರಾಥಮಿಕ ಶಾಲಾ ನೌಕರರ ಸಂಘದ ಗೌರವಾಧ್ಯಕ್ಷ ಎಸ್.ಜಿ.ಹುದ್ದಾರ, ಗೀತಾ ತಾರಿವಾಳ, ಮುಖ್ಯ ಗುರುಮಾತೆ ಐ.ಪಿ.ನಾಯಕ, ಮಾಂತೇಶ ಅಮರಾವತಿ, ಶಾಲೆಯ ಶಿಕ್ಷಕರಾದ ಆರ್.ಎಸ್. ಹೂಲಗೇರಿ, ಮುಖ್ಯಗುರು ತೋಳಮಟ್ಟಿ, ಶಿಕ್ಷಕಿ ಕೆ.ಕೆ. ಕೊನೆಸಾಗರ, ಬೇಕಮಲದಿನ್ನಿ ಶಾಲೆಯ ಮುಖ್ಯಗುರು ಎಮ್.ಟಿ.ನಡುವಿನಮನಿ, ಎಸ್.ಬಿ.ಬಾದವಾಡಗಿ, ಜಾಲಕಮ್ಮದಿನ್ನಿ ಎ.ಎಚ್.ಸೂಣಕಲ್ಲ, ಶ್ರೀಧರ ವಾಯ್. ಎಸ್. ಶಿಕ್ಷಕಿ ಮೀನಾಕ್ಷಿ ಹಗೇದಾಳ, ಶ್ರೀಮತಿ ಗುರಿಕಾರ ಶ್ರೀಮತಿ ಅಕ್ಕಮಾಹಾದೇವಿ ಹಳ್ಳೂರ ಹಾಗೂ ಗ್ರಾಮದ ಮುಖಂಡರು ಗ್ರಾಮಸ್ಥರು ಪಾಲ್ಗೊಂಡಿದ್ದರು.

ಕಾರ್ಯಕ್ರಮಕ್ಕೆ ಪೂರ್ವದಲ್ಲಿ ಶಾಲೆಯಿಂದ ಎಸ್.ಡಿ.ಎಮ್‌ಸಿ. ಅಧ್ಯಕ್ಷರು ಹಾಗೂ ಸದಸ್ಯರು ಶಿಕ್ಷಕರು ಶ್ರೀಮಾರುತೇಶ್ವರ ಹಾಗೂ ಬಸವೇಶ್ವರ ದೇವಾಲಯದ ಆವರಣದವರೆಗೆ ಪ್ರಭಾತ ಪೇರಿ ನಡೆಸಿದರು.

# ಮಾರುತೇಶನಿಗೆ ಬೆಳ್ಳಿಯ ಕವಚದ ಕಾಣಿಕೆ

ಮಲ್ಲಮ್ಮ ನುಡಿ ಬಾಗಲಕೋಟೆ:

ಸಮೀಪದ ಸೂಳಿಕೇರಿ ಗ್ರಾಮದ ಶ್ರೀ ಮಾರುತೇಶ್ವರ ದೇವಸ್ಥಾನದ ಮಾರುತೇಶನಿಗೆ 5 ಕೆಜಿ ಬೆಳ್ಳಿ ಕವಚ ಹಾಗೂ ಆಭರಣಗಳನ್ನು ಗ್ರಾಮದ ಬಿಕೆ ಪಾಟೀಲ ದೇಶಪಾಂಡೆ ಮನೆತನ ಹಾಗೂ ಸೀಮಿಕೇರಿ ಮನೆತನದವರು ಕಾಣಿಕೆಯಾಗಿ ಸಮರ್ಪಿಸಿದರು.

ಗುರುವಾರ ಮುಂಜಾನೆ ದೇವಸ್ಥಾನದಲ್ಲಿ ನಡೆದ ವರ್ಣ ರಂಜಿತ ಸಮಾರಂಭದಲ್ಲಿ ಅನೇಕ ಭಕ್ತರು ಪಾಲ್ಗೊಂಡಿದ್ದರು. ಸುಮಾರು ನೂರು ವರ್ಷಗಳ ಹಿಂದಿನ ಆಭರಣಗಳು ಶಿಥಿಲಾವಸ್ಥೆಯಲ್ಲಿದ್ದವು. ಇದನ್ನು ತಿಳಿದ ಬಿ.ಕೆ.ಪಾಟೀಲ ದೇಶಪಾಂಡೆ ಮತ್ತು ಸೀಮಿಕೇರಿ ಮನೆತದವರು ಸುಮಾರು 5 ಕೆ.ಜಿ ಬೆಳ್ಳಿಯ ಕವಚ ಹಾಗೂ ಆಭರಣಗಳನ್ನು ಮಾಡಿಸಿ ಮಾರುತೇಶನಿಗೆ ಸಮರ್ಪಿಸಿದರು.

ಆದಿಶೇಷಾಚಾರ್ಯ ಯಲಗೂರು, ವಿಜಯೇಂದ್ರ ಆಚಾರ್ಯ ಯತ್ನಟ್ಟಿ, ಪಡ್ನಿಸ ಆಚಾರ ಅವರಿಂದ ಹೋಮ ಹವನ ಕಾರ್ಯಕ್ರಮ, ಪ್ರವಚನ ನಡೆಯಿತು. ನಂತರ ಪುರಾತನ ಶ್ರೀರಾಮ ಮಂದಿರದಲ್ಲಿ ತೀರ್ಥ ಪ್ರಸಾದ ನಡೆಯಿತು.

ಗೌರವ ಅಧ್ಯಕ್ಷ ಬಿ.ಕೆ.ಪಾಟೀಲ ಹಾಗೂ ಉತ್ಸವ ಸಮಿತಿ ಅಧ್ಯಕ್ಷ ಗೋವಿಂದರಾವ್ ದೇಶಪಾಂಡೆ ಮಾತನಾಡಿದರು. ರವಿ ದೇಶಪಾಂಡೆ, ಎಮ್.ಕೆ.ಪಾಟೀಲ, ಜಿ.ಎನ್.ಸೂಳಿಕೇರಿ, ಭೀಮಣ್ಣ ಕುಲಕರ್ಣಿ, ಮೋಹನ ದೇಶಪಾಂಡೆ, ಸಂಜೀವ ದೇಶಪಾಂಡೆ, ವಿ.ಎನ್.ಸೂಳಿಕೇರಿ ಸೇರಿ ಮಹಿಳೆಯರು, ಹಿರಿಯರು, ಮಕ್ಕಳು ಪಾಲ್ಗೊಂಡಿದ್ದರು.

# ಸುರೇಶ ವಸ್ತ್ರದ ಅವರಿಗೆ ಸನ್ಮಾನ

ಮಲ್ಲಮ್ಮ ನುಡಿ ಬಾಗಲಕೋಟೆ:



ಚಿರಾಯು ಕನ್ನಡ ವಾಹಿನಿ ಮತ್ತು ನೆಹರೂ ಫೌಂಡೇಶನ್ ಕೊಡಮಾಡುವ ಕೃಷ್ಣದೇವರಾಯ ರಾಷ್ಟ್ರೀಯ ಪ್ರಶಸ್ತಿ ಪಡೆದಿರುವ ವಿದ್ಯಾಗಿರಿಯ ಸಮಾಜ ಸೇವಕ ಡಾ.ಸುರೇಶ ವಸ್ತ್ರದ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣಕುಮಾರ ಶೆಟ್ಟಿ ಬಣ) ಹಾಗೂ ಹುಲಿಗೆಮ್ಮದೇವಿ ಸೇವಾ ಸಂಘ ಮತ್ತು ಬೀದಿಬದಿ ವ್ಯಾಪಾರಸ್ಥರ ಸಂಘಟನೆಗಳು ಸುರೇಶ ವಸ್ತ್ರದ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಿದವು.

ಈ ಸಂದರ್ಭದಲ್ಲಿ ಕರವೇ ಜಿಲ್ಲಾಧ್ಯಕ್ಷ ಮುತ್ತುರಾಜ ಅರಗಿನಶೆಟ್ಟಿ, ಆಂಜನೇಯ ಕಾಗಿ, ನಿಂಗರಾಜ ಮಬ್ರುಮಕರ, ಮಹಾಂತೇಶ ಕೋಟಿ, ಪ್ರಜ್ವಲ ಮತ್ತಿತರರು ಇದ್ದರು.

# ಪ್ರತಿಭಾ ಕಾರಂಜಿ ಸ್ಪರ್ಧೆ ಸನಮ್ ಜಿಲ್ಲಾಮಟ್ಟಕ್ಕೆ ಆಯ್ಕೆ



• ಮಲ್ಲಮ್ಮ ನುಡಿ. ಬಾಗಲಕೋಟೆ

ನವನಗರದ ಕಾಳಿದಾಸ ಪ್ರೌಢಶಾಲೆಯಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಕಲಾದಗಿಯ ಕರ್ನಾಟಕ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಸನಮ್ ಹಂಪಿಹೊಳಿ ಆಶುಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ ಎಂದು ಶಾಲಾ ಮುಖ್ಯ ಶಿಕ್ಷಕಿ ಎಸ್.ಜಿ. ಖಾದಿಮ್ ತಿಳಿಸಿದ್ದಾರೆ.

# ಬ್ಯಾಂಕ್ ಕಳ್ಳತನ ಪ್ರಕರಣ ಮತ್ತಿಬ್ಬರು ಆರೋಪಿಗಳ ಬಂಧನ



• ಮಲ್ಲಮ್ಮ ನುಡಿ ಬಾಗಲಕೋಟೆ:

ಜಿಲ್ಲೆಯ ಬಾದಾಮಿ ತಾಲೂಕಿನ ಕಾಕನೂರ ಎಸ್.ಬಿ.ಐ ಬ್ಯಾಂಕ್ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಿಬ್ಬರು ಆರೋಪಿಗಳನ್ನು ಪೋಲಿಸರು ಬಂಧಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಮಹಾರಾಷ್ಟ್ರ ಮೂಲದ ಅಕ್ಷಯ ಗಜಾನನ ಅಂಬೋರೆ ಅಲಿಯಾಸ್ ಪಾಟೀಲ ಹಾಗೂ ಕುನಾಲ್ ಅಲಿಯಾಸ್ ರುಶಿ ಅನಿಲ ಚವ್ಹಾಣ ಬಂಧಿತ ಆರೋಪಿಗಳಾಗಿದ್ದು, ಇಬ್ಬರನ್ನೂ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿ ಈಗಾಗಲೇ ಉತ್ತರ ಪ್ರದೇಶದ ಮೂಲಕ ಇಬ್ಬರನ್ನು ಬಂಧಿಸಲಾಗಿತ್ತು. ಪ್ರಕರಣದಲ್ಲಿ ಭಾಗಿಯಾಗಿದ್ದಾರೆನ್ನಲಾದ ಇನ್ನೂ ಇಬ್ಬರು ತಲೆ ಮರೆಸಿಕೊಂಡಿದ್ದು ಅವರ ಪತ್ತೆಗೆ ಹುಡುಕಾಟ ನಡೆದಿದೆ ಎಂದು ಹೇಳಿದ ಸಿದ್ದಾರ್ಥ, ಸಧ್ಯಕ್ಕೆ ಒಟ್ಟು ನಾಲ್ವರನ್ನು ಬಂಧಿಸಲಾಗಿದೆ ಎಂದರು.

ಈಗ ಬಂಧಿತ ಇಬ್ಬರಿಂದ ಎರಡು ಕಬ್ಬಿಣದ ರಾಡ್, ಕೆಂಪು ಬಣ್ಣದ ಗ್ಯಾಸ್ ಸಿಲಿಂಡರ್, ಆಕ್ಸಿಜನ್ ಸಿಲಿಂಡರ್, ಒಂದು ಕಾರು, ಕಳುವು ಮಾಡಿದ್ದ 4 ಲಕ್ಷ 5 ಸಾವಿರ ರೂ.ಮೌಲ್ಯದ 30 ಗ್ರಾಂ ಬಂಗಾರ, 1 ಲಕ್ಷ 25 ಸಾವಿರ ರೂ. ನಗದು ಮತ್ತು ಒಂದು ಕಂಟ್ರಿಮೇಡ್ ಪಿಸ್ತೂಲು ಮತ್ತು ಮೂರು ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಬಂಧಿತ ಆರೋಪಿಗಳು ಗ್ಯಾಸ್, ಆಕ್ಸಿಜನ್ ಸಿಲಿಂಡರ್, ಗ್ಯಾಸ್ ಕಟರ್ ಮತ್ತಿತರ ವಸ್ತುಗಳನ್ನು ಚೀಲದಲ್ಲಿ ತುಂಬಿಕೊಂಡು ರಾಜ್ಯಕ್ಕೆ ಬಂದು ಕಾಕನೂರ ಬ್ಯಾಂಕಿನಲ್ಲಿ ಕಳೆದ ಸೆಪ್ಟಂಬರ್ 2 ರಂದು ರಾತ್ರಿ 10 ಗಂಟೆಯಿಂದ ಬೆಳಗಿನಜಾವ 4 ಗಂಟೆಯತನಕ ಕಳ್ಳತನ ಕಾಯಕ ನಡೆಸಿದ್ದರು ಎಂದು ಹೇಳಿದ ಎಸ್.ಪಿ ಗೋಯೆಲ್, ಬಂಧಿತ ನಾಲ್ವರಿಂದ ಒಟ್ಟು 35 ಲಕ್ಷ, 90 ಸಾವಿರ ರೂಗಳ ನಗದು ಹಾಗೂ ಬಂಗಾರ ವಶಪಡಿಸಿಕೊಂಡಿರುವುದಾಗಿ ತಿಳಿಸಿದರು.

ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೋಲಿಸ್ ತಂಡಕ್ಕೆ ಸೂಕ್ತ ಬಹುಮಾನ ನೀಡಲಾಗುವುದು ಎಂದು ಅವರು ಹೇಳಿದರು. ಹುನಗುಂದ ಡಿಎಸ್‌ಪಿ ಸಂತೋಷ ಬನಹಟ್ಟಿ, ಬಾದಾಮಿ ಸಿಪಿಐ ಬನ್ನೆ ಮತ್ತಿತರ ಅಧಿಕಾರಿಗಳು ಇದ್ದರು.

# ಆಧುನಿಕ ಭಾರತದ ಶಿಲ್ಪಿ ವಾಜಪೇಯಿ ಒಬ್ಬ ಯುಗಪುರುಷ



ಮಲ್ಲಮ್ಮ ನುಡಿ ಬಾಗಲಕೋಟೆ:

ಭಾರತೀಯರ ಸ್ವಾಭಿಮಾನದ ಕೆಚ್ಚನ್ನು ಬಡಿದೆಬ್ಬಿಸಿದ ರಾಷ್ಟ್ರನಾಯಕ ಅಟಲ್ ಬಿಹಾರಿ ವಾಜಪೇಯಿ ಆಧುನಿಕ ಭಾರತದ ಶಿಲ್ಪಿಯಾಗಿದ್ದರು ಅವರೊಬ್ಬ ಯುಗಪುರುಷ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ನಗರದ ಬಿವಿವಿ ಸಂಘದ ಮಿನಿ ಸಭಾಭವನದಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ಗುರುವಾರ ಹಮ್ಮಿಕೊಂಡ ಭಾರತರತ್ನ ಅಟಲ್ ಬಿಹಾರಿ ವಾಜಪಾಯಿ ಅವರ ಜನ್ಮದಿನಾಚರಣೆ ನಿಮಿತ್ಯ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಮೂಲಕ ಗೌರವ ನಮನಗಳನ್ನು ಸಲ್ಲಿಸಿ ಮಾತನಾಡಿದ ಅವರು ಭಾರತ ಸನಾತನ ಹಿಂದೂ ಸಂಸ್ಕೃತಿಯ ಪ್ರತಿನಿಧಿಯಾಗಿ ಹಾಗೂ ರಾಷ್ಟ್ರೀಯತೆಯ ಪ್ರೇರಕ ಶಕ್ತಿಯಾಗಿ ಬೆಳಗಿದ ಅಟಲ್ ಬಿಹಾರಿ ವಾಜಪೇಯಿ ಭಾರತೀಯರ ಪಾಲಿಗೆ ಸ್ಪೂರ್ತಿ ಎಂದರು.

ಕಾರ್ಯಕ್ರಮದಲ್ಲಿ ಜಿ.ಎನ್,ಪಾಟೀಲ್, ಲಕ್ಷ್ಮೀ ನಾರಾಯಣ ಕಾಸಟ್, ರಾಜು ನಾಯ್ಕರ, ರಾಜು ಮುದೇನೂರ, ಭಾಗೀರತಿ ಪಾಟೀಲ, ಅಶೋಕ ಲಿಂಬಾವಳಿ, ಸುರೇಶ ಕೊಣ್ಣೂರ, ರಾಜು ರೇವಣಕರ ಬಸವರಾಜ ಹುನಗುಂದ, ಶಿವಾನಂದ ಟವಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು

# ಮಾವಾ ಮಾರಾಟದ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ

ಮಲ್ಲಮ್ಮ ನುಡಿ ಬಾಗಲಕೋಟೆ:

ಜಿಲ್ಲೆಯಲ್ಲಿ ಮಾವಾ ಸೇರಿದಂತೆ ತಂಬಾಕು ಉತ್ಪನ್ನಗಳನ್ನು ಅಕ್ರಮವಾಗಿ ಸಾರ್ವಜನಿಕವಾಗಿ ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿರುವ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಇಂತಹ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಕಠಿಣ ಕ್ರಮದ ಜೊತೆ ದಂಡ ವಿಧಿಸಲಾಗುತ್ತಿದೆ ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾವಾ ಮಾರಾಟ ಮಾಡಿದಲ್ಲಿ ಅವರಿಗೆ ಲಕ್ಷಾಂತರ ರೂಪಾಯಿ ದಂಡ ವಿಧಿಸಲಾಗುತ್ತಿದೆಯಲ್ಲದೇ, ಕಠಿಣ ಕ್ರಮದ ಎಚ್ಚರಿಕೆಯನ್ನು ಸಹ ನೀಡಲಾಗಿದೆ ಎಂದರು.

ಪದೇ ಪದೇ ಅಕ್ರಮ ಮಾರಾಟದಲ್ಲಿ ತೊಡಗಿರುವವರನ್ನು ಗುರುತಿಸಿ ಅವರಿಗೆ ಎಚ್ಚರಿಕೆ ನೀಡಲಾಗಿದೆ. ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಹೇಳಲಾಗಿದೆ ಎಂದ ಎಸ್ಪಿ ಸಿದ್ದಾರ್ಥ ಗೋಯೆಲ್, ಸಾರ್ವಜನಿಕರ ಆರೋಗ್ಯಕ್ಕೆ ಹಾನಿ ಮಾಡುವ ಯಾವುದೇ ಚಟುವಟಿಕೆಗಳನ್ನು ಸಹಿಸುವುದಿಲ್ಲ. ಕಾನೂನು ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ ಎಂದು ತಿಳಿಸಿದರು.

# ರೈತರಪರ ನಿಲುವು ಪ್ರದರ್ಶಿಸಿ : ಕಾಂಗ್ರೆಸ್

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ :

ಮಾಜಿ ಸಂಸದ ಭಗವಂತ ಖೂಬಾ ಅವರು ಖಾಸಗಿ ವಿಮಾ ಕಂಪನಿಗಳ ಪರವಾಗಿ ನಿಲ್ಲದೇ ರೈತರಪರ ನಿಲುವು ಪ್ರದರ್ಶಿಸಬೇಕು ಎಂದು ಕಾಂಗ್ರೆಸ್ ಪಕ್ಷದ ಮುಖಂಡರಾದ ಗಜಾನಂದ ಮೊಳಕೀರೆ ಮತ್ತು ಪ್ರವೀಣ ಸ್ವಾಮಿ ಒತ್ತಾಯಿಸಿದ್ದಾರೆ. ಫಸಲ್ ಬಿಮಾ ಯೋಜನೆಯಡಿ ರೈತ–ರಿಂದ ಕೋಟ್ಯಂತರ ರೂಪಾಯಿ ಪ್ರೀಮಿಯಂ ಸಂಗ್ರಹಿಸಿಕೊಂಡು, ಬೆಳೆ ನಷ್ಟವಾದಾಗಲೂ ರೈತರಿಗೆ ವಿಮಾ ಪರಿಹಾರ ನೀಡದೆ ಖಾಸಗಿ ವಿಮಾ ಕಂಪನಿಗಳು ನಡೆಸುತ್ತಿರುವ ಅನ್ಯಾಯದ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಧೈರ್ಯವಾಗಿ ರೈತಪರವಾಗಿ ಧ್ವನಿ ಎತ್ತಿದ್ದಾರೆ. ಆದರೆ ಖಾಸಗಿ ವಿಮಾ ಕಂಪನಿಗಳ ಅಕ್ರಮಗಳನ್ನು ಪ್ರಶ್ನಿಸಿದ ತಕ್ಷಣವೇ ಮಾಜಿ ಸಂಸದ ಭಗವಂತ್ ಖುಬಾ ಅವರು ಅಸಹನೆ ವ್ಯಕ್ತಪಡಿಸುತ್ತಿರುವುದು ಅಚ್ಚ–ರಿಯ ಸಂಗತಿ. ರೈತರಿಗೆ ನ್ಯಾಯ ದೊರಕಬೇಕು ಎಂಬ ಹೋರಾಟಕ್ಕೆ ವಿರೋಧ ವ್ಯಕ್ತಪಡಿಸುವ ಅಗತ್ಯವೇನು ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಉದ್ಭವಿಸಿದೆ. ಅಧಿಕಾರದಲ್ಲಿದ್ದ ಅವಧಿಯಲ್ಲಿ ಖೂಬಾ ಅವರು ರೈತರ ಬೆಳೆ ವಿಮಾ ಸಮಸ್ಯೆಗಳ ಬಗ್ಗೆ ಮೌನ ವಹಿಸಿದ್ದವರು, ರೈತರ ಪರವಾಗಿ ಧ್ವನಿ ಎತ್ತುತ್ತಿರುವ ಸಚಿವರ ವಿರುದ್ಧ ಮಾತನಾಡುತ್ತಿರುವುದು ಖಂಡನೀಯ ಎಂದು ತಿರುಗೇಟು ನೀಡಿದ್ದಾರೆ. ಖಾಸಗಿ ವಿಮಾ ಕಂಪನಿಗಳ ಪರವಾಗಿ ವಕಾಲತ್ತು ವಹಿಸುವ ಹಟದ ಹಿಂದಿರುವ ಉದ್ದೇಶವೇನು ಎಂಬುದನ್ನು ಮಾಜಿ ಸಂಸದ ಖುಬಾ ಅವರು ಜನತೆಗೆ ಸ್ಪಷ್ಟಪಡಿಸಬೇಕು.

ಸಾರ್ವಜನಿಕಜೀವನದಲ್ಲಿರುವವರು ಖಾಸಗಿ ಕಂಪನಿಗಳ ರಕ್ಷಣೆಗೆ ನಿಲ್ಲುವ ಬದಲು ರೈತರ ಹಿತ ತಾಳಬೇಕು. ಸಚಿವ ಈಶ್ವರ ಖಂಡ್ರೆ ಅವರ ಹೋರಾಟ ಯಾವುದೇ ರಾಜಕೀಯ ಲಾಭಕ್ಕಾಗಿ ಅಲ್ಲ; ಅದು ಬೆಳೆ ನಷ್ಟದಿಂದ ಸಂಕಷ್ಟದಲ್ಲಿರುವ ರೈತರ ಬದುಕಿನ ಪ್ರಶ್ನೆಯಾಗಿದೆ.

ರೈತರ ನೋವಿಗೆ ಸ್ಪಂದಿಸುವ ಹೋರಾಟವನ್ನು ಪ್ರಶ್ನಿಸುವುದನ್ನು ತೀವ್ರವಾಗಿ ಖಂಡಿಸುತ್ತೇವೆ. ಮಾಜಿ ಸಂಸದ ಖುಬಾ ಅವರು ರೈತ ವಿರೋಧಿ ನಿಲುವು ತ್ಯಜಿಸಿ, ವಿಮಾ ಕಂಪನಿಗಳ ಅಕ್ರಮಗಳ ವಿರುದ್ಧ ಧ್ವನಿ ಎತ್ತಬೇಕೆಂದು ಪ್ರಕಟಣೆ ಮೂಲಕ ಒತ್ತಾಯ ಮಾಡಿದ್ದಾರೆ.

# ಆರ್.ಡಿ.ಪಿ.ಆರ್ ಕ್ರೀಡಾಕೂಟ ಕ್ರಿಕೇಟ ಆಟ ಆಡಿದ ಡಿಸಿ: ಸಿಇಓ
## ಸದೃಢವಾದ ದೇಹ ಮನಸ್ಸಿನಿಂದ ಸಾರ್ಥಕ ಸೇವೆ ಸಾಧ್ಯ : ಡಿಸಿ

• ಮಲ್ಲಮ್ಮ ನುಡಿ ಬಾಗಲಕೋಟೆ:

ಸದೃಢವಾದ ದೇಹ ಮತ್ತು ಮನಸ್ಸು ಇದ್ದಾಗ ಮಾತ್ರ ಸಾರ್ಥಕವಾದ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.

ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಗುರುವಾರ ಜಿಲ್ಲಾ ಪಂಚಾಯತ, ಗ್ರಾಮೀಣಾಭಿವೃದ್ಧಿ ಇಲಾಖೆಯ ಎಲ್ಲ ವೃಂದ ಸಂಘಗಳು, ಕ್ರೀಡಾ ಇಲಾಖೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಪಂಚಾಯತ ರಾಜ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹಮ್ಮಿಕೊಂಡ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಮ್ಮ ದಿನನಿತ್ಯದ ಕೆಲಸದ ಒತ್ತಡದಲ್ಲಿ ದೇಹ ಮತ್ತು ಮನಸ್ಸನ್ನು ಮರೆಯುವುದು ಸಹಜ. ಆದರೆ ಆರೋಗ್ಯವಿಲ್ಲದೆ ಯಾವುದೇ ಸಾಧನೆ ಮಾಡಲಯ ಸಾಧ್ಯವಾವುದಿಲ್ಲ. ಕ್ರೀಡಾಕೂಟಗಳ ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ನಮರಂಜನೆಗೆ ಮಾತ್ರವಲ್ಲ. ಅವು ನಮ್ಮೊಳಗಿನ ಮಾನವೀಯತೆಯನ್ನು ಜಾಗೃತಿಗೊಳಿಸುತ್ತವೆ. ನೃತ್ಯ ಸಂಗೀತ, ನಾಟಕಗಳು ನಮ್ಮಲ್ಲಿರುವ ಒತ್ತಡವನ್ನು ಕಡಿಮೆ ಮಾಡುವುದರ ಜೊತೆಗೆ ಸಹದ್ಯೋಗಿಗಳ ಸಂಬಂಧವನ್ನು ಗಟ್ಟಿಗೊಳಿಸುತ್ತದೆ. ಆದ್ದರಿಂದ ವಿವಿಧ ಸ್ಪರ್ಧೆಗಳಲ್ಲಿ ಎಲ್ಲರೂ ಭಾಗವಹಿಸುವ ಕೆಲಸವಾಗಬೇಕು ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಕ್ರೀಡಾ ಧ್ವಜಾರೋಹನವನ್ನು ನೆರವೇರಿಸಿ ಮಾತನಾಡಿ ಕ್ರೀಡಾಕೂಟಗಳನ್ನು ಬೇರೆ ಬೇರೆ ಇಲಾಖೆಯವರು ಸಹ ಕ್ರೀಡಾಕೂಟಗಳನ್ನು ಆಯೋಜಿಸುವ ಕೆಲಸವಾಗಬೇಕು ಎಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೇನ್ ಕ್ರೀಡಾ ಜ್ಯೋತಿ ಸ್ವೀಕರಿಸಿ ಮಾತನಾಡಿ ಪಂಚಾಯತ ರಾಜ್ ಇಲಾಖೆಯ ಅಧಿಕಾರಿ ಹಾಗೂ ಆಯೋಜಿಸಿದ್ದು, ಈ ಪ್ರವೃತ್ತಿ ಹೀಗೆ ಮುಂದುವರೆಯಲಿ ಎಂದು ಆಶಿಸುತ್ತೇನೆ ಎಂದರು.

ಕಾರ್ಯಕ್ರಮದ ಅದ್ಯಕ್ಷತೆ ವಹಿಸಿದ್ದ ಜಿ.ಪಂ ಸಿಇಓ ಶಶಿಧರ ಕುರೇರ ಮಾತನಾಡಿ ಆಡಳಿತದಲ್ಲಿ ಸುಧಾರಣೆ ತರಲು



ಚೆನ್ನಾಗಿ ಆಯೋಜನೆ ಮಾಡಿದ್ದಾರೆ. ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ಪರೇಡ ಚೆನ್ನಾಗಿ ಮೂಡಿಬಂತು. ಇದರಿಂದ ಶಿಸ್ತು ಬರುತ್ತದೆ. ಮೇಲಾಧಿಕಾರಿಕಾರಿಗಳು ಕೇವಲ ಸುಪರವೇಜರ ಕೆಲಸ ನಿಜವಾಗಿ ಪೀಲ್ಡದಲ್ಲಿ ಕೆಲಸ ಮಾಡುವವರು ಕೆಳಹಂತದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಾಗಿರುತ್ತಾರೆ. ಇದೇತರಹ ಸಿಬ್ಬಂದಿಗಳದ್ದು ಒತ್ತಡದ ಕೆಲಸ. ಇಂತಹ ಒತ್ತಡದ ಬದುಕಿನಿಂದ ಹೊರಬರಲು ಇಲಾಖೆಯ ಅಧಿಕಾರಿಗಳು ಕ್ರೀಡಾಕೂಟಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯವಾದುದು. ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು. ಸತತವಾಗಿ ಮೂರನೇ ಬಾರಿ ಕ್ರೀಡಾಕೂಟಗಳನ್ನು ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉತ್ಸಾಹಿಗಳಾಗಿ ಕೆಲಸ ನಿರ್ವಹಿಸುವಂತಾಗಲಿ ಎಂಬ ದೃಷ್ಟಿಯಿಂದ ಪ್ರತಿ ವರ್ಷ ಕ್ರೀಡಾಕೂಟಗಳನ್ನು ಆಯೋಜನೆ ಮಾಡುತ್ತಾ ಬಂದಿದ್ದೇವೆ. ಕೆಲಸ ಮಾಡಲು ದೇಹದ ಆರೋಗ್ಯದ ಜೊತೆಗೆ ಮನಸ್ಸು ಶುದ್ದವಾಗಿರಬೇಕಾಗುತ್ತದೆ. ಆದಾರ ಮಾತ್ರ ಕೆಲಸದಲ್ಲಿ ಉತ್ಸಾಹ ಬರುತ್ತದೆ. ಇದರಿಂದ ಸರಕಾರಿ ಯೋಜನೆಗಳನ್ನು ಕಟ್ಟ ಕಡೆಯ ವ್ಯಕ್ತಿಗೂ ತಲುಪಿಸುವ ಕಾರ್ಯ ಮಾಡಲು ಸಾಧ್ಯವಾಗುತ್ತದೆ ಎಂದರು. ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ ಮಾತನಾಡಿದರು. ಪ್ರಾರಂಭದಲ್ಲಿ ಜಿ.ಪಂ ಉಪಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಕ್ರೀಡಾ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಕಾರ್ಯಕ್ರಮದಲ್ಲಿ ಜಿ.ಪಂ ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಅಲ್ಲಾಪೂರ, ಯೋಜನಾ ನಿರ್ದೇಶಕ ಎಸ್.ಎಂ.ಕಾಂಬಳೆ, ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ಪಂಚಾಯತ ರಾಜ್ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಮಲ್ಲನಗೌಡ ಬಿರಾದಾರ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ, ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಸಂಘದ ಜಿಲ್ಲಾದ್ಯಕ್ಷ ರಾಜು ವಾರದ ಸೇರಿದಂತೆ ಇತರರು ಉಪಸ್ಥಿತರಿದ್ದರು. ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ ಸಿಇಓ ಸೇರಿದಂತೆ ಇತರೆ ಅಧಿಕಾರಿಗಳು ಕ್ರಿಕೆಟ್ ಆಡಿದರು.

# ಗಡಿನಾಡು ಕನ್ನಡ ದೀಪ, ನಡೆದಾಡುವ ದೇವರು ಲಿಂ. ಡಾ.ಚನ್ನಬಸವ ಪಟ್ಟದ್ದೇವರು

ವಿಶೇಷ ಲೇಖನ



• ಪರಮೇಶ ರಾಂಪುರೆ, ಬೀದರ

ಗಡಿನಾಡು ಕನ್ನಡ ದೀಪ, ಗಡಿಯಲ್ಲಿ ಕನ್ನಡಕ್ಕೆ ಮರು ಜೀವ ನೀಡಿದ ಶಿಕ್ಷಣ ಪ್ರೇಮಿ, ಸರ್ವರನ್ನು ಸಮನಾಗಿ ನೋಡಿದ ಮಹಾನ ಮೇಧಾವಿ,ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಮಾನತೆಗಾಗಿ, ಈ ಭಾಗದ ಅಭಿವೃದ್ಧಿಗಾಗಿ, ಸ್ವಂತ ಕಲ್ಲು ಕಲಸಿ ಶಾಲೆ ಕಟ್ಟಿರುವ ಕಾಯಕ ಜೀವಿ, ಮುಷ್ಠಿ ಫಂಡ್ ನಿಂದ ಬಡವರಿಗೆ ಶಿಕ್ಷಣ ನೀಡಿದ, ನಿಜಾಂ ಆಳ್ವಿಕೆಯಲ್ಲಿ ಉರ್ದು ದಬ್ಬಾಳಿಕೆ ನಡುವೆ ಕನ್ನಡವನ್ನು ಉನ್ನ ಬಡಿಸಿದ ಕಲ್ಯಾಣ ಕರ್ನಾಟಕ ಭಾಗದ ನಡೆದಾಡುವ ದೇವರು ಎಂದು ಖ್ಯಾತ ನಾಮ ಹೊಂದಿರುವ ಪೂಜ್ಯ ಶ್ರೀ ಮ.ಘ.ಚ. ಡಾ. ಚನ್ನಬಸವ ಪಟ್ಟದ್ದೇವರು.

**ಕಮಲನಗರದಲ್ಲಿ ಹುಟ್ಟಿದ ಕನ್ನಡದ ಪಟ್ಟದ್ದೇವರು:** ಕರ್ನಾಟಕದ ಕಿರಿಟ ಬೀದರ ಜಿಲ್ಲೆಯ, ಕಮಲನಗರ ತಾಲೂಕಿನಲ್ಲಿ 22/04/1890ರಲ್ಲಿ ಸಂಗಮ್ಮ ರಾಜಪ್ಪ ಬುಳ್ಳಾ ದಂಪತಿಗಳ ಉದರದಲ್ಲಿ ಜನಿಸಿದ ಮಹಾರುದ್ರಪ್ಪ ಬುಳ್ಳಾ ಎಂಬ ಮಹಾ ಪುರುಷ ಎಂಬ ಬಾಲಕ, ಚಿಕ್ಕ ವಯಸ್ಸಿನಲ್ಲಿ ಪ್ಲೇಗೋ ರೋಗದಿಂದ ತಂದೆತಾಯಿಯನ್ನು ಕಳೆದು ಕೊಂಡರು. ಮುಂದೆ ಇವರ ಸಂಬಧಿಕರು ಇವರನ್ನು ಭಾಲ್ಕಿಯ ಸಿದ್ದಬಸವ ಸ್ವಾಮೀಜಿಗಳಿಂದ ಲಿಂಗ ದೀಕ್ಷೆ ನೀಡಿ ಭಾಲ್ಕಿ ಮಠಕ್ಕೆ ಒಪ್ಪಿಸದರು.

**ಮುದೋಳ (ಬಿ) ಸ್ವಾಮಿಗಳಿಂದ ಬಾಲ್ಯ ಶಿಕ್ಷಣ:** ಭಾಲ್ಕಿ ಮಠದಲ್ಲಿ ಗುರು ಸೇವೆ ಮಾಡುತ್ತಾ, ಬಹಳ ಭಕ್ತಿಮಯ ಶಿಷ್ಯನನ್ನು ಲಿಂಗ ದೀಕ್ಷೆ ನಂತರ ಚನ್ನಬಸವ ಎಂದು ನಾಮಕರಣ ಮಾಡಿ, ಮುಂದೆ ಇವರಿಂದ ಈ ಭಾಗದಲ್ಲಿ ಹೆಚ್ಚಿನ ಸಮಾಜ ಸುಧಾರಣೆ ಆಗಬೇಕೆಂದು, ಕನ್ನಡ ಶಿಕ್ಷಣ ನೀಡಲು ಕಮಲನಗರ ತಾಲೂಕಿನ ಮುಧೋಳ(ಬಿ) "ಚರಮೂರ್ತಿ" ಶ್ರೀ ಮಠದಲ್ಲಿ ಶಿವಲಿಂಗ ಮಹಾಸ್ವಾಮಿಗಳ ಹತ್ತಿರ ಕಳುಹಿಸಿದರು. ಶಾಲೆಗಳು ಇಲ್ಲದ ಆವಾಗಿನ ಪರಿಸ್ಥಿತಿಯಲ್ಲಿ ಸ್ವಾಮೀಜಿಗಳಿಂದ ಮಠದಲ್ಲಿ ಕನ್ನಡ ಜ್ಞಾನ ನೀಡಲಾಗುತ್ತಿತ್ತು. ಶ್ರೀಗಳಿಂದ ಕನ್ನಡ, ಸಂಸ್ಕೃತಿ ಮತ್ತು ಒಳ್ಳೆಯ ಸಂಸ್ಕಾರ ಪಡೆದರು. ಹಾನಗಲ್ಲ ಕುಮಾರ ಶಿವಯೋಗ ಮಂದಿರದಲ್ಲಿ ಹೆಚ್ಚಿನ ಶಿಕ್ಷಣ ಪಡೆದರು.

**1924ರಲ್ಲಿ ಭಾಲ್ಕಿ ಮಠದ ಪೀಠಾಧಿಪತಿಯಾಗಿ ಪಟ್ಟಾಭಿಷೇಕ:** ಚರಮೂರ್ತಿ ಶಿವಲಿಂಗ ಮಹಾಸ್ವಾಮಿಗಳು ಮತ್ತು ಹಾನಗಲ್ಲ ಕುಮಾರ ಶಿವಯೋಗಿ ಸೇರಿದಂತೆ ಇನ್ನಿತರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಚನ್ನಬಸವ ಪಟ್ಟದ್ದೇವರು ಅದ್ದೂರಿಯಾಗಿ ಪಟ್ಟಾಭಿಷೇಕ ಮಾಡಲಾಯಿತು.




ಪೂಜ್ಯ ಲಿಂ. ಡಾ.ಚನ್ನಬಸವ ಪಟ್ಟದ್ದೇವರು ಮತ್ತು ಬಸವಲಿಂಗ ಪಟ್ಟದ್ದೇವರು....

ಆನೆಮೇಲೆ ಭಾಲ್ಕಿಯ ಗಲ್ಲಿ ಗಲ್ಲಿಯಲ್ಲಿ ಮೆರವಣಿಗೆ ನಡೆಯಿತು, ಸಾವಿರಾರು ಭಕ್ತರು ಸಂಭ್ರಮ ಸಡಗರಪಟ್ಟರು.

**ಹೊರಗಡೆ ಉರ್ದು ಫಲಕ ಹಾಕಿ ಒಳಗಡೆ ಕನ್ನಡ ಕಲಿಸಿದ ಪಟ್ಟದ್ದೇವರು:** ನಿಜಾಮ ಆಳ್ವಿಕೆಯ ಇದ್ದ ಈ ಪ್ರದೇಶದಲ್ಲಿ ಉರ್ದು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು, ಕನ್ನಡ ಕಲಿಯಲು ಅವಕಾಶ ಇರಲಿಲ್ಲ, ಇಂಥ ಸಂದರ್ಭದಲ್ಲಿ ಹೊರಗಡೆ ಉರ್ದು ಫಲಕಹಾಕಿ ಒಳಗಡೆ ಕನ್ನಡ ಶಿಕ್ಷಣವನ್ನು ನೀಡಿದ ನಮ್ಮ ಕನ್ನಡದ ಪಟ್ಟ ದೇವರು.1936ರಲ್ಲಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಬಡ ಮಕ್ಕಳಿಗೆ ಶಿಕ್ಷಣ ದಾಸೋಹ ನೀಡಿದರು.

ಮುಂದೆ 1992ರಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಸ್ಥಾಪಿಸಿ ಗುರುಕುಲ ಶಿಕ್ಷಣ ಕ್ಕೆ ಒತ್ತುನೀಡಿದರು.

**ನೂತನ ಅನುಭವ ಮಂಟಪದ ಶಿಲ್ಪಿ:** 12ನೇ ಶತಮಾನದಲ್ಲಿ ಶರಣರು, ಕಾಯಕ ಜೀವಿಯಾಗಿ ಸಮಾಜ ಸುಧಾರಣೆಗೆ ವಚನಗಳ ಮೂಲಕ ವಚನ ಕ್ರಾಂತಿಯನ್ನು ಹರಿಸಿದರು, ಕರ್ನಾಟಕದ ಯಾವ ಸರ್ಕಾರ , ಯಾವ ಮಠಗಳು ಬಸವಕಲ್ಯಾಣದ ಕಡೆ ಮುಖ ಮಾಡದಿದ್ದಾಗ, ಭಾಲ್ಕಿ ಮಠದಿಂದ ಪಾದಯಾತ್ರೆ ಮೂಲಕ ಬಸವಕಲ್ಯಾಣಕ್ಕೆ ಹೋಗಿ ಅನುಭವ ಮಂಟಪ ಸ್ಥಾಪಿಸಿ ನಾಡಿನ ಗಮನ ಸೆಳೆದವರು.

**ಅಸ್ಪರ್ಶತೆ ತೊಡಗಿಸಿದ ಸ್ವಾಮೀಜಿ:** ದಲಿತರಿಗೆ ಬಾವಿ ನೀರು ತೆಗೆದುಕೊಳ್ಳಲು ಅವಕಾಶ ನೀಡದ ಸಂದರ್ಭದಲ್ಲಿ ಮುಂದೆ ನಿಂತು ನೀರು ಕೊಡಿಸಿದ್ದರು. ದಲಿತರಿಗೆ ಲಿಂಗದೀಕ್ಷೆ ನೀಡಿ, ಎಲ್ಲರನ್ನು ಸಮಾನರಾಗಿ ಕಾಣುವ ಪೂಜ್ಯರು ಯಾರಿಗೆ ಭೇದ ಭಾವ ಮಾಡುತ್ತಿರಲಿಲ್ಲ, ಹಿಂದೂ ಮುಸ್ಲಿಂ ಎನ್ನದೆ ಎಲ್ಲರು ಶ್ರೀ ಗಳನ್ನು ಬಹಳ ಗೌರವ ದಿಂದ ಕಾಣುತ್ತಿದ್ದರು.

**ಬೀದರ ಜಿಲ್ಲೆಯ ಮಕ್ಕಳ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ:** ಡಾ. ಚನ್ನಬಸವ ಪಟ್ಟದ್ದೇವರು ಅಂದು ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಹಾಗೂ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಸ್ಥಾಪಿಸಿದ ಶಿಕ್ಷಣ ಸಂಸ್ಥೆಯಲ್ಲಿ ಕಲಿತ ಮಕ್ಕಳು ಇಂದು ರಾಜ್ಯ -ಅಂತರರಾಜ್ಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದು, ಪೂಜ್ಯರು ಈ ಭಾಗದಲ್ಲಿ ಹಚ್ಚಿದ ಎರಡೂ ಶಿಕ್ಷಣದ ಗಿಡಗಳು ಇಂದು ವಿಶಾಲವಾದ ಹೆಮ್ಮರವಾಗಿ ಸಾವಿರಾರು ಮಕ್ಕಳ ಉಜ್ವಲ ಭವಿಷ್ಯದ ಬುನಾದಿಯಾಗಿದೆ.ಇದು ಅವರು ನಮ್ಮ ಭಾಗದಲ್ಲಿ ಮಾಡಿದ ಶೈಕ್ಷಣಿಕ ಕ್ರಾಂತಿಯಾಗಿದೆ.

**ಪೂಜ್ಯರ ಆಶೀರ್ವಾದದಿಂದ ಇಲ್ಲಿಯ ನಾಯಕರು, ಸ್ವಾಮೀಜಿಗಳು ರಾಜ್ಯದಂತ್ಯ ಪ್ರಸಿದ್ದಿ:** ಅಂದು ಪೂಜ್ಯರ ಜೊತೆಗೂಡಿ ಸಮಾಜ ಸುಧಾರಣೆ ಮಾಡಿದ ನಾಯಕರು ಇಂದು ಜಿಲ್ಲೆ ಯಲ್ಲದೆ ಕರ್ನಾಟಕ ರಾಜ್ಯದ ತುಂಬಾ ಹೆಸರುವಾಸಿಯಾದ ನಾಯಕರಾಗಿ ಹೊರಹೊಮ್ಮಿದ್ದಾರೆ, ಈ ಭಾಗದಲ್ಲಿರುವ ಸಣ್ಣ ಮಠವು ಇಂದು ರಾಜ್ಯದ ನಾನಾ ಭಾಗದ ಪ್ರಸಿದ್ಧ ಮಠಾಧೀಶರು ಬಂದು ಭೇಟಿ ನೀಡುವಂತ ಖ್ಯಾತಿಗಳಿಸಿದೆ, ಆಶೀರ್ವಾದದಿಂದ ಪೂಜ್ಯರ ಆಚಾರ ವಿಚಾರಗಳನ್ನು ಎತ್ತಿ ಹಿಡಿಯುವ ಇಂದಿನ ಪೀಠಾಧಿಪತಿಗಳು ರಾಜ್ಯ ಅಂತರ ರಾಜ್ಯ ಮಟ್ಟದಲ್ಲಿ ಬೆಳೆದು ಸೇವೆ ನೀಡುತ್ತಿದ್ದಾರೆ.

**ಸಾಮಾಜಿಕ ಕ್ಷೇತ್ರದಲ್ಲಿ ಹೋರಾಟ:** ಪಟ್ಟದೇವರು ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಸಾಮಾಜಿಕ ಹೋರಾಟದಲ್ಲಿ ಮುನ್ನುಗುತ್ತಿದ್ದರು, ರೈಲು ರೋಕೋ ಚಳುವಳಿ ಮಾಡಿ, ತಮ್ಮ ಸಾಮಾಜಿಕ ಬದ್ಧತೆ ಎತ್ತು ಹಿಡಿದ್ದರು. ಬರಗಾಲ ಇದ್ದಾಗ "ಮುಷ್ಠಿ ಫಂಡ್" ಸ್ವಂತ ಜೋಳಿಗೆ ಹಿಡಿದು ಮನೆ ಮನೆಗೆ ತೇರಳಿ ಬಡ ಮಕ್ಕಳ ಶಿಕ್ಷಣ ಹಾಗೂ ಊಟ ನೀಡುತ್ತಿದ್ದರು. ಇಂತಹ ಕಾರ್ಯ ಜನಕ್ಕೆ ಬಹಳ ಹತ್ತಿರ ಮಾಡಿತ್ತು, ಈ ಸ್ವಾಮೀಜಿ ನಮ್ಮಗಾಗಿ ಇಷ್ಟು ಕಷ್ಟ ಪಡುತ್ತಿದ್ದಾರೆ ಇವರು ನಮ್ಮ ಭಾಗದ ದೇವರು, ನಮ್ಮಗೆ ಸಿಕ್ಕ ನಡೆದಾಡುವ ದೇವರು ಎಂದು ಕೊಂಡಾಡುತ್ತಿದ್ದರು.

**ಶ್ರೀ ಗಳ ಸಾಧನೆಗೆ ಪ್ರಶಸ್ತಿಗಳ ಮಾಹಾಪುರ:** ಸ್ವಾಮೀಜಿಯವರಿಗೆ ಭಾರತದ ಮಾಜಿ ರಾಷ್ಟ್ರಪತಿ ಶ್ರೀ ಗಿಯಾನಿ ಜೈಲ್ ಸಿಂಗ್ ಅವರು ರಾಷ್ಟ್ರೀಯ ಸಮಗ್ರತೆ ಪ್ರಶಸ್ತಿ ನೀಡಿ ಗೌರವಿಸಿದರು. ಗುಲ್ಬರ್ಗ ವಿಶ್ವವಿದ್ಯಾನಿಲಯವು ಅವರಿಗೆ ಗೌರವ ಡಾಕ್ಟರ್ ಆಫ್ ಲಿಟರೇಚರ್ ಪದವಿಯನ್ನು ನೀಡುವ ಮೂಲಕ ಅವರ ಅಸಾಧಾರಣ ಕೊಡುಗೆಗಳನ್ನು ಗುರುತಿಸಿದೆ. ಹೀಗೆ ಅವರಿಗೆ ಅನೇಕ ಪ್ರಶಸ್ತಿಗಳಿಂದ ಗೌರವಿಸಲಾಯಿತು.

**ಏಪ್ರಿಲ್ 22 1999 ರಂದು ನಮ್ಮನ್ನು ಅಗಲಿದರು:** ಶತಾಯುಷಿ ಶ್ರೀ ತಮ್ಮ 109 ವರ್ಷ ಕಾಲ ಸುದೀರ್ಘ ಸೇವೆ ಈ ಭಾಗದ ಜನರಿಗೆ ನೀಡಿದರು, ಇವರ ಮೋಕ್ಷ ಕಾರ್ಯಕ್ಕೆ ರಾಜ್ಯದ ಹೆಸರಾಂತ ಸ್ವಾಮೀಜಿಗಳು ಸಾಕ್ಷಿಯಾಗಿದ್ದರು. ಹೀಗೆ ಈ ಭಾಗದಲ್ಲಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಮಾನತೆಗಾಗಿ, ಈ ಭಾಗದ ಅಭಿವೃದ್ಧಿಗಾಗಿ, ಸ್ವಂತ ಕಲ್ಲು ಕಲಸಿ ಶಾಲೆ ಕಟ್ಟಿರುವ ಕಾಯಕ ಜೀವಿ, ಮುಷ್ಠಿ ಫಂಡ್ ನಿಂದ ಬಡವರಿಗೆ ಶಿಕ್ಷಣ ನೀಡಿದ, ನಿಜಾಂ ಆಳ್ವಿಕೆಯಲ್ಲಿ ಉರ್ದು ದಬ್ಬಾಳಿಕೆ ನಡುವೆ ಕನ್ನಡವನ್ನು ಉನ್ನ ಬಡಿಸಿದ ನಡೆದಾಡುವ ದೇವರಾಗಿ ಎಲ್ಲರ ಮನಸಿನಲ್ಲಿ ಮನೆ ಮಾಡಿದ್ದಾರೆ.

ಶ್ರೀಗಳು ಕನಸು ಕಂಡ ಸಮಾಜ ಇಂದು ಎಷ್ಟರ ಮಟ್ಟಿಗೆ ಸಾಧನೆ ಮಾಡಿದೆ ಎಂದರೆ ಸ್ವರ್ಗದಲ್ಲಿ ಇರುವ ಶ್ರೀಗಳು ತುಂಬಾ ಖುಷಿ ಪಡುತ್ತಾರೆ, ಶ್ರೀಗಳ ಹೆಸರನ್ನು ಅಜರಾಮರವಾಗಿ ಇಡಲು ಪ್ರಯತ್ನವಾಗುತ್ತಿವೆ, ಅವರ ಹೆಸರಿಂದ ಎಲ್ಲಿಂದ ಎಲ್ಲಿವರಿಗೆ ಬೆಳದ ಸಮಾಜ, ಗಡಿ ಭಾಗ ಕಮಲನಗರದಲ್ಲಿ ನಿಜಾಮ ಆಳ್ವಿಕೆಯಲ್ಲಿ ಕನ್ನಡ ಬೆಳಿಸಿದ ನೆಲದಲ್ಲಿ ಸ್ವತಂತ್ರವಾಗಿ ಮುಕ್ಕಾಲು, ಗಡಿ ಪ್ರದೇಶದಲ್ಲಿ ಕನ್ನಡ ಬೆಳವಣಿಗೆ ಕುಂಟಿತಗೊಂಡಿದೆ, ಶ್ರೀಗಳು ತಮ್ಮ ಚಲುವಳಿ ಪ್ರಾರಂಭಿಸಿದ ಹೋರಾಟಕ್ಕೆ ಮತ್ತೆ ಜೀವ ತುಂಬಿ ಅವರ ಕನಸನ್ನು ಎತ್ತರಕ್ಕೆ ಕೊಂಡೋಯುವ ಜವಾಬ್ದಾರಿ ನಾವು ಮರೆಯಬಾರದು.




## ಕಮಲನಗರದಲ್ಲಿ ಚನ್ನಬಸವೇಶ್ವರ ಜಾತ್ರಾ ಮಹೋತ್ಸವ ಇಂದು



**ಕಮಲನಗರ:** ಪಟ್ಟಣದ ಲಿಂಗೈಕ್ಯ ಡಾ.ಚನ್ನಬಸವ ಪಟ್ಟದ್ದೇವರು ಅವರ ಜನ್ಮಭೂಮಿಯಾದ ಕಮಲನಗರದ ಶಾಖಾ ಮಠದಲ್ಲಿ 136ನೇ ಜಯಂತೋತ್ಸವ ಅಂಗವಾಗಿ ಚನ್ನಬಸವೇಶ್ವರ ಜಾತ್ರಾ ಮಹೋತ್ಸವ ಹಾಗೂ ಡಾ. ಚೆನ್ನಬಸವ ಪಟ್ಟದ್ದೇವರ ಕನ್ನಡ ರಥೋತ್ಸವ ಬಹು ಸಡಗರ ಸಂಭ್ರಮದಿಂದ ಶುಕ್ರವಾರ ಆಚರಿಸಲಾಗುತ್ತಿದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷ ಶಿವಕುಮಾರ ಜುಲ್ಫೆ ತಿಳಿಸಿದ್ದಾರೆ.

ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ।ಬಸವಲಿಂಗಪಟ್ಟದ್ದೇವರು, ಭಾಲ್ಕಿ ಹಿರೇಮಠ ಸಂಸ್ಥಾನ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮೆರವಣಿಗೆ ನಡೆಯಲಿದೆ.ದಾರಿ ಉದ್ದಕ್ಕೂ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಗುವುದು.

ತದನಂತರ ವೇದಿಕೆ ಕಾರ್ಯಕ್ರಮ ಗಣ್ಯರಿಂದ ಉದ್ಘಾಟಿಸಲಾಗುವುದು.

ಹೀಗಾಗಿ ಕಮಲನಗರ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಬಸವ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ರಥೋತ್ಸವದ ಉತ್ಸವದಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಮಾಡಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಪೂಜ್ಯ ಲಿಂ. ಡಾ. ಚನ್ನಬಸವ ಪಟ್ಟದ್ದೇವರ ಹೆಸರಲ್ಲಿ ಅವರು ಹುಟ್ಟೂರಾದ ಕಮಲನಗರನಲ್ಲಿ ಅವರು ಜನ್ಮದಿನದ ಅಂಗವಾಗಿ ಅವರ ಸಾಮಾಜಿಕ ಕಳಕಳಿಯನ್ನು ಸ್ಮರಿಸಲು ಯುವಕರು ರಕ್ತದಾನ ಮಾಡಿ, ಸಾಮಾಜಿಕ ಸೇವೆಯಲ್ಲಿ ತೊಡಗಿಕೊಳ್ಳುವರು.



ಪೂಜ್ಯ ಲಿಂ. ಡಾ. ಚನ್ನಬಸವ ಪಟ್ಟದ್ದೇವರ ಹೆಸರಲ್ಲಿ ಅವರು ಹುಟ್ಟೂರಾದ ಕಮಲನಗರನಲ್ಲಿ ಅವರು ಜನ್ಮದಿನದ ಪ್ರಯುಕ್ತ ಕನ್ನಡ ರಥೋತ್ಸವ ನಡೆಯಿತ್ತದೆ. ಈ ಕಾರ್ಯಕ್ರಮದಲ್ಲಿ ಕಮಲನಗರ ಮತ್ತು ಸುತ್ತಲಿನ ಹಳ್ಳಿಯ ಜನ ಸೇರಿವರು.










Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)